

ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 33 | ಆಗಸ್ಟ್ 9–15, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com









ಒಲಂಪಿಕ್‌ನಲ್ಲಿ ಭಾರತ 'ವಿಶ್ವಗುರು' ಆದೀತೆ?



ಆಯಕಟ್ಟಿನ ಖಾತೆಗಳಿಗಾಗಿ ಮಂತ್ರಿಗಳ ಅಸಹ್ಯ ಪೈಪೋಟಿ

ಮಳೆಯಿಂದ ಅಸ್ತವ್ಯಸ್ತಗೊಂಡ ರಾಜ್ಯದ ಜನ



ಒಬಿಸಿ ಮೀಸಲಾತಿಯ "ಮೈಲಿಗಲ್ಲು!" ನ್ಯಾಯಾಂಗ ನಿಂದನೆಯ ಭಯದೆದುರು



9 ಆಗಸ್ಟ್
ಭಾರತ ಉಳಿಸಿ

ಸಂಸತ್ತು ತನ್ನ ಹೊಣೆಗಾರಿಕೆ ನಿಭಾಯಿಸದಂತೆ ಅಡ್ಡಿಪಡಿಸುವುದನ್ನು ಮೋದಿ ಸರಕಾರ ನಿಲ್ಲಿಸಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಈ ಬಿಜೆಪಿ ಸರಕಾರ ಸಂಸತ್ತು ತನ್ನ ಹೊಣೆಗಾರಿಕೆಯನ್ನು ನಿಭಾಯಿಸದಂತೆ ಅಡ್ಡಿಯುಂಟು ಮಾಡುತ್ತಿದೆ, ಮತ್ತು ದುಡಿಯುವ ಜನಗಳ ಜೀವನ್ಮರಣ ಪ್ರಶ್ನೆಗಳನ್ನು ಕುರಿತಂತೆ ಶಾಸನಗಳನ್ನು ರಚಿಸದಂತೆ ಅದನ್ನು ದುರ್ಬಲಗೊಳಸುತ್ತಿದೆ. ಇದು ನಿಲ್ಲಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಸರಕಾರೀ ಪ್ರಾಯೋಜಿತ ಅಡೆ–ತಡೆಗಳಿಂದ ಉಂಟು ಮಾಡಿದ ಗದ್ದಲದ ನಡುವೆ ಕೇಂದ್ರ ಸರಕಾರ ಮಹತ್ವದ ಶಾಸನಗಳನ್ನು ಪಾಸು ಮಾಡಿಸಿಕೊಳ್ಳುತ್ತಿದೆ ಎಂದು ಅದು ದೂರಿದೆ.

ಜುಲೈ 31ರಂದು ಸಭೆ ಸೇರಿದ ಪೊಲಿಟ್‌ಬ್ಯುರೊ ಮತ್ತೆ ಏರುತ್ತಿರುವ ಕೊವಿಡ್ ಸೋಂಕಿನ ಪ್ರಮಾಣ, ಲಸಿಕೀಕರಣದಲ್ಲಿ ನಿಧಾನಗತಿ, ಪೆಗಸಸ್ ಗೂಢಚಾರಿಕೆ ತಂತ್ರಾಂಶದ ಮೇಲೆ ತನಿಖೆ ನಡೆಸುವ ವಿಷಯದಲ್ಲಿ ಮೊಂಡುತನದ ಪ್ರದರ್ಶನ, ಅಸ್ಸಾಂ–ಮಿಝೋರಾಂ ಸಶಸ್ತ್ರ ತಿಕ್ಕಾಟದ ಅಭೂತಪೂರ್ವ ಘಟನೆ, ಶೈಕ್ಷಣಿಕ ಸಂಸ್ಥೆಗಳ ಪುನರಾರಂಭಕ್ಕೆ ಕ್ರಮ ಹಾಗೂ ಮುಂದುವರೆಯುತ್ತಿರುವ ರೈತರ ಹೋರಾಟವನ್ನು ಚರ್ಚಿಸಿತು. ಸಭೆಯ ನಂತರ ಅದು ಹೊರಡಿಸಿರುವ ಪತ್ರಿಕಾ ಪ್ರಕಟಣೆ ಈ ಕೆಳಗಿನಂತಿದೆ:

ಕೊವಿಡ್ ಮಹಾಸೋಂಕು

ಅಧಿಕೃತ ಮಾಹಿತಿಗಳು ಕೂಡ ಸರಾಸರಿ ಕೊವಿಡ್ ಪಾಸಿಟಿವ್ ದರಗಳು ಏರುತ್ತಿವೆ ಎಂಬುದನ್ನು ತೋರಿಸುತ್ತಿವೆ. ಇದು ಒಂದು ಅನರ್ಥಕಾರೀ ಮೂರನೇ ಅಲೆಯ ಹಂತ ತಲುಪದಂತೆ ತಡೆಯಲು ಲಸಿಕೆ ಹಾಕುವ ದರವನ್ನು ಹಲವು ಪಟ್ಟು ಹೆಚ್ಚಿಸಲೇ ಬೇಕಾಗಿದೆ. ಇದು ವರೆಗೆ ವಯಸ್ಕರಲ್ಲಿ ಕೇವಲ 10.83% ಮಂದಿ ಪೂರ್ಣವಾಗಿ ಲಸಿಕೆ ಪಡೆದಿದ್ದಾರೆ. ಲಸಿಕೆಗಳ ಕೊರತೆಯಿದೆ ಎಂದು ಪ್ರತಿಯೊಂದು ರಾಜ್ಯ ಸರಕಾರವೂ ವರದಿ ಮಾಡಿದೆ. ಕೇಂದ್ರ ಸರಕಾರದಿಂದ ಖರೀದಿ ನಿಧಾನವಾಗಿದೆ. ಅದು ಲಸಿಕೆ ಲಭ್ಯತೆಯ ಬಗ್ಗೆ ಸಂಸತ್ತಿಗೆ ಒಂದೇ ದಿನದಲ್ಲಿ ಮೂರು ಪರಸ್ಪರ ವಿರುದ್ಧವಾದ ಮಾಹಿತಿಗಳನ್ನು ಕೊಟ್ಟಿದೆ.

ಮೋದಿ ಸರಕಾರ ಜಗತ್ತಿನ ಎಲ್ಲೆಡೆಗಳಿಂದ ಲಸಿಕೆಗಳನ್ನು ಖರೀದಿಸಬೇಕು ಮತ್ತು ತಕ್ಷಣವೇ ದೇಶಾದ್ಯಂತ ಒಂದು ಉಚಿತ ಸಾರ್ವತ್ರಿಕ ಸಾಮೂಹಿಕ ಲಸಿಕೀಕರಣವನ್ನು ಆರಂಭಿಸಬೇಕು.

ಮಹಾಸೋಂಕು ಮುಂದುವರಿಯುತ್ತಿರುವಾಗಲೇ ಮತ್ತು ವಿವಿಧ ಲಾಕ್‌ಡೌನುಗಳು ನಡೆಯುತ್ತಿರುವಾಗಲೇ ಕೇಂದ್ರ ಸರಕಾರ ಜನಗಳ ಜೀವನಾಧಾರಗಳ ಮೇಲೆ ಪ್ರಹಾರಗಳನ್ನು ಮುಂದುವರೆಸುತ್ತಲೇ ಇದೆ. ಇದರಿಂದಾಗಿ ನಿರುದ್ಯೋಗ ನಾಗಾಲೋಟ ಹೂಡಿದೆ. ಪ್ರತಿದಿನ ಇಂಧನ ಬೆಲೆಗಳಲ್ಲಿ ಏರಿಕೆ ಒಟ್ಟಾರೆಯಾಗಿ ಹಣದುಬ್ಬರದ ಸುರುಳಿಯನ್ನು ಹರಿಯ ಬಿಟ್ಟಿದೆ. ಅದು ಜನಗಳ ಜೀವನಾಧಾರಗಳನ್ನೇ ನುಂಗಿ ಹಾಕುತ್ತಿದೆ, ಹಸಿವು ಮತ್ತು ಅಪೌಷ್ಟಿಕತೆಯನ್ನು ಹೆಚ್ಚಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಮೋದಿ ಸರಕಾರ ತಕ್ಷಣವೇ ಆದಾಯ ತೆರಿಗೆ ತೆರುವ ವ್ಯಾಪ್ತಿಯಲ್ಲಿರದ ಎಲ್ಲ ಕುಟುಂಬಗಳಿಗೆ 7500ರೂ. ನೇರ ನಗದು ವರ್ಗಾವಣೆ ಮಾಡಬೇಕು ಮತ್ತು ಅಗತ್ಯವಿರುವ ಎಲ್ಲರಿಗೂ ಉಚಿತ ಆಹಾರ ಕಿಟ್‌ಗಳನ್ನು ಹಂಚಬೇಕು ಎಂಬ ತನ್ನ ಆಗ್ರಹವನ್ನು ಪುನರುಚ್ಚರಿಸಿದೆ.

ಪೆಗಸಸ್: ಬಿಜೆಪಿ ಸರಕಾರ ಸಂಸತ್ತನ್ನು ಭಂಗಪಡಿಸುತ್ತಿದೆ

ಮೋದಿ ಸರಕಾರ ಪೆಗಸಸ್ ಗೂಢಚಾರಿಕೆ ತಂತ್ರಾಂಶದ ಕಣ್ಗಾವಲಿನ ಪ್ರಶ್ನೆಯನ್ನು ಚರ್ಚಿಸಲು ಮೊಂಡುತನದಿಂದ ನಿರಾಕರಿಸುತ್ತಿರುವುದು ಸಂಸತ್ತಿನ ಕಲಾಪಗಳಿಗೆ ಭಂಗ ತರುತ್ತಿದೆ. ಅದಕ್ಕಿಂತ ಮಹತ್ವದ ಸಂಗತಿಯೆಂದರೆ, ಸರಕಾರ ಸತ್ಯವನ್ನು ಹೇಳ ಬಯಸುತ್ತಿಲ್ಲ, ಸಂವಿಧಾನ ವಿಧಿಸಿರುವಂತೆ ಸಂಸತ್ತಿಗೆ ಜವಾಬ್ದಾರಿಯಾಗಿರ ಬಯಸುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ. ಪ್ರಧಾನಿ ಮೋದಿಯವರು ಸರಕಾರ ಅಥವ ಅದರ ಯಾವುದೇ ಸಂಸ್ಥೆ ರಾಜಕೀಯ ಮುಖಂಡರಿಂದ ಹಿಡಿದು ಪತ್ರಕರ್ತರು, ನ್ಯಾಯಾಂಗದ ಅಧಿಕಾರಿಗಳು, ಮಾಜಿ ಸಿಬಿಐ ಮುಖ್ಯಸ್ಥರು, ಮಾಜಿ ಚುನಾವಣಾ ಆಯುಕ್ತರು ಮುಂತಾದವರ ವರೆಗೆ ವ್ಯಕ್ತಿಗಳ ಮೇಲೆ ಗೂಢಚಾರಿಕೆ ನಡೆಸಲು ಇಸ್ರೇಲೀ ಎನ್‌ಎಸ್‌ಒ ದ ಶಸ್ತ್ರ ದರ್ಜೆಯ ಪೆಗಸಸ್ ಗೂಢಚಾರಿಕೆ ತಂತ್ರಾಂಶವನ್ನು ಬಳಸಲು ತೊಡಗಿಸಿದೆಯೇ ಎಂಬುದಕ್ಕೆ ಉತ್ತರ ನೀಡಲು ನಿರಾಕರಿಸುತ್ತಿದ್ದಾರೆ. ಇದು ಅನಿಷ್ಟಕಾರಿ. ಈ ದಾಳಿ ಖಾಸಗಿತ್ವದ ಮೂಲಭೂತ ಹಕ್ಕಿನ ಉಲ್ಲಂಘನೆ ಮಾತ್ರವೇ ಅಲ್ಲ, ಒಂದು ಪ್ರಜಾಪ್ರಭುತ್ವದಲ್ಲಿ ಮಹತ್ವದ ತಪಾಸಣೆ ಮತ್ತು ಸಮತೋಲನ ಕಾಪಾಡುವ ಸಂವಿಧಾನಿಕ ಕರ್ತವ್ಯಗಳನ್ನು ನಿಭಾಯಿಸುವ ಸಂಸ್ಥೆಗಳ ಮೇಲಿನ ದಾಳಿಯೂ ಆಗಿದೆ.

ತಕ್ಷಣವೇ ಸತ್ಯವನ್ನು ಸ್ಥಾಪಿಸಲು ಮತ್ತು ತಪ್ಪಿತಸ್ಥರನ್ನು ದಂಡಿಸಲು ಒಂದು ಉನ್ನತ ಮಟ್ಟದ ನ್ಯಾಯಾಂಗ ತನಿಖೆಯನ್ನು ಸುಪ್ರಿಂ ಕೋರ್ಟಿನ ಉಸ್ತುವಾರಿಯಲ್ಲಿ ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಪುನರುಚ್ಚರಿಸಿದೆ.

ಅಸ್ಸಾಂ –ಮಿಝೋರಾಂ ತಿಕ್ಕಾಟ

ಎರಡು ನೆರೆಕರೆ ರಾಜ್ಯಗಳು, ಅಸ್ಸಾಂ ಮತ್ತು ಮಿಝೋರಾಂ ಸಶಸ್ತ್ರ ತಿಕ್ಕಾಟಗಳು ಮತ್ತು ವೈಷಮ್ಯದಲ್ಲಿ ತೊಡಗಿರುವುದು ಹಿಂದೆಂದೂ ಸಂಭವಿಸಿರದ ಸಂಗತಿ. ಇದು ಕೇಂದ್ರ ಸರಕಾರದ ಮತ್ತು ಗೃಹ ಮಂತ್ರಾಲಯದ ಸಂಪೂರ್ಣ ವಿಫಲತೆಯಾಗಿದೆ. ಅದಕ್ಕಿಂತಲೂ ಕೆಟ್ಟ ಸಂಗತಿಯೆಂದರೆ, ಇದು ಗೃಹ ಮಂತ್ರಿಗಳು ಅಲ್ಲಿಗೆ ಹೋಗಿ ತಾನೇ ಕರೆದ ಎಲ್ಲ ಈಶಾನ್ಯ ರಾಜ್ಯಗಳು ಮತ್ತು ಅಲ್ಲಿನ ಅಧಿಕಾರಿಗಳ ಸಭೆಯಲ್ಲಿ ಭಾಗವಹಿಸಿದ

ಪುಟ 14 ನೋಡಿ

ದಿಲ್ಲಿಯಲ್ಲಿ ದಲಿತ ಬಾಲಕಿಯ ಮೇಲೆ ಅತ್ಯಾಚಾರ, ಕೊಲೆ ಮತ್ತು ಬಲವಂತ ದಹನ

“ಮಗುವಿಗೆ ನ್ಯಾಯದ ಸಂದೇಶ ಗಟ್ಟಿಯಾಗಿ, ಬಲಯುತವಾಗಿ ಹೋಗಬೇಕಾಗಿದೆ” –ಗೃಹಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ



ದೇಶದ ರಾಜಧಾನಿ ದಿಲ್ಲಿಯ ‘ಹೈ ಸೆಕ್ಯುರಿಟಿ’ ಎಂದರೆ, ಅತ್ಯುನ್ನತ ಭದ್ರತೆ ಇರುವ ದಂಡು ಪ್ರದೇಶದಲ್ಲಿ 9 ವರ್ಷದ ದಲಿತ ಬಾಲಕಿಯ ಮೇಲೆ ಅತ್ಯಾಚಾರ, ಕೊಲೆ, ಅಲ್ಲದೆ ಬಲವಂತದಿಂದ ಸುಟ್ಟು ಹಾಕಿರುವ ಭೀಷಣ ಸುದ್ದಿ ಬಂದಿದೆ. ಜತೆಗೆ ಇದರಲ್ಲಿ ದಿಲ್ಲಿ ಪೋಲೀಸ್ ಪಾತ್ರವೂ ಆಘಾತಕಾರಿಯಾಗಿದೆ ಎಂದೂ ತಿಳಿದು ಬಂದಿದೆ. ಆದರೂ, ಈ ದಿಲ್ಲಿ ಪೋಲೀಸ್ ನೇರವಾಗಿ ಭಾರತದ ಗೃಹಮಂತ್ರಿಗಳ ಅಡಿಯಲ್ಲಿ ಇದ್ದರೂ, ಅವರು ಈ ವಿಷಯದಲ್ಲಿ ಮಧ್ಯಪ್ರವೇಶಿಸಿರುವ ಸುದ್ದಿ ಬಂದಿಲ್ಲ. ಇದು ನಿಜವಾಗಿಯೂ ಆಘಾತಕಾರಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಗೃಹಮಂತ್ರಿಗಳಿಗೆ ಬರೆದ ಪತ್ರದಲ್ಲಿ ಖೇದ ವ್ಯಕ್ತಪಡಿಸಿದ್ದಾರೆ. ಈ ಪ್ರಕರಣದಲ್ಲಿ ನ್ಯಾಯ ಸಿಗುವಂತೆ ಖಾತ್ರಿಗೊಳಿಸಿ, ಆ ಮಗುವಿಗೆ ನ್ಯಾಯದ ಸಂದೇಶ ಗಟ್ಟಿಯಾಗಿ, ಬಲಯುತವಾಗಿ ಹೋಗಬೇಕಾಗಿದೆ ಎಂದು ಅವರು ತಮ್ಮ ಪತ್ರದಲ್ಲಿ ಗೃಹಮಂತ್ರಿಗಳನ್ನು ಕೋರಿದ್ದಾರೆ.

“ಅವಳು ಸ್ಮಶಾನಗ್ರಹದಲ್ಲಿದ್ದ ಕೂಲರ್‌ನಲ್ಲಿ ನೀರು ತರಲು ಹೋಗಿದ್ದಳು. ಬಹಳ ಸಮಯವಾದರೂ ಹಿಂದೆ ಬರದ್ದರಿಂದ ಹುಡುಕಿ ಹೋದೆ. ಮಗು ಸತ್ತು ಬಿದ್ದಿದ್ದಳು. ಅವಳ ತುಟಿ ಹರಿದಿತ್ತು. ನಾಲಿಗೆ ನೀಲಿಯಾಗಿತ್ತು. ಕಣ್ಣು ತೆರೆದುಕೊಂಡೇ ಇತ್ತು. ಕೂಲರ್‌ನಿಂದ ನೀರು ತಗೊಳ್ಳುವಾಗ ವಿದ್ಯುತ್ ಶಾಕ್ ತಗಲಿ ಸತ್ತಿದ್ದಾಳೆ ಎಂದು ಸ್ಮಶಾನಗೃಹದ ಪೂಜಾರಿ ಹೇಳಿದ”–ಇದು ಬಾಲಕಿಯ ತಾಯಿ ಬೃಂದಾ ಕಾರಟ್ ರವರ ನೇತೃತ್ವದ ಸಿಪಿಐ(ಎಂ) ನಿಯೋಗ ಬಾಲಕಿಯ ಪರಿವಾರದವರನ್ನು ಆಗಸ್ಟ್ 4ರಂದು ಭೇಟಿ ಮಾಡಿದಾಗ ತಿಳಿಸಿದ ಸಂಗತಿ. ಪೋಲಿಸರನ್ನು ಕರೆಸಬೇಡ, ಅದರಿಂದ ತೊಂದರೆಯಾಗ್ತದೆ ಎಂದ ಪೂಜಾರಿ ಗೇಟಿಗೆ ಬೀಗ ಹಾಕಿದ್ದು ಮಾತ್ರವಲ್ಲ, ತಾಯಿ ಅತ್ತು–ಕರೆದು, ಕೂಗಿ–ಕೂಗಿ ಹೇಳುತ್ತಿದ್ದರೂ ಮಗಳ ಹೆಣವನ್ನು ಆ ಪೂಜಾರಿ ಮತ್ತು ಸಹಚರರು ಸುಟ್ಟು ಬಿಟ್ಟರು.

ಈ ಬಾಲಕಿಯ ತಾಯಿ ಮತ್ತು ತಂದೆ ಕಸಸಂಗ್ರಹಿಸುವ ಕೆಲಸ ಮಾಡುತ್ತಿರುವವರು.ಈ ಭೇಟಿಯ ನಂತರ ಗೃಹಮಂತ್ರಿ ಅಮಿತ್ ಷಾರವರಿಗೆ ಬೃಂದಾ ಕಾರಟ್ ಅವರು ಬರೆದಿರುವ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

“ದಿಲ್ಲಿ ಕಂಟೋನ್ಮೆಂಟ್ ಪ್ರದೇಶದ ಪುರಾನಾ ನಂಗಲ್‌ಗಾಂವ್‌ನಲ್ಲಿ ಒಂಭತ್ತು ವರ್ಷದ ದಲಿತ ಬಾಲಕಿಯ ಶಂಕಿತ ಅತ್ಯಾಚಾರ ಮತ್ತು ಕೊಲೆಯ ವಿಷಯದತ್ತ ನಿಮ್ಮ ಗಮನವನ್ನು ಸೆಳೆಯಲು ಮತ್ತು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಕೋರಿ ಈ ಪತ್ರ. ಇದು ನಡೆದದ್ದು ಭಾನುವಾದ ಆಗಸ್ಟ್ 1, 2021ರಂದು ಸುಮಾರು ಸಾಯಂಕಾಲ 5ರಿಂದ 5.30ರ ವೇಳೆಯಲ್ಲಿ. ನಾನು ಮತ್ತು ನನ್ನ ಸಹಯೋಗಿಗಳಾದ ನಾಥು ಪ್ರಶಾದ್, ಆಶಾ ಶರ್ಮ(ದಿಲ್ಲಿ ಸಿಪಿಐಎಂ ಕಾರ್ಯದರ್ಶಿ ಮಂಡಳಿ ಸದಸ್ಯರು) ಮತ್ತು ಇತರರೊಂದಿಗೆ ಇಂದು ಬಾಲಕಿಯ ತಾಯಿಯನ್ನು ಭೇಟಿಯಾದೆವು. ಕಾಲನಿಯ ನಿವಾಸಿಗಳನ್ನೂ ಭೇಟಿಯಾದೆವು. ಈ ಪ್ರಕರಣದಲ್ಲಿ ನಾಲ್ವರನ್ನು ಬಂಧಿಸಲಾಗಿದೆಯಾದರೂ, ಸದರ್ ಥಾನಾ ಕಂಟೋನ್ಮೆಂಟ್ ಏರಿಯಾದ ಪೋಲಿಸರ ಪಾತ್ರ ಆಘಾತಕಾರಿ ಎಂದೇ ಹೇಳಬೇಕಾಗುತ್ತದೆ.

ತಾಯಿ ಮಾನಸಿಕ ಆಘಾತದ ಸ್ಥಿತಿಯಲ್ಲಿದ್ದಾಗಲೇ ಕ್ರಿಮಿನಲ್‌ಗಳು ಮಗುವನ್ನು ಬಲವಂತದಿಂದ ದಹನ ಮಾಡಿದರು. ಬಾಲಕಿಯ ಸಮುದಾಯದವರೂ ಇದರಿಂದ ರೇಗಿ ಹೋಗಿದ್ದಾರೆ. ಏಕೆಂದರೆ ಸಂಪ್ರದಾಯದ ಪ್ರಕಾರ ಸಣ್ಣ ಹುಡುಗಿಯರ ಹೆಣವನ್ನು ಸುಡುವುದಿಲ್ಲ, ಹೂಳುತ್ತಾರೆ. ಆದ್ದರಿಂದ ತಾಯಿ ದಹನಕ್ಕೆ ಒಪ್ಪಿದ್ದಳು ಎಂಬ ಸುಳ್ಳನ್ನು ಹರಡಿಸುತ್ತಿರುವುದು ಕ್ರಿಮಿನಲ್ ಸಂಗತಿಯೇ ಆಗಿದೆ, ಇದು ಹಾಥ್ರಸ್ ಪ್ರಕರಣದಲ್ಲಿ ನಡೆದಿರುವುದನ್ನು ನೆನಪಿಸಿದೆ. ಅಲ್ಲಿ ಪೋಲೀಸರೇ ಬಲಿಯಾದವಳನ್ನು ದಹನ ಮಾಡಿದರು. ಇಲ್ಲಿ ಪೋಲೀಸರು ಸಮಯಕ್ಕೆ ಸರಿಯಾಗಿ ಕ್ರಿಯೆಗಿಳಿಯಲು ನಿರಾಕರಿಸಿದರು. ಎರಡನೆಯದಾಗಿ, ಆಘಾತದ ಸ್ಥಿತಿಯಲ್ಲಿದ್ದ ಕುಟುಂಬದವರಿಗೆ ನೆರವಾಗುವ ಬದಲು, ಪೋಲೀಸರು

ಪುಟ 14 ನೋಡಿ

ಪರಮಾಣು ವ್ಯವಹಾರ ಮತ್ತು ಎಡಪಕ್ಷಗಳು: ಮಾಜಿ ವಿದೇಶಾಂಗ ಕಾರ್ಯದರ್ಶಿಗಳ ಟಿಪ್ಪಣಿ ಆಧಾರಹೀನ–ಯೆಚುರಿ

ಭಾರತ–ಅಮೆರಿಕ ಪರಮಾಣು ವ್ಯವಹಾರಕ್ಕೆ ಎಡಪಕ್ಷಗಳ ವಿರೋಧದಲ್ಲಿ ಚೀನಾ ಪ್ರಭಾವ ಬೀರಿತ್ತು ಎಂಬ ಮಾಜಿ ವಿದೇಶಾಂಗ ಕಾರ್ಯದರ್ಶಿ ವಿಜಯ ಗೋಖಲೆಯವರ ಟಿಪ್ಪಣಿಗಳು ಆಧಾರಹೀನ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಈ ವ್ಯವಹಾರ ಕುರಿತ ಒಪ್ಪಂದ ಭಾರತದ ಸಾಮರಿಕ ಸ್ವಾಯತ್ತತೆಗೆ ಮತ್ತು ಸ್ವತಂತ್ರ ವಿದೇಶಾಂಗ ಧೋರಣೆಗೆ ಬಾಧಕವಾಗುತ್ತದೆ ಎಂಬ ಕಾರಣಕ್ಕೆ ಎಡಪಕ್ಷಗಳು ಅದನ್ನು ವಿರೋಧಿಸಿದವು. ಅದು ಭಾರತವನ್ನು ಒಂದು ಮಿಲಿಟರಿ ಮತ್ತು ಸಾಮರಿಕ ಮೈತ್ರಿಯಲ್ಲಿ ಒಳಗೊಳ್ಳಲಿಕ್ಕಾಗಿ ಅಮೆರಿಕ ಸಂಯುಕ್ತ ಸಂಸ್ಥಾನ ನಡೆಸಿದ ವ್ಯವಹಾರ, ಭಾರತದ ಇಂಧನ ಭದ್ರತೆಗೆ ಅದರಲ್ಲಿ ಯಾವುದೇ ನಿಜವಾದ ಮೌಲ್ಯ ಇರಲಿಲ್ಲ.

ಇದಾಗಿ ಒಂದು ದಶಕಕ್ಕಿಂತಲೂ ಹೆಚ್ಚು ಕಾಲವಾಗಿದ್ದು, ನಂತರದ ಘಟನೆಗಳು ಇದನ್ನು ದೃಢಪಡಿಸಿವೆ ಎಂದು ಯೆಚುರಿ ಹೇಳಿದ್ದಾರೆ. ಈ ವ್ಯವಹಾರದ ನಂತರ ದೇಶದ ನಾಗರಿಕ ಪರಮಾಣು ಇಂಧನ ಸಾಮರ್ಥ್ಯದಲ್ಲಿ ಒಂದು ಮೆಗಾವಾಟಿನಷ್ಟೂ ವಿಸ್ತರಣೆಯಾಗಿಲ್ಲ. ನಡೆದಿರುವುದೆಲ್ಲ ಒಂದೇ ಸಂಗತಿ– ಮಿಲಿಟರಿ ಸಂಬಂಧಗಳು ಘನಿಷ್ಟವಾಗಿ ಬಿಟ್ಟು ಭಾರತವು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಂದು ಅಡಿಯಾಳು ಮಿತ್ತನಾಯಿತಷ್ಟೇ.

ಎಡಪಕ್ಷಗಳು ಈ ನಲುವು ತಳೆದದ್ದು ಭಾರತದ ಸಾರ್ವಭೌಮತೆ ಮತ್ತು ಸಾಮರಿಕ ಸ್ವಾತಂತ್ರ್ಯದ ಬಗ್ಗೆ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು. ಚೀನಾಕ್ಕೂ ಇದಕ್ಕೂ ಏನೂ ಸಂಬಂಧವಿರಲಿಲ್ಲ. ಚೀನಾ ಅಂತಿಮವಾಗಿ ಪರಮಾಣು ಪೂರೈಕೆದಾರರ ಗುಂಪು(ಎನ್.ಎಸ್.ಜಿ.) ಭಾರತಕ್ಕೆ ವಿನಾಯ್ತಿ ನೀಡಿದ್ದನ್ನು ಬೆಂಬಲಿಸಿದರೂ ಕೂಡ ಎಡಪಕ್ಷಗಳು ಇಂತಹ ನಲುವನ್ನು ತಳೆದವು ಎಂದು ಯೆಚುರಿ ನೆನಪಿಸಿದ್ದಾರೆ.

ವಿಜಯ ಗೋಖಲೆಯವರ ಚೀನಾ ಕುರಿತ ಪುಸ್ತಕದಲ್ಲಿ ಈ ವಿಷಯವನ್ನು ಕುರಿತ ಟಿಪ್ಪಣಿಗಳು ಸಂಪೂರ್ಣವಾಗಿ ಆಧಾರರಹಿತವಾಗಿವೆ ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು, ಆಗ ಪ್ರಧಾನ ಪ್ರತಿಪಕ್ಷವಾಗಿದ್ದ ಬಿಜೆಪಿ ಕೂಡ ಸಂಸತ್ತಿನಲ್ಲಿ ಪರಮಾಣು ವ್ಯವಹಾರವನ್ನು ವಿರೋಧಿಸಿತ್ತು ಎಂಬುದು ಬಹುಶಃ ಗೋಖಲೆಯವರಿಗೆ ತಿಳಿದಿಲ್ಲವೇನೋ ಎಂದು ಹೇಳಿದ್ದಾರೆ.

ಸಂಪಾದಕೀಯ

ಆಯಕಟ್ಟಿನ ಖಾತೆಗಳಿಗಾಗಿ ಮಂತ್ರಿಗಳ ಅಸಹ್ಯ ಪೈಪೋಟಿ

ಕೊನೆಗೂ ಬಸವರಾಜ್ ಬೊಮ್ಮಾಯಿ ರವರ ಸಚಿವ ಸಂಪುಟ ರಚನೆಯಾಗಿದೆ. ಯಡಿಯೂರಪ್ಪರವರ ಸಂಪುಟವನ್ನು ರಚಿಸಲು 25 ದಿನ ಕಾಯಿಸಿದ್ದ ಬಿಜೆಪಿ ವರಿಷ್ಠರು ಬೊಮ್ಮಾಯಿರವರ ಸಂಪುಟವನ್ನು ಒಂದೇ ವಾರದಲ್ಲಿ ರಚಿಸಿ ಅಚ್ಚರಿಯನ್ನುಂಟು ಮಾಡಿದ್ದಾರೆ. ಮುಖ್ಯಮಂತ್ರಿಯೂ ಸೇರಿದಂತೆ ಬೊಮ್ಮಾಯಿ ಸಂಪುಟದ ಒಟ್ಟು ಬಲ ಮೂವತ್ತು ಆಗಿದೆ. ನಾಲ್ಕು ಸ್ಥಾನಗಳನ್ನು ಖಾಲಿ ಉಳಿಸಿಕೊಳ್ಳಲಾಗಿದೆ. ತನ್ನ ಕಿರಿಯ ಮಗ ಬಿ. ವೈ. ವಿಜಯೇಂದ್ರಗೆ ಉಪಮುಖ್ಯಮಂತ್ರಿ ಸ್ಥಾನ ಹಾಗೂ ಆಯಕಟ್ಟಿನ ಖಾತೆಯನ್ನು ಕೊಡಬೇಕೆಂದು ಬಿಗಿಪಟ್ಟು ಹಾಕಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಂಡಾಯದ ಬೆದರಿಕೆಯನ್ನು ಒಡ್ಡಿದ್ದರು. ಬಸವರಾಜ ಬೊಮ್ಮಾಯಿ ಮೂಲಕ ತನ್ನ ಪುತ್ರನ ಪರವಾಗಿ ಪಕ್ಷದ ವರಿಷ್ಠರ ಮೇಲೆ ಯಡಿಯೂರಪ್ಪ ಒತ್ತಡ ಹೇರಿದ್ದರು. ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಯಡಿಯೂರಪ್ಪನವರ ಜೊತೆಗೆ ಮಾತನಾಡಿ ಯಡಿಯೂರಪ್ಪರವರನ್ನು ಸದ್ಯಕ್ಕೆ ಖೆಡ್ಡಾಕ್ಕೆ ಕೆಡವಲು ಯಶಸ್ವಿಯಾದರು. ಮುಂದಿನ ದಿನಗಳಲ್ಲಿ ವಿಜಯೇಂದ್ರಗೆ ಅವಕಾಶ ನೀಡುವ ಭರವಸೆಯಿಂದಾಗಿ ಯಡಿಯೂರಪ್ಪ ಯಾವ ದುಡುಕಿನ ನಿರ್ಧಾರಕ್ಕೆ ಮುಂದಾಗದೆ ಕಾದು ನೋಡಲು ನಿರ್ಧರಿಸಿದಂತೆ ಕಾಣುತ್ತದೆ.

ಬಿ.ಎಸ್. ಯಡಿಯೂರಪ್ಪರವರ ಕಿರಿಯ ಪುತ್ರ ವಿಜಯೇಂದ್ರ ಕುರಿತು ಮಾಜಿ ಮುಖ್ಯಮಂತ್ರಿ ತೋರುತ್ತಿರುವ ವ್ಯಾಮೋಹ ಅಸಹ್ಯವಾಗಿದೆ. ಇದುವರೆಗೂ ವಿಧಾನಸಭೆಗಾಗಲಿ ವಿಧಾನಪರಿಷತ್ತಿಗಾಗಲಿ ಜನರಿಂದ ಚುನಾಯಿತರಾದವರಲ್ಲ. ಅಪ್ಪನ ಆತುರತೆಗೆ ಮರುಳಾಗಿ ಅಧಿಕಾರ ಲಾಲಸನಾಗುವುದನ್ನು ಜನ ಮೆಚ್ಚಲಾರರು. ಅಪ್ಪನ ಮುಖ್ಯಮಂತ್ರಿ ಸ್ಥಾನವನ್ನು ದುರುಪಯೋಗ ಪಡಿಸುತ್ತಿದ್ದ ಆರೋಪಗಳು ಈಗಾಗಲೇ ಕೇಳಿಬಂದಿವೆ. ಅಪ್ಪನನ್ನು ಮುಖ್ಯಮಂತ್ರಿಯಾಗಿ ಮುಂದುವರಿಸುವಂತೆ ಪಕ್ಷದ ವರಿಷ್ಠರ ಮೇಲೆ ಮಠಾಧೀಶರನ್ನು ಅಣಿನೆರೆಸುವಲ್ಲಿ ವಿಜಯೇಂದ್ರರ ಪಾತ್ರ ಪ್ರಮುಖವಾಗಿತ್ತು ಎಂದು ಹೇಳಲಾಗುತ್ತದೆ. ಯಡಿಯೂರಪ್ಪ ಕುಟುಂಬದಲ್ಲಿ ಅನುವಂಶಿತ ರಾಜಕಾರಣ ಮೊಳಕೆಯೊಡೆಯುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ.

ಮಿತಿಮೀರಿದ ಪುತ್ರ ವ್ಯಾಮೋಹ ಕರ್ನಾಟಕದ ಬಿಜೆಪಿಗೆ ತಲೆನೋವು ತಂದಿದೆ. ತಾನು ಮುಖ್ಯಮಂತ್ರಿ ಸ್ಥಾನದಲ್ಲಿ ಇರುವಾಗಲೇ ತನ್ನ ಪುತ್ರ ವಿಜಯೇಂದ್ರನಿಗೆ ಸೂಕ್ತ ಸ್ಥಾನ ಕಲ್ಪಿಸಬೇಕೆಂಬುದು ಅವರ ಆಸೆಯಾಗಿತ್ತು. ತಾನು ಮುಖ್ಯಮಂತ್ರಿ ಆಗಿರುವಾಗಲೇ ಇದನ್ನು ಸಾಧಿಸಬೇಕೆಂಬ ಹಠ ಅವರದಾಗಿತ್ತು. ತಾನು ಮುಖ್ಯಮಂತ್ರಿ ಆಗಿರುವಾಗಲೇ ವರಿಷ್ಠರು ತನ್ನ ಮಾತಿಗೆ ಬೆಲೆ ಕೊಡದೆ ಇರುವಾಗ ತಾನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ ನಂತರ ತನ್ನ ಮಾತು ಯಾರು ಕೇಳುತ್ತಾರೆ ಎಂದು ಅವರು ಯೋಚಿಸುತ್ತಿದ್ದಂತೆ ಕಾಣುತ್ತದೆ. ಆದರೆ ವಿಜಯೇಂದ್ರ ಈ ಆರೋಪವನ್ನು ನಿರಾಕರಿಸುತ್ತಿದ್ದಾರೆ.

ಬೊಮ್ಮಾಯಿ ಸಚಿವ ಸಂಪುಟ ಪಕ್ಷದ ಕೇಂದ್ರ ವರಿಷ್ಠರ ಸೃಷ್ಟಿ ಆಗಿರುವುದು ಸ್ಪಷ್ಟವಾಗಿ ಕಾಡುತ್ತದೆ. 29 ಮಂತ್ರಿಗಳ ಪೈಕಿ 23 ಹಳೆಯ ಮುಖಗಳೇ. ಕೇವಲ ಆರು ಜನ ಹೊಸಬರಿಗೆ ಅವಕಾಶ ದೊರಕಿದೆ. ಸಂಪುಟ ಸೇರುವ ಹಲವು ಆಕಾಂಕ್ಷಿಗಳ ನಿರೀಕ್ಷೆ ಸುಳ್ಳಾಗಿದೆ. ಸಚಿವ ಸ್ಥಾನ ಗಳಿಂದ ವಂಚಿತರಾದ ಶಾಸಕರು ಮತ್ತು ಅವರ ಬೆಂಬಲಿಗರು ತೀವ್ರ ಅಸಮಾಧಾನಗೊಂಡಿದ್ದಾರೆ. ಕೆಲವು ಶಾಸಕರು ನೇರವಾಗಿ ತಮ್ಮ ಆಕ್ರೋಶವನ್ನು ಹೊರಹಾಕಿದ್ದಾರೆ. ಹಲವು ಶಾಸಕರ ಬೆಂಬಲಿಗರು ಬಿಜೆಪಿ ವರಿಷ್ಠರ ವಿರುದ್ಧ ಬಹಿರಂಗವಾಗಿ ಹರಿಹಾಯ್ದಿದ್ದಾರೆ. ಕೆಲವರು ಮುಖ್ಯಮಂತ್ರಿ ಬೊಮ್ಮಾಯಿ ವಿರುದ್ಧವೇ ಆರೋಪ ಮಾಡಿದ್ದಾರೆ. ಇದರ ಪರಿಣಾಮ ಏನಾಗಬಹುದು ಎಂಬುದು ಕುತೂಹಲಕಾರಿಯಾಗಿದೆ.

ನೂತನ ಸಚಿವರಿಗೆ ಖಾತೆ ಹಂಚಿಕೆ ಮಾಡುವುದು ಬೊಮ್ಮಾಯಿ ರವರಿಗೆ ಇನ್ನೊಂದು ತಲೆನೋವಾಗಿ ಪರಿಣಮಿಸಲಿದೆ. ಆಯಕಟ್ಟಿನ ಖಾತೆಗಳ ಮೇಲೆ ಎಲ್ಲಾ ಮಂತ್ರಿಗಳು ಕಣ್ಣಿಟ್ಟಿದ್ದಾರೆ. ಖಾತೆಗಳ ಹಂಚಿಕೆ ವಿಷಯದಲ್ಲೂ ಬೊಮ್ಮಾಯಿ ಸ್ವತಂತ್ರರಾಗಿರಲಾರರು. ವರಿಷ್ಠರ ಒಪ್ಪಿಗೆ ಪಡೆದು ಅಂತಿಮ ನಿರ್ಣಯ ಕೈಗೊಳ್ಳಬೇಕಾಗುವುದು. ಮುಖ್ಯಮಂತ್ರಿರವರ ತವರು ಜಿಲ್ಲೆಯಲ್ಲೇ ಅಸಮಾಧಾನ ಸ್ಫೋಟಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಒಟ್ಟಾರೆಯಾಗಿ ಅತೃಪ್ತ ಶಾಸಕರು ತಂಡಗಳನ್ನು ರಚಿಸಿಕೊಂಡು ಕಾರ್ಯನ್ಮುಖರಾಗುತ್ತಿದ್ದಾರೆ. ರಾಜ್ಯ ಬಿಜೆಪಿಯಲ್ಲಿ ಮಂತ್ರಿಗಳ ಖಾತೆ ಹಂಚಿಕೆ ಹಾಗೂ ಜಿಲ್ಲೆಗಳಿಗೆ ಉಸ್ತುವಾರಿ ನೇಮಕ ಮುಂತಾದ ವಿಷಯಗಳಲ್ಲಿ ಮುಂದಿನ ದಿನಗಳಲ್ಲಿ ಗೊಂದಲದ ಬೆಳವಣಿಗೆಗಳನ್ನು ಮತ್ತು ಅಶಿಸ್ತಿನ ವರ್ತನೆ ಯನ್ನು ನಿರೀಕ್ಷಿಸಬಹುದು. ಇದರಿಂದಾಗಿ ಅಧಿಕಾರಕ್ಕಾಗಿ, ಹಣ ಮಾಡುವುದಕ್ಕಾಗಿ ಬಿಜೆಪಿ ಇಂದು ಉಳಿಯಲಾರದು ಎಂಬುವುದು ನೂರಕ್ಕೆ ನೂರು ಸತ್ಯ. ಬಿಜೆಪಿ ಸಹ ಇತರ ಬಲಪಂಥೀಯ ಪಕ್ಷಗಳಂತೆ ಒಂದು ಲಾಭಕೋರ ರಾಜಕೀಯ ಪಕ್ಷ ಎಂಬುದರಲ್ಲಿ ಅನುಮಾನವಿಲ್ಲ. ಅದೊಂದು ಭಿನ್ನವಾದ ಜನಪರವಾದ ಪಕ್ಷ ಎಂಬುದು ಸುಳ್ಳು ಎನ್ನುವುದು ಇದರಿಂದ ಸಾಬೀತಾಗುತ್ತದೆ.

ವಿದ್ಯುತ್ ನೌಕರರ ಆಗಷ್ಟ 10 ರ ಕೆಲಸ ಸ್ಥಗಿತ ಮುಷ್ಕರಕ್ಕೆ ಸಂಯುಕ್ತ ಹೋರಾಟ – ಕರ್ನಾಟಕ ದ ಸಂಪೂರ್ಣ ಬೆಂಬಲ

ಸಂಯುಕ್ತ ಹೋರಾಟ– ಕರ್ನಾಟಕ ದ ರಾಜ್ಯ ಘಟಕದ ಕೋರ್ ಸಮಿತಿ ಸಭೆಯು 05 ಆಗಸ್ಟ್ 2021 ರಂದು ಶ್ರೀ ಬಡಗಲಪುರ ನಾಗೇಂದ್ರರವರ ಅಧ್ಯಕ್ಷತೆಯಲ್ಲಿ ನಡೆದು, ವಿದ್ಯುತ್ ತಿದ್ದುಪಡಿ ಮಸೂದೆ–2021 ನ್ನು ಪ್ರತಿರೋಧಿಸಿ ಅಖಿಲ ಭಾರತ ವಿದ್ಯುತ್ ನೌಕರರ ಹಾಗೂ ಇಂಜನೀಯರುಗಳ ಸಂಘಗಳ ಸಮನ್ವಯ ಸಮಿತಿ (NCCOEEE) ಕರೆಯ ಮೇರೆಗೆ, ದೇಶದಾದ್ಯಂತ ಎಲ್ಲಾ ವಿದ್ಯುತ್ ಕಂಪನಿ ಹಾಗೂ ಸಂಸ್ಥೆಗಳ ನೌಕರರು ಮತ್ತು ಇಂಜನೀಯರುಗಳು ಆಗಷ್ಟ 10, 2021 ರಂದು 24 ತಾಸುಗಳ ಕಾಲ ತಮ್ಮ ಕೆಲಸವನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸಲಿದ್ದಾರೆ. ಸದರಿ ಮುಷ್ಕರಕ್ಕೆ ಸಂಯುಕ್ತ ಹೋರಾಟ– ಕರ್ನಾಟಕ ರಾಜ್ಯ ಘಟಕ ಸಂಪೂರ್ಣ ಬೆಂಬಲವನ್ನು ಘೋಷಿಸಿದೆ.

ಅದಾಗಲೇ ಕಳೆದ ಆಗಷ್ಟ – ಸೆಪ್ಟಂಬರ್ ತಿಂಗಳಿನಿಂದಲೇ ದೇಶದಾದ್ಯಂತ ರೈತರು ಹಾಗೂ ಕಾರ್ಮಿಕರು, ನಾಗರೀಕರು ಕಾರ್ಪೋರೇಟ್ ಕಂಪನಿಗಳ ಲೂಟಿಗೆ ದೇಶದ ವಿದ್ಯುತ್ ಕ್ಷೇತ್ರವನ್ನು ತೆರೆಯುವ ಈ ಕರಾಳ ಮಸೂದೆಯನ್ನು ಕೇಂದ್ರ ಸರಕಾರ ಈ ಕೂಡಲೇ ವಾಪಾಸು ಪಡೆಯುವಂತೆ ಒತ್ತಾಯಿಸಿ ಹೋರಾಟದಲ್ಲಿ ತೊಡಗಿದ್ದಾರೆ. ಇದೀಗ ವಿದ್ಯುತ್ ಕಂಪನಿಗಳು ಹಾಗೂ ನಿಗಮ ಮುಂತಾದ ಸಂಸ್ಥೆಗಳ ನೌಕರರು ಮತ್ತು ಇಂಜನೀಯರುಗಳು ದೇಶವ್ಯಾಪಿಯಾಗಿ ಆ ಕರಾಳ ಕಾಯ್ದೆಗೆ ತೀವ್ರ ಪ್ರತಿರೋಧ ಒಡ್ಡಲು ಮುಂದಾಗಿರುವುದು ರೈತ ಚಳುವಳಿಗೆ ಆನೆ ಬಲ ಬಂದಂತಾಗಿದೆ.

ಇನ್ನಾದರೂ, ಕೇಂದ್ರ ಸರಕಾರ ದೇಶ ದ್ರೋಹಿಯಾದ ಹಾಗೂ ಕೃಷಿ ಹಾಗೂ ಕೈಗಾರಿಕಾಭಿವೃದ್ಧಿಯ ವಿರೋಧಿಯಾದ ಮತ್ತು ಸಾರ್ವಜನಿಕ ರಂಗದ ವಿದ್ಯುತ್ ಕಂಪನಿಗಳ ಖಾಸಗೀಕರಣವನ್ನ ಮತ್ತು ರೈತರ ಪಂಪ್ ಸೆಟ್ ಹಾಗೂ ಭಾಗ್ಯ ಜ್ಯೋತಿ ಮತ್ತು ಮನೆಗಳ ವಿದ್ಯುತ್ ಗೆ ಪ್ರೀ ಪೇಯ್ಡ್ (ಮುಂಗಡ ಹಣ ಪಡೆಯುವ) ಮೀಟರ್ ಅಳವಡಿಕೆಯ ಪ್ರಸ್ತಾಪಗಳಿರುವ ಕರಾಳ ವಿದ್ಯುತ್ ಮಸೂದೆಯನ್ನು ಈ ಕೂಡಲೇ ವಾಪಾಸು ಪಡೆಯುವಂತೆ ಸಂಯುಕ್ತ ಹೋರಾಟ–ಕರ್ನಾಟಕ ಬಲವಾಗಿ ಒತ್ತಾಯಿಸಿದೆ.

ಇದು ದೇಶದ ಕೃಷಿಯನ್ನು ಸರ್ವ ನಾಶಮಾಡಲಿದೆ, ಭಾಗ್ಯಜ್ಯೋತಿ ಬಳಕೆದಾರರನ್ನು ಕತ್ತಲಲ್ಲಿಡುತ್ತದೆ. ಸಣ್ಣ ಕೈಗಾರಿಕೆಗಳನ್ನು ಹೊಸಕಿ ಹಾಕುತ್ತದೆ ಅದೇ ರೀತಿ ಗ್ರಾಹಕರನ್ನು ಲೂಟಿಗೊಳಪಡಿಸಲಿದೆ.

ಸಂಯುಕ್ತ ಹೋರಾಟ–ಕರ್ನಾಟಕ ಎಲ್ಲಾ ಅಂಗ ಸಂಘಟನೆಗಳು ಮತ್ತು ಜಿಲ್ಲಾ ಹಾಗೂ ತಾಲೂಕಾ ಘಟಕಗಳು ವಿದ್ಯುತ್ ನೌಕರರ ಮುಷ್ಕರವನ್ನು ಬೆಂಬಲಿಸಿ ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಸಂಯುಕ್ತ ಹೋರಾಟ–ಕರ್ನಾಟಕ ರಾಜ್ಯ ಘಟಕ ಕರೆ ನೀಡಿದೆ.

ಬಿಬಿಎಂಪಿ ಆಸ್ತಿ ತೆರಿಗೆ ಬಾಕಿ – ದುಬಾರಿ ದಂಡ : ಸಿಪಿಐ(ಎಂ) ಖಂಡನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮಹಾನಗರ ವ್ಯಾಪ್ತಿಯ ಆಸ್ತಿಗಳ ತೆರಿಗೆ ಬಾಕಿಗೆ ದುಬಾರಿ ದಂಡ ವಿಧಿಸಿ ನೋಟಿಸ್ ನೀಡಿ ವಸೂಲಿ ಮಾಡಲು ಮುಂದಾಗಿರುವ ಕ್ರಮವನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಸಿಪಿಐ(ಎಂ) ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ತೀವ್ರವಾಗಿ ಖಂಡಿಸಿವೆ. 2016 17 ರಲ್ಲಿ ಮಾಡಲಾಗಿದ್ದ ವಲಯ ಪುನರ್ ವಿಂಗಡಣೆ ಆಧಾರಿತ ಆಸ್ತಿ ತೆರಿಗೆ ಪರಿಷ್ಕರಣೆ ಕುರಿತು ಅಗತ್ಯ ನೋಟಿಸ್ ಅನ್ನು ಆಸ್ತಿ ಮಾಲೀಕರಿಗೆ ನೀಡದೆ ಅವರಿಂದ ಹಿಂದಿನ ದರದಲ್ಲೇ ತೆರಿಗೆ ಜಮಾ ಮಾಡಿಕೊಂಡು 5 ವರ್ಷಗಳ ನಂತರ ಇದೀಗ ವ್ಯತ್ಯಾಸದ ತೆರಿಗೆ ಮೊತ್ತವನ್ನು ಬಾಕಿ ಎಂದು ಪರಿಗಣಿಸಿ ದುಬಾರಿ ದಂಡ ವಿಧಿಸಿ ವಸೂಲಿ ಮಾಡುತ್ತಿರುವುದು ಅಕ್ಷಮ್ಯವೆಂದು ಸಿಪಿಐ(ಎಂ) ವಿರೋಧ ವ್ಯಕ್ತಪಡಿಸಿದೆ.

ಕೋವಿಡ್ ಮೊದಲನೇ ಅಲೆ ಮತ್ತು ಎರಡನೇ ಅಲೆಯ ಸಾಂಕ್ರಾಮಿಕದಿಂದ ಮಹಾನಗರದ ಜನತೆ ಸಂತ್ರಸ್ತರಾಗಿದ್ದು ಲಾಕ್ಡೌನ್ನಿಂದಾಗಿ ಮತ್ತಷ್ಟು ಸಂಕಷ್ಟಕ್ಕೆ ಒಳಪಟ್ಟಿದ್ದಾರೆ. ಇಂತಹ ಸಂದರ್ಭದಲ್ಲಿ ಜನತೆಯ ನೆರವಿಗೆ ದಾವಿಸಬೇಕಿರುವ ಸರ್ಕಾರ ಮತ್ತು ಬಿಬಿಎಂಪಿ ಈ ಹಿಂದಿನ ಬಾಕಿ ನೆಪದಲ್ಲಿ ದುಬಾರಿ ದಂಡ ವಿಧಿಸುತ್ತಿರುವುದು ಜನತೆಯ ಗಾಯದ ಮೇಲೆ ಬರೆ ಎಳೆಯುವ ಕ್ರಮವಾಗಿದೆ. ಈಗಾಗಲೇ ಜನತೆಯು ಕೇಂದ್ರ ರಾಜ್ಯ ಬಿಜೆಪಿ ಸರ್ಕಾರಗಳ ಬೆಲೆ ಏರಿಕೆಯಿಂದ ಜೀವನ ನಡೆಸುವುದೇ ಕಷ್ಟ ಎಂಬ ಪರಿಸ್ಥಿತಿಯಲ್ಲಿರುವಾಗ ಇದೀಗ ಇಂತಹ ದುಬಾರಿ ದಂಡವು ಅವರನ್ನು ಮತ್ತಷ್ಟು ತೀವ್ರ ಸಂಕಟಕ್ಕೆ ದೂಡಲಿದೆ ಎಂದಿದೆ ಸಿಪಿಐ(ಎಂ).

ಬಿಜೆಪಿ ಸರ್ಕಾರದ ಜನವಿರೋಧಿ ಕ್ರಮಗಳ ಮುಂದುವರೆದ ಭಾಗವಾಗಿ ಇಂತಹ ದುಬಾರಿ ದಂಡವನ್ನು ಜನತೆಯ ಮೇಲೆ ಹೇರಲಾಗುತ್ತಿದೆ. 5 ವರ್ಷದಿಂದ ಬಾಕಿ ವಸೂಲಿಗೆ ಯಾವುದೇ ಕ್ರಮವಹಿಸದೆ ಏಕಾಏಕಿ ಇದೀಗ ದಂಡದ ಮೇಲೆ ದಂಡ ಪೋಣಿಸಿ ದುಬಾರಿ ದಂಡ ವಸೂಲಿಗೆ ಮುಂದಾಗಿರುವ ಬಿಬಿಎಂಪಿ ಕ್ರಮವನ್ನು ರಾಜ್ಯ ಸರ್ಕಾರವು ಮಧ್ಯಪ್ರವೇಶಿಸಿ ಕೂಡಲೇ ತಡೆಯಿಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ವಲಯ ಪುನರ್ ವಿಂಗಡಣೆ ಕುರಿತು ಅದರೊಂದಿಗೆ ಸಂಬಂಧಿತವಾದ ಪರೋಕ್ಷ ತೆರಿಗೆ ಹೆಚ್ಚಳ ಕುರಿತು ಈ ಹಿಂದೆಯೇ ಜನತೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಅದ್ಯಾವುದನ್ನೂ ಲೆಕ್ಕಿಸದೆ ವಲಯ ಪುನರ್ ವಿಂಗಡಣೆ ಮತ್ತು ಸಂಬಂಧಿತ ತೆರಿಗೆ ಹೆಚ್ಚಳಕ್ಕೆ ಮುಂದಾಗಿದ್ದ ಬಿಬಿಎಂಪಿ ಯು ತೆರಿಗೆ ಪಾವತಿ ವೇಳೆಯಲ್ಲಿಯೇ ಸಂಬಂಧಿತ ವ್ಯತ್ಯಾಸದ ಮೊತ್ತ ಕುರಿತು ಅಗತ್ಯ ತಿಳುವಳಿಕೆ ನೀಡಿ ವಸೂಲಿ ಮಾಡಲು ಮುಂದಾಗದೆ ಇದೀಗ ಇಂತಹ ದುಬಾರಿ ದಂಡ ಹೇರಿಕೆಗೆ ಮುಂದಾಗಿರುವುದು ಜನತೆಯ ಸಂಕಟಕ್ಕೆ ಸ್ಪಂದಿಸುವ ಸಂವೇದನೆ ಹೊಂದಿರದ ಬಿಜೆಪಿ ಸರ್ಕಾರದ ಸುಲಿಗೆಕೋರ ನೀತಿಗಳ ಪ್ರತೀಕವಾಗಿದೆ ಎಂದಿರುವ ಸಿಪಿಐ(ಎಂ) ಕೂಡಲೇ ಇಂತಹ ಎಲ್ಲ ಕ್ರಮಗಳನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದೆ.



ಖಾಸಗಿ ಬಸ್ ಪ್ರಯಾಣ ದರಯೇರಿಕೆಯ ವಿರುದ್ಧ ಪ್ರತಿಭಟನಾ ಪ್ರದರ್ಶನ

ದಕ್ಷಿಣ ಕನ್ನಡ ಜಿಲ್ಲೆಯ ಖಾಸಗೀ ಬಸ್ ಪ್ರಯಾಣ ದರಯೇರಿಕೆಯ ವಿರುದ್ಧ ಹಾಗೂ ಜಿಲ್ಲಾಡಳಿತದ ಏಕಪಕ್ಷೀಯ ನಿರ್ಧಾರವನ್ನು ಖಂಡಿಸಿ ಮಂಗಳೂರು ನಗರದಲ್ಲಿ 31 ಜುಲೈ 2021 ರಂದು ಸಿಪಿಐ(ಎಂ), ಡಿ.ವೈ.ಎಫ್.ಐ., ಜೆಎಂಎಸ್ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಹಮ್ಮಿಕೊಂಡಿದ್ದವು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಪ್ರತಿಭಟನಾಕಾರರು, ಜಿಲ್ಲಾಡಳಿತ ಹಾಗೂ ಬಸ್ ಮಾಲಕರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ "ಕೊರೋನಾ ಸಂಕಷ್ಟದ ಕಾಲದಲ್ಲಿ ಜನತೆಯ ಬದುಕೇ ದುಸ್ತರವಾಗಿದ್ದು, ಇದೇ ಸಂದರ್ಭದಲ್ಲಿ ಬಸ್ ಪ್ರಯಾಣ ದರವನ್ನೂ ಏರಿಸುವ ಮೂಲಕ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಳೆದ ಬಾರಿ ಮಾಸ್ಕ್ ಹಾಕದ ಅಮಾಯಕ ಯುವಕನ ಮೇಲೆ ಧಾಳಿ ನಡೆಸಿ, ತಾನು ಜನರ ಪರ ಎಂಬಂತೆ ಕಪಟ ನಾಟಕವಾಡಿದ ಜಿಲ್ಲಾಧಿಕಾರಿಗಳಿಗೆ, ಬಸ್ ಪ್ರಯಾಣ ದರಯೇರಿಕೆಯಿಂದ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತೆ ಎಂಬ ಕನಿಷ್ಟ ಜ್ಞಾನ ಇಲ್ಲವೇ ಎಂದು ಪ್ರಶ್ನಿಸಿದ ಅವರು, ಬಸ್ ಮಾಲಕರು 20% ಹೆಚ್ಚಳಕ್ಕೆ ಆಗ್ರಹಿಸಿದರೆ. ಜಿಲ್ಲಾಧಿಕಾರಿಗಳು 50% ಕ್ಕೂ ಅಧಿಕ ದರ ಏರಿಕೆಗೆ ಅನುಮತಿ ನೀಡಿರುವ ಮೂಲಕ ಬಸ್ ಮಾಲಕರ ಲಾಬಿಗೆ ದ.ಕ. ಜಿಲ್ಲಾಡಳಿತವು ಸಂಪೂರ್ಣ ಬಲಿಯಾಗಿದೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಡಾ. ಕೃಷ್ಣಪ್ಪ ಕೊಂಚಾಡಿಯವರು ಮಾತನಾಡಿ "ಬಸ್ ಪ್ರಯಾಣ ದರಯೇರಿಕೆಗೆ ಸಂಬಂಧಿಸಿ ಸಾರಿಗೆ ಪ್ರಾಧಿಕಾರದ ಸಭೆ ಕರೆಯಬೇಕಾದ ಜಿಲ್ಲಾಧಿಕಾರಿಗಳು ಸಾರ್ವಜನಿಕರ ಅಹವಾಲನ್ನು ಕೇಳದೆ ಕೇವಲ ಬಸ್ ಮಾಲಕರ ಪರವಾಗಿ ವರ್ತಿಸಿರುವುದು ಭಾರೀ ಸಂಶಯಕ್ಕೆಡೆ ಮಾಡಿದೆ" ಎಂದು ಜಿಲ್ಲಾಡಳಿತದ ಸರ್ವಾಧಿಕಾರಿ ನಡೆಯನ್ನು ಟೀಕಿಸಿದರು.

ಡಿವೈಎಫ್ಐ ದ.ಕ. ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ರವರು ಮಾತನಾಡಿ, "ಪ್ರತಿಯೊಂದು ಸಂದರ್ಭದಲ್ಲೂ ಸರಕಾರದ ಪರವಾಗಿ ತುತ್ತೂರಿ ಬಾರಿಸುವ ಬಸ್ ಮಾಲಕರು ಯಾವತ್ತಾದರೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆಯ ವಿರುದ್ಧ ಧ್ವನಿ ಎತ್ತಿದ್ದಾರೆಯೇ...? ನೆರೆಯ ಕೇರಳ ರಾಜ್ಯ ಸರಕಾರವು ಖಾಸಗೀ ಬಸ್ ಮಾಲಕರಿಗೆ 4 ತಿಂಗಳು ತೆರಿಗೆ ವಿನಾಯಿತಿ ನೀಡಿದಂತೆ, ಕರ್ನಾಟಕ ರಾಜ್ಯ ಸರಕಾರವೂ ತಮಗೆ ನೀಡಬೇಕೆಂದು ಯಾಕೆ ಒತ್ತಾಯಿಸುತ್ತಿಲ್ಲ. ಅದನ್ನು ಬಿಟ್ಟು ಜನಸಾಮಾನ್ಯರ ಬದುಕಿಗೆ ಕೊಡಲಿಪೆಟ್ಟು ನೀಡುವುದು ಎಷ್ಟು ಸರಿ" ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ನಾಯಕರಾದ ಜೆ. ಬಾಲಕೃಷ್ಣ ಶೆಟ್ಟಿ, ದಯಾನಂದ ಶೆಟ್ಟಿ, ಯೋಗೀಶ್ ಜಪ್ಪಿನಮೊಗರು, ಬಾಬು ದೇವಾಡಿಗ, ಜೆಎಂಎಸ್ ಜಿಲ್ಲಾ ನಾಯಕರಾದ ಜಯಂತಿ ಶೆಟ್ಟಿ, ಭಾರತಿ ಬೋಳಾರ, ಡಿವೈಎಫ್ಐ ಜಿಲ್ಲಾ ನಾಯಕರಾದ ನವೀನ್ ಕೊಂಚಾಡಿ, ಮನೋಜ್ ವಾಮಂಜೂರು, ದಲಿತ ಹಕ್ಕುಗಳ ಸಮಿತಿಯ ನಾಯಕರಾದ ತಿಮ್ಮಯ್ಯ ಕೊಂಚಾಡಿ, ಕೃಷ್ಣ ಪಿ.ಎ ತಣ್ಣೀರುಬಾವಿ, ಸಾಮಾಜಿಕ ಕಾರ್ಯಕರ್ತರಾದ ಜೆರಾಲ್ಡ್ ಟವರ್, ಅಶುಂತ ಡಿಸೋಜ, ಸಿಐಟಿಯು ಮುಖಂಡರಾದ ಸಂತೋಷ್ ಆರ್.ಎಸ್. ನಾಗೇಶ್ ಕೋಟ್ಯಾನ್ ಭಾಗವಹಿಸಿದ್ದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಮಂಗಳೂರು ನಗರ ಮುಖಂಡರಾದ ದಿನೇಶ್ ಶೆಟ್ಟಿ, ಪ್ರದೀಪ್, ಮನೋಜ್, ಅಶೋಕ್ ಸಾಲ್ಯಾನ್, ಡಿವೈಎಫ್ಐ ನಾಯಕರಾದ ನೌಶಾದ್ ಬೆಂಗರೆ, ಜಗದೀಶ್ ಬಜಾಲ್, ಜೆಎಂಎಸ್ ಮುಖಂಡರಾದ ಜಯಲಕ್ಷ್ಮಿ, ಜೆಸಿಂತ ಡಿಸೋಜ ಮುಂತಾದವರು ವಹಿಸಿದ್ದರು.

ಕೋಮು ಮತ್ತು ಕ್ರೋನಿ ಮಿಶ್ರಿತ ಸಚಿವ ಸಂಪುಟ

2018ರ ಚುನಾವಣೆಯ ನಂತರ 3ನೇ ಬಾರಿಗೆ ಸಚಿವ ಸಂಪುಟ ರಚನೆಯಾಗಿದ್ದು ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಸರಕಾರವು ಕೋಮು (ಹಿಂದುತ್ವ) ಮತ್ತು ಕ್ರೋನಿ (ಚಮಚಾ ಬಂಡವಾಳದಾರರು) ಮಿಶ್ರಿತ ಸಚಿವ ಸಂಪುಟವನ್ನು ಹೊಂದಿದೆ ಎಂದು ಸಿ.ಪಿ.ಐ.(ಎಂ) ಉಡುಪಿ ಜಿಲ್ಲಾ ಸಮಿತಿ ಆಪಾದಿಸಿದೆ.

ಸರಕಾರದ ಚಟುವಟಿಕೆಗಳ ಮೇಲೆ ಆರ್.ಎಸ್.ಎಸ್. ಹಿಡಿತ ಹೆಚ್ಚಲಿದ್ದು, ಧರ್ಮ, ಧರ್ಮದ ನಡುವೆ ದ್ವೇಷ ಹೆಚ್ಚಿಸುವ ಚಟುವಟಿಕೆಗಳು ಉಡುಪಿ ಜಿಲ್ಲೆ ಮತ್ತು ರಾಜ್ಯದಲ್ಲಿ ಹೆಚ್ಚಾಗಲಿವೆ. ಸಮಾಜವಾದಿ ಚಿಂತನೆ ಹೊಂದಿದ್ದ ಎಸ್.ಆರ್. ಬೊಮ್ಮಾಯಿಯವರ ಪುತ್ರ ಬಸವರಾಜ ಬೊಮ್ಮಾಯಿಯವರು ಜನತಾ ಪರಿವಾರದಿಂದ ರಾಜಕೀಯಕ್ಕೆ ಧುಮುಕಿ ಮುಖ್ಯಮಂತ್ರಿಯಾದ ಕೂಡಲೇ ಹುಬ್ಬಳ್ಳಿಯ ಸಂಘ ಪರಿವಾರದ ಕಛೇರಿಗೆ ಭೇಟಿ ನೀಡಿದ್ದು, ಕೇವಲ ಧನ್ಯವಾದ ಹೇಳುವುದಕ್ಕೆ ಮಾತ್ರ ಅಲ್ಲ ಎಂದು ಸಿಪಿಐ(ಎಂ) ಅಭಿಪ್ರಾಯಪಡುತ್ತದೆ. ಇದಕ್ಕೆ ಪೂರಕವೆಂಬಂತೆ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಒಬ್ಬರೂ ಕೂಡಾ (ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ) ಸಚಿವ ಸಂಪುಟದಲ್ಲಿ ಇಲ್ಲ ಎಂಬುದನ್ನು ಗಮನಿಸಬೇಕಾಗಿದೆ ಎಂದಿದೆ.

ಜಿಲ್ಲೆಯ ಇಬ್ಬರು ಸಚಿವರು ಕೂಡಾ ಆರ್.ಎಸ್.ಎಸ್. ಹಿನ್ನೆಲೆಯವರಾಗಿದ್ದು, ಉಸ್ತುವಾರಿ ಸಚಿವರಾಗಿರುವ ಶ್ರೀ ಸುನೀಲ್ ಕುಮಾರ್ ಅವರು "ಹಿಂದುತ್ವ ನನ್ನ ಮೊದಲ ಆಯ್ಕೆ" ಎಂದು ಈಗಾಗಲೇ ಘೋಷಿಸಿದ್ದಾರೆ.

ಇನ್ನೊಂದೆಡೆಯಲ್ಲಿ 2018ರಲ್ಲಿ ಶಾಸಕ ಸ್ಥಾನಕ್ಕೆ ಸ್ಪರ್ಧಿಸುವಾಗ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಅಫಿದಾವಿತ್ ಪ್ರಕಾರ ಇಬ್ಬರು ಸಚಿವರನ್ನು ಹೊರತುಪಡಿಸಿ, ಮುಖ್ಯಮಂತ್ರಿ ಬೊಮ್ಮಾಯಿಯವರು ಸೇರಿದಂತೆ 28 ಸಚಿವರು ಕೋಟ್ಯಾಧಿಪತಿಗಳಾಗಿದ್ದಾರೆ. ಇಬ್ಬರು ಸಚಿವರು ರೂ. 100 ಕೋಟಿಗೂ ಹೆಚ್ಚಿನ (ಶ್ರೀ MTB ನಾಗರಾಜ್ 1224 ಕೋಟಿ ರೂಪಾಯಿ) ಆಸ್ತಿ ಹೊಂದಿರುತ್ತಾರೆ. ಕಳೆದ 3 ವರ್ಷಗಳಲ್ಲಿ ಆಸ್ತಿಯ ಮೊತ್ತ ಇನ್ನಷ್ಟು ಹೆಚ್ಚಾಗಿರುತ್ತದೆ.

ಕೋಟ್ಯಾಧಿಪತಿಗಳ ಸಚಿವ ಸಂಪುಟದ ನೀತಿಗಳು ಯಾರ ಪರವಾಗಿರುತ್ತದೆ ಎಂದು ಯಾರಾದರೂ ಊಹಿಸಬಹುದು. ಕೋವಿಡ್ ಸಂದರ್ಭದಲ್ಲಿ ಲಕ್ಷಾಂತರ ಜನ ಉದ್ಯೋಗ, ಕೋಟ್ಯಾಂತರ ಜನ ಆದಾಯ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲೂ ಕೆಲವೇ ಕಾರ್ಪೊರೇಟ್ ಕಂಪೆನಿಗಳ ಆದಾಯ ತೀವ್ರವಾಗಿ ಹೆಚ್ಚಾಗುತ್ತಿದೆ. ಕರ್ನಾಟಕ ಸರಕಾರದ ಮುಂದಿನ ನೀತಿಗಳು ಇನ್ನಷ್ಟು ವೇಗವಾಗಿ ಕಾರ್ಪೊರೇಟ್ ಕಂಪೆನಿಗಳ ಪರವಾಗಿರುತ್ತವೆ ಎಂದು ಸಿಪಿಐ(ಎಂ) ಆರೋಪಿಸಿದೆ.

ಈ ಸಂದರ್ಭದಲ್ಲಿ ನೊಂದ ಜನರು ಐಕ್ಯತೆಯಿಂದ ಹೋರಾಡುವುದು ಮಾತ್ರವೇ ಉಳಿದಿರುವ ದಾರಿ ಎಂದು ಸಿಪಿಐ (ಎಂ) ಜಿಲ್ಲಾ ಸಮಿತಿ ಅಭಿಪ್ರಾಯಪಟ್ಟಿದೆ.

ಸರ್ವಾಧಿಕಾರಿ ನಿಲುವು ವಿರೋಧಿಸಿ ಧರಣಿ ಸತ್ಯಾಗ್ರಹ

ದ.ಕ ಜಿಲ್ಲಾ ಪಂಚಾಯತ್ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಪಂಜಿಮೊಗರು ಮಂಗಳೂರು ಇಲ್ಲಿ ಶಾಲಾ ಮುಖ್ಯೋಪಾಧ್ಯಾಯಿನಿಯವರ ಸರ್ವಾಧಿಕಾರಿ ನಿಲುವು ವಿರೋಧಿಸಿ ಧರಣಿ ಸತ್ಯಾಗ್ರಹ ನಡೆಯಿತು. ಮುಖ್ಯೋಪಾಧ್ಯಾಯಿನಿಯವರು ಶಿಕ್ಷಣ ವಿರೋಧಿಯಾಗಿದ್ದು ಅಭಿವೃದ್ಧಿ ಕಾಮಗಾರಿಗಳಿಗೆ ಅಡ್ಡಗಾಲು ಹಾಕುತ್ತಿರುವುದಾಗಿ ಆರೋಪಿಸಿ ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರ ಬೆಂಬಲದೊಂದಿಗೆ ಅಧ್ಯಕ್ಷರಾದ ದಯಾನಂದ ಶೆಟ್ಟಿ ಯವರು ಧರಣಿ ನಡೆಸಿದರು. ಊರವರು ಸೇರಿಕೊಂಡು ಅಭಿವೃದ್ಧಿ ಪಡಿಸಿದ ಮಾದರಿ ಶಾಲೆಯಾಗಿ ರೂಪುಗೊಂಡಿದ್ದ ಶಾಲೆಯನ್ನು ಮುಖ್ಯೋಪಾಧ್ಯಾಯಿನಿ ಚಂದ್ರಾವತಿಯವರು ನಾಶಮಾಡುತ್ತಿರುವುದಾಗಿ ಆರೋಪಿಸಲಾಗಿದೆ.



ಸ್ಥಳಕ್ಕಾಗಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಸದಾನಂದ ಪೂಂಜಾ ಒಂದು ವಾರದೊಳಗೆ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು. ಪ್ರತಿಭಟನೆಯಲ್ಲಿ ಶಾಲಾಭಿವೃದ್ಧಿ ಸಮಿತಿ ಮತ್ತು ಪೋಷಕರಾದ ಚಂದ್ರನಾಯ್ಕ್, ಅಸ್ಗರ್, ಮಂಜುಳಾ, ಶಾರದಾ, ಬಶೀರ್,ನೌಶಾದ್,ಶೈನಾಜ್, ಕುಲ್ಸುಬಾನು ಮತ್ತಿತರರು ಭಾಗವಹಿಸಿದ್ದರು.

ರೈತ ಕಾರ್ಮಿಕರ ಹೋರಾಟದ ಪ್ರಚಾರಾಂದೋಲನದ ಭಾಗವಾಗಿ ನಗರದಲ್ಲಿ ಪಾದಯಾತ್ರೆ

ಕ್ವಿಟ್ ಇಂಡಿಯಾ ಚಳುವಳಿಯ ಸವಿನೆನಪಿನಲ್ಲಿ ರೈತ ಕಾರ್ಮಿಕರ ಸಖ್ಯತೆಯಲ್ಲಿ ಬೃಹತ್ ಹೋರಾಟವು ಆಗಸ್ಟ್ 9 ರಂದು ದೇಶಾದ್ಯಂತ ನಡೆಯಲಿದ್ದು, ಅದರ ಪ್ರಚಾರಾಂದೋಲನದ ಭಾಗವಾಗಿ ಮಂಗಳೂರು ನಗರದಲ್ಲಿ 02 ಆಗಸ್ಟ್ 2021 ರಂದು ಸಿಐಟಿಯು ನೇತೃತ್ವದಲ್ಲಿ ಪಾದಯಾತ್ರೆಯನ್ನು ನಡೆಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿತು.

ಪಾದಯಾತ್ರೆಯನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು, "ದೇಶವನ್ನಾಳುವ ನರೇಂದ್ರ ಮೋದಿ ಸರಕಾರವು ಪ್ರತೀ ಹೆಜ್ಜೆಯಲ್ಲಿಯೂ ರೈತ ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೊಳಿಸುವ ಮೂಲಕ ದೇಶದ ಆರ್ಥಿಕತೆಯನ್ನು ಸರ್ವನಾಶಗೊಳಿಸಿದೆ. ಜನತೆಯ ಹಿತ ಕಾಪಾಡುವ ಬದಲು ಕಾರ್ಪೊರೇಟ್ ಕಂಪೆನಿಗಳ ಹಿತಾಸಕ್ತಿಗಳನ್ನು ಕಾಪಾಡುತ್ತಿದೆ. ಆ ಮೂಲಕ ದೇಶದ ಅಮೂಲ್ಯ ಸಂಪತ್ತುಗಳನ್ನು ಕಾರ್ಪೊರೇಟ್ ಕಂಪೆನಿಗಳಿಗೆ ಧಾರೆ ಎರೆದು ಕೊಡುತ್ತಿದೆ. ರೈತ ವಿರೋಧಿ ಮಸೂದೆಗಳನ್ನು ಜಾರಿಗೊಳಿಸಲು ಹೊರಟ ಕೇಂದ್ರ ಸರಕಾರವು ದೇಶದ ಕೃಷಿರಂಗವನ್ನೇ ಬುಡಮೇಲುಗೊಳಿಸುತ್ತಿದೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, "ಅಂದು ಈಸ್ಟ್ ಇಂಡಿಯಾ ಕಂಪೆನಿಯ ಮೂಲಕ ದೇಶದ ಸಂಪತ್ತನ್ನು ದೋಚಿದ ಬ್ರಿಟೀಷರ ವಿರುದ್ಧ ದೇಶದ ಜನತೆ ಸಮರ ಧೀರ ಹೋರಾಟ ನಡೆಸಿದರೆ. ಇಂದು ನಮ್ಮ ದೇಶದ ಸಂಪತ್ತನ್ನು ಕೊಳ್ಳೆಹೊಡೆಯುತ್ತಿರುವ ನೂರಾರು ಕಾರ್ಪೊರೇಟ್ ಕಂಪೆನಿಗಳ ವಿರುದ್ಧ ದೇಶದ ರೈತ ಕಾರ್ಮಿಕರು ಒಂದಾಗಿ ಪ್ರಬಲ ಚಳುವಳಿ ರೂಪಿಸಬೇಕಾಗಿದೆ" ಎಂದರು.

ಪಾದಯಾತ್ರೆಯಲ್ಲಿ ಸಿಐಟಿಯು ಜಿಲ್ಲಾ ಮುಖಂಡರಾದ ಜಯಂತಿ ಶೆಟ್ಟಿ, ಭಾರತಿ ಬೋಳಾರ, ಜಯಲಕ್ಷ್ಮಿ, ಸಂತೋಷ್ ಆರ್.ಎಸ್, ಅಶೋಕ್ ಸಾಲ್ಯಾನ್, ಕೃಷ್ಣ ತಣ್ಣೀರು ಬಾವಿ, ಅನ್ವರ್ ಶೇಕ್ ಮುಂತಾದವರು ಉಪಸ್ಥಿತರಿದ್ದರು.



ಸಚಿವಸ್ಥಾನಕ್ಕಾಗಿ ಶಾಸಕರ ಕಿತ್ತಾಟ – ಮಳೆಯಲ್ಲಿ ಅಸ್ತವ್ಯಸ್ತಗೊಂಡ ರಾಜ್ಯದ ಜನ

ರಾಜ್ಯಾದ್ಯಂತ ಆರ್ಭಟಿಸಿದ್ದ ಮಳೆ, ಸದ್ಯ ನಿಂತಿದೆ. ಮಳೆಯಿಂದಾಗಿ ಅಸ್ತವ್ಯಸ್ತಗೊಂಡಿದ್ದ ಜನಜೀವನ ಈಗ ಸಹಜ ಸ್ಥಿತಿಯತ್ತ ಬರುತ್ತಿದೆ. ಆದರೆ ರಾಜ್ಯಾದ್ಯಂತ ಸುರಿದ ಮಳೆಗೆ ಸಾಕಷ್ಟು ಆಸ್ತಿಪಾಸ್ತಿ ಹಾನಿಯಾಗಿದೆ. ಜೊತೆ ನಿಲ್ಲಬೇಕಿದ್ದ ಸರಕಾರ, ಶಾಸಕರು ಮಂತ್ರಿಗಿರಿ ಆಸೆಗಾಗಿ ಜನರನ್ನು ಮಳೆಯಲ್ಲಿ ನೆನೆಯುವಂತೆ ಮಾಡಿದ್ದಾರೆ.

ರಾಜ್ಯದಲ್ಲಿ ಭಾರೀ ಮಳೆಗೆ ಇದುವರೆಗೆ 10 ಕ್ಕೂ ಹೆಚ್ಚು ಮಂದಿ ಬಲಿಯಾಗಿದ್ದು, ಮೂವರು ನಾಪತ್ತೆಯಾಗಿದ್ದಾರೆ ಎಂದು ರಾಜ್ಯ ಸರಕಾರ ಘೋಷಿಸಿದೆ. ರಾಜ್ಯದಲ್ಲಿ ಮಳೆಯಿಂದ ಆದ ಅನಾಹುತಗಳ ಮಾಹಿತಿ ಲಭ್ಯವಾಗಿದ್ದು ರಾಜ್ಯದ 11 ಜಿಲ್ಲೆಗಳ 45 ತಾಲೂಕುಗಳ ಸುಮಾರು 283 ಗ್ರಾಮಗಳಿಗೆ ಮಳೆಯಿಂದ ಭಾರೀ ಹಾನಿ ಆಗಿದೆ ಎಂದು ಸರಕಾರದ ದಾಖಲೆಗಳು ಹೇಳುತ್ತಿವೆ.

ರಾಜ್ಯದ 36,498 ಜನರಿಗೆ ಪ್ರವಾಹದಿಂದಾಗಿ ತೊಂದರೆ ಆಗಿದ್ದು, ರಾಜ್ಯದ 500 ಕ್ಕೂ ಮನೆಗಳು ಸಂಪೂರ್ಣ ಹಾನಿಯಾಗಿದ್ದು, 3292 ಮನೆಗಳಿಗೆ ಭಾಗಶ: ಹಾನಿ ಆಗಿವೆ. ಇದುವರೆಗೆ 31,360 ಜನರನ್ನು ಬೇರೆಡೆ ಸ್ಥಳಾಂತರಿಸಲಾಗಿದೆ. 54 ದೊಡ್ಡ ಜಾನುವಾರುಗಳು ಮೃತಪಟ್ಟಿದ್ದು, 24 ಸಣ್ಣ ಜಾನುವಾರುಗಳು ಸಾವೀಗಿಡಾಗಿವೆ., 58,960 ಬೆಳೆ ಹಾನಿಯಾಗಿವೆ. 1962 ಎಕರೆಯಲ್ಲಿ ಬೆಳೆದಿದ್ದ ತೋಟಗಾರಿಕೆ ಬೆಳೆಗಳು ಸಹ ನಷ್ಟ ಉಂಟಾಗಿವೆ. ರಾಜ್ಯದ 237 ಕಡೆಗಳಲ್ಲಿ ಕಾಳಜಿ ಕೇಂದ್ರಗಳ ಆರಂಭಿಸಲಾಗಿದ್ದು, ಕಾಳಜಿ ಕೇಂದ್ರಗಳಲ್ಲಿ 22,417 ಜನರಿಗೆ ಪರಿಹಾರದ ವ್ಯವಸ್ಥೆ ಮಾಡಲಾಗಿದೆ ಎಂಬ ಮಾಹಿತಿ ಲಭ್ಯವಾಗುತ್ತಿದೆ. ಮಳೆಯಿಂದಾಗಿ ಜಿಲ್ಲೆಗಳಲ್ಲಿ ಆದ ನಷ್ಟದ ಮಾಹಿತಿಯನ್ನು ನೋಡ್ತಾ ಹೋಗೋಣ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ವಾರ ಸುರಿದ ಭಾರೀ ಮಳೆಯಿಂದ ಸೃಷ್ಟಿಯಾಗಿದ್ದ



ಪ್ರವಾಹದಿಂದ ಉಂಟಾದ ಹಾನಿಗಳ ವಿವರವನ್ನು ಜಿಲ್ಲಾಡಳಿತ ದಾಖಲಿಸಿದೆ. 81 ಗ್ರಾಮಗಳು ಪ್ರವಾಹ ಪೀಡಿತವಾಗಿವೆ. 50 ಮನೆಗಳು ಸಂಪೂರ್ಣ ಬಿದ್ದಿದ್ದು, 146 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಈವರೆಗೆ 4 ಮೃತಪಟ್ಟಿದ್ದು, ಇಬ್ಬರು ನಾಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ. ಸುಮಾರು 737.54 ಕೋಟಿ ರೂಪಾಯಿಯಷ್ಟು ರಸ್ತೆ, ಸೇತುವೆ, ಮೂಲಭೂತ ಸೌಕರ್ಯಗಳ ಹಾನಿಯಾಗಿರುವ ಬಗ್ಗೆ ಸರ್ಕಾರಕ್ಕೆ ಜಿಲ್ಲಾಡಳಿತ ವರದಿ ಸಲ್ಲಿಸಿದೆ.

ಗದಗ್‌ನಲ್ಲಿ ಮಳೆ ಸಾಕಷ್ಟು ಅನಾಹುತ ಸೃಷ್ಟಿಸಿದ್ದು, ಬೆಣ್ಣೆಹಳ್ಳ ಉಕ್ಕಿ ಹರಿಯುತ್ತಿದ್ದು ರೋಣ ಮತ್ತು ನರಗುಂದ ತಾಲೂಕಿನ 10ಕ್ಕೂ ಹೆಚ್ಚು ಗ್ರಾಮಗಳಿಗೆ ನೆರೆ ಭೀತಿ ಆರಂಭವಾಗಿದೆ. ಜೋಳ, ಕುಸುಬೆ, ಕಡಲೆ ಸೂರ್ಯಕಾಂತಿ, ಬೆಳೆಗಳು ಸಂಪೂರ್ಣ ನಾಶವಾಗಿದ್ದು, ಕೋಟ್ಯಾಂತರ ರೂ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಮಳೆಯ ಆರ್ಭಟ ಜನರನ್ನು ಅಸ್ತವ್ಯಸ್ತ ಮಾಡಿದೆ. ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟ 1800 ಅಡಿ ದಾಟಿದ್ದು, ಸಾಗರ ತಾಲೂಕಿನಲ್ಲಿ ಪ್ರವಾಹ ಭೀತಿ ಜಾಸ್ತಿಯಾಗುತ್ತಲೇ ಇತ್ತು, ಜಿಲ್ಲೆಯಾದ್ಯಂತ ಸಾವಿರಾರು ಎಕರೆ ಕೃಷಿ ಜಮೀನು ಜಲಾವೃತಗೊಂಡಿದ್ದು, ಕೋಟ್ಯಂತರ ರೂಪಾಯಿ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯ ಆರ್ಭಟಕ್ಕೆ 100 ಕೋಟಿ ರೂ.ಗೂ ಹೆಚ್ಚು ನಷ್ಟ ಸಂಭವಿಸಿದೆ; 3.1 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಾಶವಾಗಿದ್ದು, 30 ಸೇತುವೆಗಳಿಗೆ, 327 ಕಿಮೀ ರಸ್ತೆಗಳಿಗೆ ಹಾನಿಯಾಗಿದ್ದು, ಸಂಚಾರ ಸ್ಥಗಿತವಾಗಿದೆ. ಭಾರೀ ಮಳೆಯಾಗುತ್ತಿರುವ ಕಾರಣ ಚಾರ್ಮಾಡಿ ಘಾಟ್ ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿತ್ತು.

ಕೊಡಗು ಜಿಲ್ಲೆಯ ಮಡಿಕೇರಿ–ಸೋಮವಾರಪೇಟೆ ಮುಖ್ಯರಸ್ತೆಯ ಹಟ್ಟಿಹೊಳೆಯಲ್ಲಿ 500 ಮೀಟರ್‌ಗಳಷ್ಟು ದೂರ ರಸ್ತೆ ಬಿರುಕು ಬಿಟ್ಟಿದ್ದು, ರಸ್ತೆ ಕುಸಿಯುವ ಆತಂಕ ಎದುರಾಗಿದೆ. ಆದರೆ ಕಳೆದ 2 ತಿಂಗಳಿನಿಂದ ವರುಣನ ಅಬ್ಬರ ಮತ್ತು ಗಾಳಿಯ ರಭಸಕ್ಕೆ ಕೊಡಗಿನಲ್ಲಿ ಈತನಕ 52 ಕೋಟಿ 39 ಲಕ್ಷದ 30 ಸಾವಿರ ರೂ. ನಷ್ಟದ ಅಂದಾಜು ಮಾಡಲಾಗಿದೆ.

ಹಾಸನದಲ್ಲಿ ಮಳೆಯ ಆರ್ಭಟ ಜೋರಾಗಿಯೇ ಇತ್ತು, ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿದ್ದು ಸಕಲೇಶಪುರ, ಆಲೂರು, ಬೇಲೂರು, ಅರಕಲಗೂಡು, ಹಾಸನದಲ್ಲಿ ಧಾರಾಕಾರ ಮಳೆಯಾಗಿದೆ.. ಮಳೆಯ ರಭಸ ಎಷ್ಟಿದೆ ಎಂದರೆ ಮಳೆಯ ನೀರು ಮನೆಗಳಿಗೂ ನುಗ್ಗಿದೆ. ಮಳೆಯಿಂದಾಗಿ ರಾಷ್ಟ್ರೀಯ ಹೆದ್ದಾರಿ 75 ಸಂಪೂರ್ಣ ಜಲಾವೃತಗೊಂಡಿದ್ದು. ಸಕಲೇಶಪುರ ತಾಲ್ಲೂಕಿನ ದೋಣಿಗಲ್ ಸಮೀಪ ರಸ್ತೆ ಕುಸಿದ ಪರಿಣಾಮ ಸಂಚಾರಕ್ಕೆ ಬಾರಿ ಅಡೆತಡೆಯಾಗಿತ್ತು. ಹೇಮಾವತಿ, ವಾಟೇಹೊಳೆ, ಯಗಚಿ ಜಲಾಶಯಗಳ ಒಳಹರಿವು ಹೆಚ್ಚಿದ್ದು, ವಾಟೇಹೊಳೆಯಿಂದ ನದಿಗೆ ನೀರು ಹರಿಸಲಾಗುತ್ತಿದೆ ಗೊರೂರಿನ ಹೇಮಾವತಿ ಅಣೆಕಟ್ಟೆ ಭಾಗಶಃ ಭರ್ತಿಯಾಗಿದೆ. ಅಪಾರ ಪ್ರಮಾಣದ ನಷ್ಟವಾಗಿರುವ ಸಾಧ್ಯತೆ ಇದೆ.

ಬೆಳಗಾವಿ ಜಿಲ್ಲೆಯಲ್ಲೂ ಮಳೆ ಸಾಕಷ್ಟು ಅವಾಂತರ ಸೃಷ್ಟಿಸಿದೆ, ನದಿತೀರದ ಮನೆಗಳು, ಕೃಷಿಭೂಮಿಗೆ ಅಪಾರ ಪ್ರಮಾಣದಲ್ಲಿ ನೀರು ನುಗ್ಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಳೆಯಿಂದ 47 ರಸ್ತೆಗಳ ಸಂಪರ್ಕ ಕಡಿತಗೊಂಡಿದೆ. ಮಳೆಯಿಂದಾಗಿ 5 ತಾಲೂಕಿನ 51 ಗ್ರಾಮಗಳಿಗೆ ತೊಂದರೆ ಆಗಿದೆ. 26 ಕಾಳಜಿ ಕೇಂದ್ರ ಆರಂಭಿಸಲಾಗಿದ್ದು, 2 ಸಾವಿರ ಜನ ಕಾಳಜಿ ಕೇಂದ್ರದಲ್ಲಿ ಇದ್ದಾರೆ. ಎರಡು ಓಆಖಈ ತಂಡ ಬೆಳಗಾವಿ ಜಿಲ್ಲೆಯಲ್ಲಿ ಇದ್ದಾರೆ. 224 ಮನೆಗಳಿಗೆ ಮಳೆಯಿಂದ ಹಾನಿಯಾಗಿದೆ. 36 ಸೇತುವೆ ಮುಳುಗಡೆಯಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ.

ದಾವಣಗೆರೆ ಜಿಲ್ಲೆಯ ಮಳೆಯ ಆರ್ಭಟ ಹೆಚ್ಚಾಗಿತ್ತು, ಹೊನ್ನಾಳಿ ಮತ್ತು ನ್ಯಾಮತಿ ತಾಲೂಕುಗಳಲ್ಲಿ 300 ಹೆಕ್ಟೇರ್ ಪ್ರದೇಶದಲ್ಲಿನ ಹೂವಿನ ಬೆಳೆ ಗಳು, ಮೆಕ್ಕೆಜೋಳ, ಶೇಂಗಾ, ಅಡಕೆ, ದ್ವಿದಳ ಧಾನ್ಯ ಬೆಳೆಗಳು ಜಲಾವೃತಗೊಂಡಿವೆ. ನೂರಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಕೋಟ್ಯಾಂತರ

ಪುಟ 10 ನೋಡಿ





ಆಗಸ್ಟ್: 9, ರೈತ–ಕಾರ್ಮಿಕ, ಕೃಷಿಕೂಲಿಕಾರರಿಂದ ದೇಶ ವ್ಯಾಪಿ ಪ್ರತಿಭಟನೆ

ಜುಲೈ 25 ರಿಂದ ಪ್ರಚಾರಾಂದೋಲನ



ಉಡುಪಿ ಜಿಲ್ಲೆಯಾದ್ಯಂತ ಜುಲೈ 25 ರಿಂದ ಆಗಸ್ಟ್ 8 ರವರೆಗೆ ಹಳ್ಳಿ ಹಳ್ಳಿಗಳಲ್ಲಿ, ನಗರದ ವಾರ್ಡ್‌ಗಳಲ್ಲಿ ಮನೆ, ಮನೆಗೆ ತೆರಳಿ ಪ್ರಚಾರಾಂದೋಲನ ನಡೆದಿದೆ. ಬೆಲೆ ಏರಿಕೆಯಿಂದ ಬೇಸತ್ತ ಜನ, ಆರ್ಥಿಕ ಅವ್ಯವಸ್ಥೆ ಮತ್ತು ಕೋವಿಡ್ ನಿಂದ ವ್ಯಾಪಾರ ಇಲ್ಲದೆ ಕಂಗಾಲಾಗಿರುವ ಅಂಗಡಿ, ಮುಂಗಟ್ಟುಗಳ ಮಾಲಕರು, ಉದ್ಯೋಗ ಕಳಕೊಂಡು ಆದಾಯ ಇಲ್ಲದೆ ವಿಲವಿಲ ಒದ್ದಾಡುತ್ತಿರುವವರು ನಮ್ಮ ಚಳುವಳಿಯನ್ನು ಮನಸಾರೆ ಬೆಂಬಲಿಸಿದರು. ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಯಡ್ತರೆ, ಕಿರಿಮಂಜೆಶ್ವರ ಜಿಲ್ಲಾ ಪಂಚಾಯತ್ ಚುನಾವಣಾ ಕ್ಷೇತ್ರ ವ್ಯಾಪ್ತಿಯ ನಾವುಂದ, ಮಸ್ಕಿ, ಅರೆಹೊಳೆ, ಬಸ್ತಿ ಮಕ್ಕಿ ಹಾಗೂ ಚುಂಗಿಗುಡ್ಡಿ ಪ್ರದೇಶಗಳಲ್ಲಿ ಪ್ರಚಾರಾಂದೋಲನದದ ಕರಪತ್ರವನ್ನು ಹಂಚಲಾಯಿತು.

ಕುಂದಾಪುರ ತಾಲೂಕು ಶಂಕರನಾರಾಯಣ, ಹಾಲಾಡಿ, ವಕ್ವಾಡಿ, ಕೊಟೇಶ್ವರ, ವಡೇರ ಹೋಬಳಿ, ಗುಜ್ಜಾಡಿ, ತಲ್ಲೂರು, ಗುಲ್ವಾಡಿ, ಮಾವಿನಕಟ್ಟೆ, ನೇರಳಕಟ್ಟೆ, ಹೊಸೂರು, ಅಂಪಾರು, ಬಿ.ಸಿ.ರಸ್ತೆ, ಚರ್ಚ್ ರಸ್ತೆ, ಕಂಡ್ಲೂರು, ಮೊವಾಡಿ, ಮೂಡ್ಲಕಟ್ಟೆ ಮೊದಲಾದ ಪ್ರದೇಶಗಳಲ್ಲಿ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ, ಉಡುಪಿ ಜಿಲ್ಲಾ ಹೆಂಚು ಕಾರ್ಮಿಕರ ಸಂಘದ ಸದಸ್ಯರು ಪ್ರಚಾರಾಂದೋಲನದಲ್ಲಿ ಭಾಗವಹಿಸಿದ್ದರು. ಆಲೂರು, ವಂಡ್ಸೆ ಗ್ರಾಮಗಳಲ್ಲಿ ಕಟ್ಟಡ ಕಾರ್ಮಿಕರ ಸಂಘದ ಸದಸ್ಯರು ಮನೆ, ಮನೆ ಪ್ರಚಾರದಲ್ಲಿ ಭಾಗವಹಿಸಿದ್ದರು. ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಉಡುಪಿ ತಾಲೂಕು ಸಮಿತಿ ನೇತೃತ್ವದಲ್ಲಿ ಬ್ರಹ್ಮಾವರ, ಐರೋಡಿ ಗ್ರಾಮದಲ್ಲಿ ಮನೆ ಮನೆಗೆ ಕರಪತ್ರ ವಿತರಣೆ ಮಾಡಿತು. ಬ್ರಹ್ಮಾವರ ಪೇಟೆಯ ಪ್ರಮುಖ ಬೀದಿಯಲ್ಲಿ ಸಿಐಟಿಯು ಮುಖಂಡತ್ವದಲ್ಲಿ ಅಂಗಡಿ ಮುಂಗಟ್ಟುಗಳಿಗೆ ಕರಪತ್ರ ವಿತರಿಸಿ ಪ್ರಚಾರ ನಡೆಸಿತು. ಕಾಪು ತಾಲೂಕಿನ ಹೆಜಮಾಡಿ, ಉಡುಪಿ ನಗರದ ಸಮೀಪ ಇರುವ ತೆಂಕನಿಡಿಯೂರು ಮೊದಲಾದ ಪ್ರದೇಶಗಳಲ್ಲಿ ಮನೆ ಮನೆ ಪ್ರಚಾರ ನಡೆದಿದೆ.

ಜಿಲ್ಲೆಯಲ್ಲಿ ಉಡುಪಿ, ಕುಂದಾಪುರ, ಬೈಂದೂರು ಮತ್ತು ಕಾರ್ಕಳ ತಾಲೂಕು ಕೇಂದ್ರ ಗಳಲ್ಲಿ ಆಗಸ್ಟ್ 9 ರಂದು ಬೃಹತ್ ಪ್ರತಿಭಟನೆ ನಡೆಯಲಿದೆ.

ಉಡುಪಿ ಕಮ್ಯೂನಿಸ್ಟ್ ಮುಖಂಡರಾಗಿದ್ದ ಡೇವಿಡ್ ಎ. ಕರ್ಕಡ ಟ್ರಸ್ಟ್ ವತಿಯಿಂದ ಬಡ ವಿದ್ಯಾರ್ಥಿಗೆ ಆರ್ಥಿಕ ನೆರವು ಉಡುಪಿಯ ವಿದ್ಯಾರ್ಥಿ ರಿತೇಷ್ ಗೆ ಕಾಲೇಜು ಶುಲ್ಕ ಭರಿಸಲು ಆನಾರೋಗ್ಯ, ಬಡತನದ ಕಾರಣದಿಂದಾಗಿ ಪೋಷಕರಿಗೆ ಸಾಧ್ಯವಾಗದೆ ಆರ್ಥಿಕ ಸಂಕಷ್ಟದಲ್ಲಿರುವ ಕುಟುಂಬಕ್ಕೆ ಟ್ರಸ್ಟ್ ಸಾರ್ವಜನಿಕರಿಂದ ಸಂಗ್ರಹಿಸಿದ ಹಣ ರೂಪಾಯಿ 11,880 ಸಹಾಯವನ್ನು ವಿದ್ಯಾರ್ಥಿ ರಿತೇಷ್ ಪೋಷಕರಿಗೆ ಟ್ರಸ್ಟ್ ನ ಕಾರ್ಯದರ್ಶಿ ಕೆ. ಶಂಕರ್ ಹಸ್ತಾಂತರಿಸಿದರು. ಟ್ರಸ್ಟ್ ಸದಸ್ಯ, ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಮುಖಂಡ ಕವಿರಾಜ್ ಎಸ್. ಇದ್ದರು.



ಬೈಂದೂರು: 'ಉದ್ಯೋಗದ ಹಕ್ಕಿಗಾಗಿ' ಯುವಜನ ಸಮಾವೇಶ

ಕೇಂದ್ರ ಮತ್ತು ರಾಜ್ಯ ಸರಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಬಿದ್ದಿರುವ ಹುದ್ದೆಗಳನ್ನು ಈ ಕೂಡಲೆ ಭರ್ತಿಮಾಡಬೇಕು. ವಿವಿಧ ಇಲಾಖೆಗಳಲ್ಲಿ ನೇಮಕಗೊಂಡಿರುವ ಗುತ್ತಿಗೆ, ಹೊರಗುತ್ತಿಗೆ ಪದ್ಧತಿಯನ್ನೆ ರದ್ದು ಪಡಿಸಿ ನೌಕರರನ್ನು ಖಾಯಂ ಗೊಳಿಸಬೇಕು ಎಂದು ಒತ್ತಾಯಿಸುವ ಹೋರಾಟಕ್ಕೆ ಮುಂದಾಗಬೇಕು ಎಂದು ಡಿವೈಎಫ್‌ಐ ರಾಜ್ಯ ಮಾಜಿ ಪ್ರಧಾನ ಕಾರ್ಯದರ್ಶಿ ಮಹಾಂತೇಶ್ ಹೇಳಿದರು. ಡಿವೈಎಫ್‌ಐ ಬೈಂದೂರು ತಾಲೂಕು ಸಮಿತಿಯನ್ನು ಆಯ್ಕೆ ಮಾಡಿತು.





ನಾ ದಿವಾಕರ

ಸಾಹಿತ್ಯ ಪರಿಚಾರಕರೋ ಸಂಘ ಪ್ರಚಾರಕರೋ?

ಹಸಿದ ಹೊಟ್ಟೆಗಳಿಗೆ ಉಪನ್ಯಾಸ ಮಾಡದಿರಿ ಎಂದು ಹೇಳಿದ ಜಂಗಮ ಸನ್ಯಾಸಿ ವಿವೇಕಾನಂದರು ಅಧ್ಯಾತ್ಮವನ್ನು ಸಾಂಸ್ಥೀಕರಿಸಿದವರಲ್ಲ, ಸ್ಥಾವರಗಳಲ್ಲಿ ಬಂಧಿಸಿ ಆಯ್ದ ಕೆಲವರಿಗೆ ತಲುಪಿಸಲು ಇಚ್ಚಿಸಿದವರೂ ಅಲ್ಲ. ಅವರ ಆಶಯಗಳನ್ನೇ ಈಡೇರಿಸುವ ಸದುದ್ದೇಶ ರಾಮಕೃಷ್ಣ ಆಶ್ರಮದವರಿಗೆ ಇದ್ದಿದ್ದಲ್ಲಿ ಈ ಹೆಣ್ಣುಮಕ್ಕಳ ಕನ್ನಡ ಶಾಲೆಯನ್ನು ಕೆಡವುವ ಯೋಚನೆಯನ್ನೂ ಮಾಡುತ್ತಿರಲಿಲ್ಲ. ಇಂದು ಭಾರತ ಹಾಳಾಗುತ್ತಿರುವುದೇ ಈ ಕೆಡವುವ ಮನಸುಗಳಿಂದ. ಸಮಾಧಿಯ ಮೇಲೆ ನಿರ್ಮಾಣವಾಗುವ ಸ್ಥಾವರ ಎಷ್ಟೇ ಭವ್ಯವಾಗಿದ್ದರೂ ಅದು ಅಂತಿಮವಾಗಿ "ಗೋರಿ" ಎನಿಸಿಕೊಳ್ಳುವುದೇ ಹೊರತು, ಅರಮನೆಯಾಗುವುದಿಲ್ಲ. ವಿವೇಕಾನಂದರ ಹೆಸರಿನಲ್ಲಿ ನಿರ್ಮಿಸುವ ಸ್ಮಾರಕಕ್ಕೆ ಈ ಹಣೆಪಟ್ಟಿ ಸೂಕ್ತವೇ? ಸಾಹಿತಿಗಳು ಯೋಚಿಸಲಿ.

ಮೈಸೂರಿನ ಎನ್.ಟಿ.ಎಂ.ಎಸ್. ಶಾಲೆಯ ವಿವಾದ ಮೂಲತಃ ಎರಡು ಸಾಂಸ್ಕೃತಿಕ ನೆಲೆಗಳ ನಡುವಿನ ಸಂಘರ್ಷ. ಶಿಕ್ಷಣ, ಜನಪರ ಪರಂಪರೆ ಮತ್ತು ಇತಿಹಾಸ ಒಂದೆಡೆಯಾದರೆ ಆಧುನಿಕ ಸಾಂಸ್ಕೃತಿಕ ರಾಜಕಾರಣ, ಅಧ್ಯಾತ್ಮದ ವಾಣಿಜ್ಯೀಕರಣ ಮತ್ತೊಂದೆಡೆ ಪರಸ್ಪರ ಸಂಘರ್ಷದಲ್ಲಿ ತೊಡಗಿವೆ. ಮತಧರ್ಮ, ಅಧ್ಯಾತ್ಮ ಮತ್ತು ಸಾಂಸ್ಕೃತಿಕ ನೆಲೆಗಳು ಮಾರುಕಟ್ಟೆ ವ್ಯವಸ್ಥೆಯ ಒಂದು ಭಾಗವಾಗಿ ಇಂದು ಭೂಮಿಗಾಗಿ, ಸಂಪತ್ತಿನ ಶೇಖರಣೆಗಾಗಿ, ಬಂಡವಾಳದ ಕ್ರೋಢೀಕರಣಕ್ಕಾಗಿ ಹಾತೊರೆಯುತ್ತಿವೆ. ಈ ಸಂದಿಗ್ಧತೆಯ ನಡುವೆಯ ಜನಪರ ಪರಂಪರೆ, ಜನಸಂಸ್ಕೃತಿ ಮತ್ತು ಶಿಕ್ಷಣವನ್ನೂ ಒಳಗೊಂಡಂತೆ ಸಾರ್ವಜನಿಕ ಸಂಪನ್ಮೂಲಗಳು ಬಂಡವಾಳದ ಆಕ್ರಮಣಕ್ಕೊಳಗಾಗುತ್ತಿವೆ.

ಈ ಹಿನ್ನೆಲೆಯಲ್ಲೇ ಮೈಸೂರಿನಲ್ಲಿ ವಿವೇಕ ಸ್ಮಾರಕದ ವಿವಾದವೂ ಸೃಷ್ಟಿಯಾಗಿದೆ. ಜನಸಂಸ್ಕೃತಿಯನ್ನು ಪ್ರತಿನಿಧಿಸುವ "ಶಾಲೆ ಮತ್ತು ಶಿಕ್ಷಣ" ಎಂಬ ಸ್ಮಾರಕವನ್ನು ಧ್ವಂಸಗೊಳಿಸಿ ವಾಣಿಜ್ಯೀಕರಣಗೊಂಡ ಒಂದು ಆಧ್ಯಾತ್ಮಿಕ ಸ್ಥಾವರವನ್ನು, ಜಂಗಮ ಸನ್ಯಾಸಿ ಎಂದೇ ಕರೆಯಲ್ಪಡುವ ವಿವೇಕಾನಂದರ ನೆನಪಿನಲ್ಲಿ ನಿರ್ಮಿಸುತ್ತಿರುವುದು ಒಂದು ಸಾಂಸ್ಕೃತಿಕ ವಿಕೃತಿ, ಆಧ್ಯಾತ್ಮಿಕ ಕ್ರೌರ್ಯ ಎನ್ನಲಡ್ಡಿಯಿಲ್ಲ. ಆದರೂ ಆಧುನಿಕ ಆಧ್ಯಾತ್ಮಿಕ ಮಾರುಕಟ್ಟೆಗೆ ಭೂ ಆಸ್ತಿ, ಸಂಪತ್ತು ಮತ್ತು ರಾಜಕೀಯ ಒತ್ತಾಸೆ ಇವೆಲ್ಲವೂ ಅತ್ಯಗತ್ಯ. ಭೂಮಿಗಾಗಿ ಹೋರಾಡಬೇಕಾದ ಶೋಷಿತ ವರ್ಗಗಳಿಗಿಂತಲೂ ಹೆಚ್ಚಿನ ಹಪಹಪಿಯಿಂದ ಅಧ್ಯಾತ್ಮ ಕೇಂದ್ರಗಳು, ಮಠಮಾನ್ಯಗಳು ತುಂಡು ಭೂಮಿಗಾಗಿ ಸೆಣಸಾಡುತ್ತಿರುವುದು ಆಧುನಿಕ ಸಾಂಸ್ಕೃತಿಕ ಲೋಕದ ಒಂದು ವಿದ್ಯಮಾನ.

ಮೈಸೂರಿನ ಎನ್.ಟಿ.ಎಂ.ಎಸ್ ಶಾಲೆಯ ವಿವಾದವನ್ನು ಈ ನೆಲೆಯಲ್ಲಿ ನಿಂತು ನೋಡಿದಾಗ, ಪಾರಂಪರಿಕ ಶಾಲೆಯ ಉಳಿವಿಗಾಗಿ ಹೋರಾಡುತ್ತಿರುವ ಜನಪರ ಸಂಘಟನೆಗಳು ಮತ್ತು ಕನ್ನಡ ಪರ ಹೋರಾಟಗಾರರ ಧ್ಯೇಯೋದ್ದೇಶಗಳೂ ಸ್ಪಷ್ಟವಾಗುತ್ತವೆ. ಕಳೆದ 35 ದಿನಗಳಿಂದ ಸತತ ಹೋರಾಟ ಮಾಡುತ್ತಿರುವ ಮೈಸೂರಿನ ವಿಭಿನ್ನ ಸಂಘಟನೆಗಳು ಭೂ ಸ್ವಾಧೀನಕ್ಕಾಗಿ ಹೋರಾಡುತ್ತಿಲ್ಲ, ಒಂದು ನಿವೇಶನದ ಮಾರುಕಟ್ಟೆ ಮೌಲ್ಯಕ್ಕಾಗಿ ಹೋರಾಡುತ್ತಿಲ್ಲ, ವ್ಯಾಪಾರಿ ಮನೋಭಾವದಿಂದ ಮಾರುಕಟ್ಟೆ ಲಾಭವನ್ನು ಬಾಚಿಕೊಳ್ಳುವ ಮಹದಾಸೆಯಿಂದ ಹೋರಾಡುತ್ತಿಲ್ಲ. ಹೋರಾಟನಿರತರ ಪೈಕಿ ಗಾಂಧಿವಾದಿಗಳಿದ್ದಾರೆ, ಕಮ್ಯುನಿಸ್ಟರಿದ್ದಾರೆ, ಕಾರ್ಮಿಕರಿದ್ದಾರೆ, ಮಹಿಳೆಯರಿದ್ದಾರೆ, ಶೋಷಿತ ವರ್ಗಗಳಿವೆ, ಕನ್ನಡಪರ ಮನಸುಗಳಿವೆ. ರಿಯಲ್ ಎಸ್ಟೇಟ್ ಮಾಫಿಯಾಗಳು ಇಲ್ಲಿಲ್ಲ, ಭೂ ಕಬಳಿಕೆಯ ಸರದಾರರು ಪ್ರತಿಭಟನೆಯಲ್ಲಿ ಭಾಗವಹಿಸುತ್ತಿಲ್ಲ. ಈ ಹೋರಾಟಗಾರರ ಉದ್ದೇಶ ಶಾಲೆಯನ್ನು ಉಳಿಸಿಕೊಳ್ಳುವುದಷ್ಟೇ ಆಗಿದೆಯೇ ಹೊರತು, ವಿವೇಕಾನಂದರ ಹೆಸರಿನಲ್ಲಿ ನಿರ್ಮಿಸಲಾಗುವ ಸ್ಮಾರಕವನ್ನು ವಿರೋಧಿಸುವ ಉದ್ದೇಶವಿಲ್ಲ.




ಶಾಲೆಯನ್ನು ಏಕೆ ಉಳಿಸಿಕೊಳ್ಳಬೇಕು? ಅದು ಕನ್ನಡ ಶಾಲೆ, ಹೆಣ್ಣು ಮಕ್ಕಳ ಶಾಲೆ, ಸರ್ಕಾರಿ ಶಾಲೆ ಮತ್ತು ರಾಜಪ್ರಭುತ್ವದಲ್ಲಿ ಜನ್ಮ ತಾಳಿದ ಶಾಲೆ. ದೇಶಾದ್ಯಂತ ಸಣ್ಣ ಪುಟ್ಟ ನಗರಗಳೂ ಕೆಲವೇ ವರ್ಷಗಳಲ್ಲಿ ವಿಸ್ತರಣೆಯಾಗುತ್ತಾ ನಗರೀಕರಣ ಪ್ರಕ್ರಿಯೆಯಲ್ಲಿ ಆಧುನಿಕತೆಯನ್ನು ಮೈಗೂಡಿಸಿಕೊಳ್ಳುವ ಸಂದರ್ಭದಲ್ಲಿ, ಸರ್ಕಾರಿ ಶಾಲೆ ಎನ್ನುವುದು ನಗರ ವ್ಯಾಪ್ತಿಯಿಂದ ಹೊರತಾದ ಒಂದು ವಿದ್ಯಮಾನವಾಗಿದೆ. ನೂತನ ಹಿತವಲಯದ ಬಡಾವಣೆಗಳಲ್ಲಿ ಒಂದಾದರೂ ಸರ್ಕಾರಿ ಶಾಲೆ ತೆರೆಯುವ ಅಥವಾ ಇರುವ ಶಾಲೆಯನ್ನು ಉಳಿಸಿಕೊಳ್ಳುವ ಯೋಗ್ಯತೆ ಇಲ್ಲದ ಒಂದು ಆಡಳಿತ ವ್ಯವಸ್ಥೆಗೆ, ರಾಜಪ್ರಭುತ್ವ ಸ್ಥಾಪಿಸಿದ ಒಂದು ಹೆಣ್ಣುಮಕ್ಕಳ ಕನ್ನಡ ಶಾಲೆಯನ್ನು ಮುಚ್ಚಲು ಯಾವ ಅಧಿಕಾರವಿದೆ? ಇದು ನೈತಿಕತೆಯ ಪ್ರಶ್ನೆ ಅಲ್ಲವೇ?

ಖ್ಯಾತ ಸಾಹಿತಿ ಸನ್ಮಾನ್ಯ ಎಸ್ ಎಲ್ ಭೈರಪ್ಪನವರು, ಶಾಲೆಯ ಉಳಿವಿಗಾಗಿ ಹೋರಾಡುತ್ತಿರುವವರನ್ನು ಅವಹೇಳನ ಮಾಡುವ ಮುನ್ನ ಯೋಚಿಸಬೇಕಿತ್ತಲ್ಲವೇ. ಕನ್ನಡದ ಪ್ರತಿಷ್ಠಿತ ಕಾದಂಬರಿಕಾರರಾಗಿ, ತಮ್ಮ ಬಾಳಿ ಬದುಕಿದ ಮತ್ತು ತಮ್ಮ ಸುತ್ತಲಿನ ಸಮಕಾಲೀನ ಸಮಾಜವನ್ನು ಸಾಹಿತ್ಯ ಕೃತಿಗಳ ಮೂಲಕ ಕಟ್ಟಿಕೊಡುವ ಕಾಯಕದಲ್ಲಿ ತೊಡಗಿರುವ ಓರ್ವ ಸಾಹಿತಿಗೆ ಸಾಮಾಜಿಕ ಸೂಕ್ಷ್ಮತೆಯೊಂದಿಗೇ ಇತಿಹಾಸದ ಸೂಕ್ಷ್ಮತೆಯೂ ಇರಬೇಕಲ್ಲವೇ? ಒಂದು ಪಾರಂಪರಿಕ ಜನಪರ ಸಂಸ್ಥೆಯನ್ನು ಕೆಡವಿ ವಿವೇಕ ಸ್ಮಾರಕವನ್ನು ನಿರ್ಮಿಸುವ ಯೋಚನೆಯೇ ಭಾರತವನ್ನು ಹಾಳು ಮಾಡುವ ಮನೆಹಾಳ ಯೋಜನೆ ಅಲ್ಲವೇ ಭೈರಪ್ಪನವರೇ? ಶಾಲೆಯ ಉಳಿವಿಗಾಗಿ ಹೋರಾಡುತ್ತಿರುವವರು ಸ್ಮಾರಕವನ್ನು ವಿರೋಧಿಸುತ್ತಿಲ್ಲ ಆದರೆ ಈ ಮನೆಹಾಳ ಯೋಚನೆಯನ್ನು ವಿರೋಧಿಸುತ್ತಿದ್ದಾರೆ.

ಈ ಪ್ರತಿಭಟನಕಾರರಿಗೆ ದುಡ್ಡು ಎಲ್ಲಿಂದ ಬರುತ್ತಿದೆ ಎಂಬ ಯೋಚನೆ ಬಂದಕೂಡಲೇ ಮಾನ್ಯ ಭೈರಪ್ಪನವರ ಮನಸಿನಲ್ಲಿ ತಾಲಿಬಾನ್, ಐಸಿಸ್, ನಕ್ಸಲರು, ಭಯೋತ್ಪಾದಕರು, ಖಲಿಸ್ತಾನಿಗಳು, ಪಾಕಿಸ್ತಾನ ಇವೆಲ್ಲವೂ ರುದ್ರತಾಂಡವ ಮಾಡಿಬಿಡುತ್ತವೆ. ಈ ಪ್ರತಿಭಟನೆಯ ಖರ್ಚುಗಳನ್ನು ಪ್ರತಿಭಟನಾಕಾರರೇ ಸರಿದೂಗಿಸುತ್ತಿದ್ದಾರೆ ಎನ್ನುವ ಸತ್ಯ ಭೈರಪ್ಪನವರಿಗೆ ತಿಳಿದಿರಲಿ. ಹೋರಾಟಕ್ಕೆ ಸ್ಪಂದಿಸುವ ಎಲ್ಲ ಮನಸುಗಳೂ ತಮ್ಮ ಶಕ್ತ್ಯಾನುಸಾರ ಸಹಾಯ ಮಾಡಿವೆ. ಯಾರಿಂದಲೂ ಭಿಕ್ಷೆ ಬೇಡಿಲ್ಲ ಅಥವಾ ಗೋಗರೆದು ದೇಣಿಗೆ ಸಂಗ್ರಹ ಮಾಡಿಲ್ಲ. ಸುಪ್ರೀಂಕೋರ್ಟ್ ಮೆಟ್ಟಿಲೇರಲೂ ಸಹ ಸಂವೇದನಾಶೀಲ ಮನಸುಳ್ಳ ವಕೀಲ ವೃಂದ ನೆರವಾಗಿದೆ. ಭಾರತದಲ್ಲಿ ಇನ್ನೂ ಇಂತಹ ಮನಸ್ಸುಗಳು ಜೀವಂತವಾಗಿವೆ ಎನ್ನುವ ವಾಸ್ತವ ಸಾಹಿತಿಯಾದವರಿಗೆ ತಿಳಿದಿರಲೇಬೇಕಲ್ಲವೇ?

೦ ು ' ು ಾ ವ ' ್ರ ದ ' ೂ ೀ ಐಡಿಯಾಲಜಿಯುಳ್ಳವರು ಪ್ರತಿಭಟನೆಗೆ ದುಡ್ಡು ಹಾಕುತ್ತಿರಬಹುದು ಎಂದು ಹೇಳುವ ಮೂಲಕ ಮಾನ್ಯ ಭೈರಪ್ಪನವರು ತಮ್ಮ ಬೌದ್ಧಿಕ



ಭ್ರಷ್ಟತೆಯನ್ನು ತಾವಾಗಿಯೇ ಪ್ರದರ್ಶಿಸಿದ್ದಾರೆ. ಮೈಸೂರಿನ ವರ್ತಕ ಸಮುದಾಯವೂ ಶಾಲೆಯ ಉಳಿವಿಗಾಗಿ ಹೋರಾಡುತ್ತಿದೆ. ಪೌರ ಕಾರ್ಮಿಕರೂ ಹೋರಾಡುತ್ತಿದ್ದಾರೆ. ಇದರಲ್ಲಿ ಸ್ವ ಹಿತಾಸಕ್ತಿ ಹೇಗಿರಲು ಸಾಧ್ಯ ಭೈರಪ್ಪನವರೇ? ಸಮಾಜದ ಅಲಕ್ಷಿತ ಸಮುದಾಯಗಳ ಬಡ ಮಕ್ಕಳು ಓದುವ ಶಾಲೆಯೊಂದರ ಉಳಿವಿಗೆ ಹೋರಾಡುವುದು ಸ್ವಹಿತಾಸಕ್ತಿಯೋ ಅಥವಾ ಅಂತಹ ಶಾಲೆಯೊಂದನ್ನು ನಿರ್ನಾಮ ಮಾಡುವುದು ಸ್ವಾರ್ಥಹಿತಾಸಕ್ತಿಯೋ? ಸಾಹಿತಿಯಾದವರಿಗೆ ಇದು ಅರ್ಥವಾಗಲೇಬೇಕಲ್ಲವೇ?

ಕುವೆಂಪು ಅವರಿಗೆ ಆಧ್ಯಾತ್ಮಿಕ ದೃಷ್ಟಿ ಮತ್ತು ಕಾವ್ಯ ಬರೆಯಲು ರಾಮಕೃಷ್ಣರು ಮತ್ತು ವಿವೇಕಾನಂದರು ಸ್ಫೂರ್ತಿ ನೀಡಿದ್ದಾರೆ ಎಂದು ಅರ್ಥವಾದ ಮೇಲೆ, ಕುವೆಂಪು ಅವರ ವಿಶ್ವಮಾನವ ಸಂದೇಶದ ಹಿಂದೆಯೂ ಇದೇ ಚೇತನಗಳಿವೆ ಎನ್ನುವ ವಾಸ್ತವವೂ ಅರ್ಥವಾಗಬೇಕಲ್ಲವೇ? ಕುವೆಂಪು ಅವರ ಶಿಷ್ಯರೆಂದು ಬೆನ್ನುತಟ್ಟಿಕೊಳ್ಳುವವರೂ ಸಹ ಇದನ್ನು ಅರ್ಥಮಾಡಿಕೊಳ್ಳಬೇಕಲ್ಲವೇ? ರಾಮಕೃಷ್ಣ ಆಶ್ರಮದ ಕನ್ನಡ ಪ್ರೇಮವನ್ನು ಯಾರೂ ಪ್ರಶ್ನಿಸುತ್ತಿಲ್ಲ. ಅಥವಾ ಸಾವಿರಾರು ಕನ್ನಡ ಪುಸ್ತಕಗಳನ್ನು ಪ್ರಕಟಣೆ ಮಾಡಿದ ಮಾತ್ರಕ್ಕೆ ಆಶ್ರಮ ಕನ್ನಡ ಸೇವೆಯಲ್ಲಿ ತೊಡಗಿದೆ ಎಂದು ಪ್ರಮಾಣೀಕರಿಸಲಾಗುವುದಿಲ್ಲ. ಕನ್ನಡ ಪ್ರೇಮ ಅಕ್ಷರ ತುಂಬಿದ ಹಾಳೆಗಳಲ್ಲೇ ಇರುವುದಾದರೆ ಪ್ರತಿಯೊಬ್ಬ ಪ್ರಕಾಶಕರೂ ಕನ್ನಡ ಸೇವೆಯಲ್ಲಿ ತೊಡಗಿರುವ ಕಂದಮ್ಮಗಳೇ ಅಲ್ಲವೇ?

ಶಿಕ್ಷಣ ಮತ್ತು ಅಧ್ಯಾತ್ಮ ಎರಡೂ ವಾಣಿಜ್ಯೀಕರಣಕ್ಕೊಳಗಾಗಿ, ಮಾರುಕಟ್ಟೆ ಜಗುಲಿಯಲ್ಲಿ ಬಿಕರಿಯಾಗಲು ಸಿದ್ಧವಾಗಿರುವ ಸಂದರ್ಭದಲ್ಲಿ ರಾಮಕೃಷ್ಣ ಆಶ್ರಮ ತನ್ನ ಪುಟ್ಟ ಸಾಮ್ರಾಜ್ಯ ವಿಸ್ತರಣೆಗೆ ವಿವೇಕ ಸ್ಮಾರಕವನ್ನು ಅಸ್ತ್ರವನ್ನಾಗಿ ಬಳಸುತ್ತಿರುವುದು ಗುಟ್ಟಿನ ಮಾತೇನಲ್ಲ. ತನ್ನ ಕನ್ನಡ ಸೇವೆಯನ್ನೇ ಮತ್ತಷ್ಟು ವಿಸ್ತರಿಸುವ ಸದುದ್ದೇಶ ಇದ್ದರೆ ಆಶ್ರಮದವರು ಅದನ್ನು ಶಾಲೆಯ ಸಮಾಧಿಯ ಮೇಲೆಯೇ ಏಕೆ ನೆರವೇರಿಸಬೇಕು? ಸಮಾಜದ ಅವಕಾಶ ವಂಚಿತ, ಅಲಕ್ಷಿತ ಜನಸಮುದಾಯಗಳ ಹಕ್ಕುಗಳನ್ನು ಕಸಿದುಕೊಂಡು ಅಧ್ಯಾತ್ಮವನ್ನು ಪೋಷಿಸುವ ವಿಕೃತ ಮನೋಭಾವ ವಿವೇಕಾನಂದರ ಚಿಂತನೆಗೆ ನಿಲುಕುವುದಿಲ್ಲ ಎನ್ನುವ ಸತ್ಯವನ್ನೂ ಭೈರಪ್ಪನವರು ಅರ್ಥಮಾಡಿಕೊಳ್ಳಬೇಕು.

ಹಸಿದ ಹೊಟ್ಟೆಗಳಿಗೆ ಉಪನ್ಯಾಸ ಮಾಡದಿರಿ ಎಂದು ಹೇಳಿದ ಜಂಗಮ ಸನ್ಯಾಸಿ ವಿವೇಕಾನಂದರು ಅಧ್ಯಾತ್ಮವನ್ನು ಸಾಂಸ್ಥೀಕರಿಸಿದವರಲ್ಲ, ಸ್ಥಾವರಗಳಲ್ಲಿ ಬಂಧಿಸಿ ಆಯ್ದ ಕೆಲವರಿಗೆ ತಲುಪಿಸಲು ಇಚ್ಚಿಸಿದವರೂ ಅಲ್ಲ. ಅವರ ಆಶಯಗಳನ್ನೇ ಈಡೇರಿಸುವ ಸದುದ್ದೇಶ ರಾಮಕೃಷ್ಣ ಆಶ್ರಮದವರಿಗೆ ಇದ್ದಿದ್ದಲ್ಲಿ ಈ ಹೆಣ್ಣುಮಕ್ಕಳ ಕನ್ನಡ ಶಾಲೆಯನ್ನು ಕೆಡವುವ ಯೋಚನೆಯನ್ನೂ ಮಾಡುತ್ತಿರಲಿಲ್ಲ. ಇಂದು ಭಾರತ ಹಾಳಾಗುತ್ತಿರುವುದೇ ಈ ಕೆಡವುವ ಮನಸುಗಳಿಂದ. ಸಮಾಧಿಯ ಮೇಲೆ ನಿರ್ಮಾಣವಾಗುವ ಸ್ಥಾವರ ಎಷ್ಟೇ ಭವ್ಯವಾಗಿದ್ದರೂ ಅದು ಅಂತಿಮವಾಗಿ "ಗೋರಿ" ಎನಿಸಿಕೊಳ್ಳುವುದೇ ಹೊರತು, ಅರಮನೆಯಾಗುವುದಿಲ್ಲ. ವಿವೇಕಾನಂದರ ಹೆಸರಿನಲ್ಲಿ ನಿರ್ಮಿಸುವ ಸ್ಮಾರಕಕ್ಕೆ ಈ ಹಣೆಪಟ್ಟಿ ಸೂಕ್ತವೇ? ಸಾಹಿತಿಗಳು ಯೋಚಿಸಲಿ.

ಶಿಕ್ಷಣವನ್ನು ಕಡೆಗಣಿಸುವುದು, ಸಾರ್ವತ್ರಿಕ ಶಿಕ್ಷಣವನ್ನು ಖಾಸಗೀಕರಣಗೊಳಿಸುವುದು, ಶಿಕ್ಷಣವನ್ನು ಮಾರುಕಟ್ಟೆ ಸರಕಿನಂತೆ ಬಿಕರಿ ಮಾಡುವುದು, ಶೈಕ್ಷಣಿಕ ಸಂಸ್ಥೆಗಳನ್ನು ಸಂತೆಮಾಳವನ್ನಾಗಿ ಮಾಡಿ ಸಾಮಾನ್ಯ ಜನರಿಂದ ಲೂಟಿ ಮಾಡುವುದು, ಶಿಕ್ಷಣವನ್ನು ಬಡಜನತೆಯ ಪಾಲಿಗೆ ಗಗನಕುಸುಮ ಮಾಡುವುದು ಇವೆಲ್ಲವೂ "ಭಾರತ ಹಾಳುಮಾಡುವ" ವಿದ್ಯಮಾನಗಳು ಅಲ್ಲವೇ ಭೈರಪ್ಪನವರೇ? ಇಂದು ಭಾರತ ಹಾಳಾಗುತ್ತಿರುವುದೂ ಇಂತಹ ಆಧ್ಯಾತ್ಮಿಕ, ಮತಧಾರ್ಮಿಕ, ಸಾಂಸ್ಕೃತಿಕ ದಲ್ಲಾಳಿಗಳೇ ಅಲ್ಲವೇ ಭೈರಪ್ಪನವರೇ? ಓರ್ವ ಸಾಹಿತಿಯಾಗಿ, ಸಮಾಜದ ಒಳ ಸೂಕ್ಷ್ಮಗಳನ್ನು ಬಲ್ಲ ಮತ್ತು ಗ್ರಹಿಸುವ ಶಕ್ತಿ ಇರುವ ಲೇಖಕರಾಗಿ ಈ ಸೂಕ್ಷ್ಮಗಳು ನಿಮಗೆ ಅರ್ಥವಾಗಿದ್ದರೆ "ಸ್ಮಾರಕ ವಿರೋಧಿಸುವುದು ಭಾರತ ಹಾಳುಮಾಡಿದಂತೆ" ಎಂದು ಹೇಳುತ್ತಿರಲಿಲ್ಲ.

ನೀವು ನಂಬಿ ಬದುಕಿರುವ, ಬದುಕುತ್ತಿರುವ ಮತ್ತು ಆರಾಧಿಸುವ ಸರಸ್ವತಿ ದೇವಿ ನಿಮಗೆ ಸಮಾಜವನ್ನು ನೋಡುವ ಮಸೂರವೊಂದನ್ನು ನೀಡಿರಲಿಕ್ಕೂ ಸಾಕು. ಅದೇ ಮಸೂರದಿಂದ ಸುತ್ತಲಿನ ಸಮಾಜವನ್ನು ನೋಡಿದ್ದರೆ ನಿಮಗೆ ಶಾಲೆ ಉಳಿಸಲು ಹೋರಾಡುತ್ತಿರುವವರಲ್ಲಿ ವಿಧ್ವಂಸಕರು ಕಾಣುತ್ತಿರಲಿಲ್ಲ. ದುರಂತ ಎಂದರೆ ನೀವು ನಿಮ್ಮ ಆರಾಧ್ಯದೈವ ಸರಸ್ವತಿದೇವಿಯ ಮಸೂರವನ್ನು ತೆಗೆದಿಟ್ಟು ಸಂಘದ ಮಸೂರವನ್ನು ತೊಟ್ಟು ಸಮಾಜವನ್ನು ನೋಡುತ್ತಿದ್ದೀರಿ. ಮಸೂರ ಬದಲಿಸಿ, ಮನಸೂ ಬದಲಾಗುತ್ತದೆ. ಸಮಾಜದ ಗರ್ಭದಿಂದ ಉದಯಿಸದ ಸಾಹಿತ್ಯವೂ ನಿರರ್ಥಕವಾಗುತ್ತದೆ ಎನ್ನುವ ಸೂಕ್ಷ್ಮವೂ ನಿಮಗೆ ತಿಳಿದಿರಲೇಬೇಕಲ್ಲವೇ?









ಮದ್ರಾಸ್ ಹೈಕೋರ್ಟಿನಲ್ಲಿ ನ್ಯಾಯಾಂಗ ನಿಂದನೆ ಕ್ರಮದಿಂದ ತಪ್ಪಿಸಿಕೊಳ್ಳಲು ಪ್ರಕಟಿಸಿರುವ ಒಬಿಸಿ ಮೀಸಲಾತಿಯನ್ನು ಮೋದಿಯವರು ತಮ್ಮ ಸರಕಾರದ "ಮೈಲಿಗಲ್ಲಾಗುವ ನಿರ್ಧಾರ' ಎಂದು ವರ್ಣಿಸಿದ್ದಾರೆ. ಒಬಿಸಿ ಮೀಸಲಾತಿ ಕುರಿತ ಮೋದಿ ಸರ್ಕಾರದ ನಿರ್ಲಕ್ಷ್ಯದ ಹಾಗೂ ಪಕ್ಷಪಾತಿ ಧೋರಣೆಯು ಇನ್ನೊಂದು ಸಂಬಂಧಿತ ಪ್ರಕರಣದಲ್ಲಿಯೂ ಬಯಲಾಗಿದೆ. ಅದರಿಂದಾಗಿ ರಾಜ್ಯಗಳು ಒಂದು ಪ್ರಮುಖ ಹಕ್ಕಿನಿಂದ ವಂಚಿತವಾಗಿದ್ದು ಅದನ್ನು ಮರಳಸಲು ತಕ್ಷಣವೇ ಸರಿಪಡಿಕೆ ಕ್ರಮ ಅಗತ್ಯವಾಗಿದೆ.

ಒಬಿಸಿ ಮೀಸಲಾತಿ: ಕೇಂದ್ರದ ಸಂದೇಹಾಸ್ಪದ ನಿಲುವು

ರಾಜ್ಯಗಳ ಅಧಿಕಾರಗಳ ಮೇಲೆ ಮತ್ತೊಂದು ಗದಾಪ್ರಹಾರ



ಪ್ರಕಾಶ ಕಾರಟ್

ವೈದ್ಯಕೀಯ ಹಾಗೂ ದಂತ ವೈದ್ಯಕೀಯದ ಪದವಿ ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣದಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) 27% ಮೀಸಲಾತಿ ಹಾಗೂ ಆರ್ಥಿಕವಾಗಿ ಹಿಂದುಳಿದ ವಿಭಾಗಗಳಿಗೆ (ಇಡಬ್ಲ್ಯುಎಸ್) 10% ಮೀಸಲಾತಿ ಒದಗಿಸುವುದಾಗಿ ನರೇಂದ್ರ ಮೋದಿ ಸರ್ಕಾರ ಪ್ರಕಟಿಸಿದೆ. ಅದು ಒಬಿಸಿಗಳ ಕಲ್ಯಾಣದ ಬಗ್ಗೆ ಮೋದಿ ಸರ್ಕಾರದ ಬದ್ಧತೆಯನ್ನು ತೋರಿಸುತ್ತದೆ ಎಂದು ಬಿಜೆಪಿ ಮತ್ತದರ ಬೆಂಬಲಿಗರು ಹೊಗಳಿದ್ದಾರೆ. ಇದು ತಮ್ಮ ಸರ್ಕಾರದ "ಮೈಲಿಗಲ್ಲಾಗುವ ನಿರ್ಧಾರ' ಎಂದು ಮೋದಿ ವರ್ಣಿಸಿದ್ದಾರೆ.

ಆದರೆ, ಈ ವಿಚಾರದಲ್ಲಿ ಸರ್ಕಾರದ ದಾಖಲೆ ಹೇಳುವ ಸಂಗತಿಯೇ ಬೇರೆ. ವಾಸ್ತವವಾಗಿ, ಮದ್ರಾಸ್ ಹೈಕೋರ್ಟ್ 2020 ಜುಲೈನಲ್ಲಿ ತಾನು ನೀಡಿದ್ದ ತೀರ್ಪನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ವಿಫಲವಾಗಿರುವುದರಿಂದ ನ್ಯಾಯಾಂಗ ನಿಂದನೆ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದರಿಂದ ಕೇಂದ್ರ ಸರ್ಕಾರ ಅನಿವಾರ್ಯವಾಗಿ ಇದನ್ನು ಪ್ರಕಟಿಸಿದೆ.

ವಾಸ್ತವ ಸಂಗತಿಗಳು

ಕೆಲವು ವಾಸ್ತವಾಂಶಗಳು ಹೀಗಿವೆ:

ಎಲ್ಲ ವೈದ್ಯಕೀಯ ಕಾಲೇಜ್‌ಗಳ ಪ್ರವೇಶಕ್ಕೆ ಒಂದೇ ಪ್ರವೇಶ ಪರೀಕ್ಷೆ (ನೀಟ್) ನಡೆಸಬೇಕೆಂದು ಸುಪ್ರೀಂ ಕೋರ್ಟ್ 2016ರಲ್ಲಿ ಆದೇಶಿಸಿತ್ತು. ನೀಟ್ ಅನ್ವಯ ನಡೆಸಲಾದ ಪ್ರವೇಶಾತಿಯಲ್ಲಿ 15% ಪದವಿ ಸೀಟ್ ಹಾಗೂ 50% ಸ್ನಾತಕೋತ್ತರ ಸೀಟ್‌ಗಳನ್ನು ಅಖಿಲ–ಭಾರತ ಕೋಟಾಗೆ ರಾಜ್ಯಗಳು ಬಿಟ್ಟುಕೊಟ್ಟವು. ಈ ಸೀಟುಗಳನ್ನು ಕೇಂದ್ರೀಯ ಪಟ್ಟಿ ಮೂಲಕ ಭರ್ತಿ ಮಾಡಲಾಗಿತ್ತು. ಅದಕ್ಕೂ ಮುನ್ನ 2007ರಲ್ಲಿ, ಅಖಿಲ ಭಾರತ ಕೋಟಾದಡಿ ಶೇಕಡ 15 ಸೀಟ್‌ಗಳನ್ನು ಪರಿಶಿಷ್ಟ ಜಾತಿ ಹಾಗೂ ಶೇ. 7.5 ಸೀಟ್‌ಗಳನ್ನು ಪರಿಶಿಷ್ಟ ಪಂಗಡಕ್ಕೆ ಮೀಸಲಿಡಬೇಕೆಂದು ಸರ್ವೋಚ್ಚ ನ್ಯಾಯಾಲಯ ನಿರ್ದೇಶಿಸಿತ್ತು. ಆದರೆ ಅಖಿಲ ಭಾರತ ಕೋಟಾದಲ್ಲಿ ಒಬಿಸಿ ಮೀಸಲಾತಿಗೆ ಅವಕಾಶವಿರಲಿಲ್ಲ. ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಒಬಿಸಿಗಳಿಗೆ 27 ಪ್ರತಶತ ಮೀಸಲಾತಿ ಕಲ್ಪಿಸಬೇಕೆಂಬ ಕೇಂದ್ರೀಯ ಕಾನೂನನ್ನು ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಗತಿಪರ ಮೈತ್ರಿಕೂಟದ (ಯುಪಿಎ) ಸರ್ಕಾರ ಅಧಿಕಾರದಲ್ಲಿದ್ದಾಗ ಅಂಗೀಕರಿಸಿದ್ದರೂ ಒಬಿಸಿಗೆ ಆ ಮೀಸಲಾತಿ ನೀಡಿರಲಿಲ್ಲ.

"ಅಖಿಲ ಭಾರತ ಕೋಟಾದಲ್ಲಿ ಒಬಿಸಿ ಮೀಸಲಾತಿಯನ್ನು ತಮಿಳುನಾಡಿನಲ್ಲಿ 2021–22ರ ಶೈಕ್ಷಣಿಕ ವರ್ಷದಲ್ಲಿ ಜಾರಿ ಮಾಡದಿರುವ ಕೇಂದ್ರ ಸರ್ಕಾರದ ಪ್ರಯತ್ನವು 2020 ಜುಲೈ 27ರ ಹೈಕೋರ್ಟ್ ಆದೇಶವನ್ನು ಮೊಂಡುತನದಿಂದ ಹೀನಾಯಗೊಳಿಸುವಂತೆ ಕಾಣುತ್ತಿದೆ" ಎಂದು ಇದೇ ಜುಲೈ 19ರಂದು ಹೈಕೋರ್ಟ್ ಕಟುವಾಗಿ ಹೇಳಿತ್ತು. ಕೋರ್ಟ್‌ನ ಈ ಖಾರವಾದ ಟಿಪ್ಪಣಿಯ ಹಿನ್ನೆಲೆಯಲ್ಲಿ ನ್ಯಾಯಾಂಗ ನಿಂದನೆ ಪ್ರಕರ'ಣ ಎದುರಿಸಬೇಕಾದ ಭೀತಿಯಿಂದ ಕೇಂದ್ರ ಸರ್ಕಾರ ಅಖಿಲ ಭಾರತ ಕೋಟಾದಲ್ಲಿ ಒಬಿಸಿ ಮೀಸಲಾತಿಯನ್ನು ಪ್ರಕಟಿಸಿದೆ.

ಹೀಗೆ, ಕೇಂದ್ರ ವ್ಯಾಪ್ತಿಯಲ್ಲಿ ಬರುವ ಅಖಿಲ ಭಾರತ ಕೋಟಾದಲ್ಲಿ ಒಬಿಸಿಗೆ ಮೀಸಲಾತಿ ಕಲ್ಪಿಸದಿರುವುದು ತಾರತಮ್ಯವಾಗುತ್ತದೆ. ಆದರೆ, ನೀಟ್ ವ್ಯವಸ್ಥೆಯನ್ನು ಪರಿಚಯಿಸಿದಾಗಿನಿಂದ ಮೆಡಿಕಲ್ ಮತ್ತು ಡೆಂಟಲ್ ಕಾಲೇಜ್ ಸೀಟ್‌ಗಳಲ್ಲಿ ಒಬಿಸಿಗಳಿಗೆ ಮೀಸಲಾತಿ ಒದಗಿಸಲು ಮೋದಿ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ.

ತಮಿಳುನಾಡಿನಲ್ಲಿ ಕೋರ್ಟ್‌ಗೆ ಮೊರೆ

ನ್ಯಾಯಾಂಗ ನಿಂದನೆ ಪ್ರಕರಣ

ಅಖಿಲ ಭಾರತ ಕೋಟಾಕ್ಕೆ ತಮಿಳು ನಾಡು ಸರ್ಕಾರ ಬಿಟ್ಟುಕೊಟ್ಟಿದ್ದ ಸೀಟ್‌ಗಳಲ್ಲಿ ಒಬಿಸಿಗಳಿಗೆ 50% ಮೀಸಲಾತಿ ಒದಗಿಸುವಂತೆ ನಿರ್ದೇಶನ ಕೋರಿ ಡಿಎಂಕೆ ಮತ್ತು ಸಿಪಿಐ (ಎಂ) ಸಹಿತ ತಮಿಳು ನಾಡಿನ ಪ್ರಮುಖ ರಾಜಕೀಯ ಪಕ್ಷಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದವು. ಈ ವಿಚಾರವನ್ನು ಕೈಗೆತ್ತಿಕೊಳ್ಳಲು ಕೋರ್ಟ್ ನಿರಾಕರಿಸಿತ್ತು. ಹೈಕೋರ್ಟ್ ಇದರ ವಿಚಾರಣೆ ನಡೆಸಬಹುದು ಎಂದಿತ್ತು. 2020 ಜುಲೈನಲ್ಲಿ, ಒಬಿಸಿ ಮೀಸಲಾತಿಯ ಕಾನೂನುಸಮ್ಮತತೆಯನ್ನು ಹೈಕೋರ್ಟ್ ಎತ್ತಿ ಹಿಡಿದಿತ್ತು. ಈ ಅಕಾಡೆಮಿಕ್ ವರ್ಷದಿಂದಲೇ ಅದರ ಅನುಷ್ಠಾನಕ್ಕೆ ವಿಧಿ–ವಿಧಾನಗಳನ್ನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿತ್ತು. ಆದರೆ, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಈ ವರ್ಷದ ಯೋಜನೆಯಲ್ಲಿ ಒಬಿಸಿಗಳಿಗೆ ಮೀಸಲಾತಿ ಕಲ್ಪಿಸಲಿಲ್ಲ.

ಈ ಹಿನ್ನೆಲೆಯಲ್ಲಿ ಡಿಎಂಕೆ ಮದ್ರಾಸ್ ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಕೇಸ್ ದಾಖಲಿಸಿತ್ತು. "ಅಖಿಲ ಭಾರತ ಕೋಟಾದಲ್ಲಿ ಒಬಿಸಿ ಮೀಸಲಾತಿಯನ್ನು ತಮಿಳುನಾಡಿನಲ್ಲಿ 2021–22ರ ಶೈಕ್ಷಣಿಕ ವರ್ಷದಲ್ಲಿ ಜಾರಿ ಮಾಡದಿರುವ ಕೇಂದ್ರ ಸರ್ಕಾರದ ಪ್ರಯತ್ನವು 2020 ಜುಲೈ 27ರ ಹೈಕೋರ್ಟ್ ಆದೇಶವನ್ನು ಮೊಂಡುತನದಿಂದ ಹೀನಾಯ ಗೊಳಿಸುವಂತೆ ಕಾಣುತ್ತಿದೆ" ಎಂದು ಇದೇ ಜುಲೈ 19ರಂದು ಹೈಕೋರ್ಟ್ ಕಟುವಾಗಿ ಹೇಳಿತ್ತು. ಕೋರ್ಟ್‌ನ ಈ ಖಾರವಾದ ಟಿಪ್ಪಣಿಯ ಹಿನ್ನೆಲೆಯಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ ಎದುರಿಸಬೇಕಾದ ಭೀತಿಯಿಂದ ಕೇಂದ್ರ ಸರ್ಕಾರ ಅಖಿಲ ಭಾರತ ಕೋಟಾದಲ್ಲಿ ಒಬಿಸಿ ಮೀಸಲಾತಿಯನ್ನು ಪ್ರಕಟಿಸಿದೆ.

ಒಬಿಸಿ ಮೀಸಲಾತಿ ಕುರಿತ ಮೋದಿ ಸರ್ಕಾರದ ನಿರ್ಲಕ್ಷ್ಯದ ಹಾಗೂ ಪಕ್ಷಪಾತಿ ಧೋರಣೆಯು ಇನ್ನೊಂದು ಸಂಬಂಧಿತ ಪ್ರಕರಣದಲ್ಲಿಯೂ ಬಯಲಾಗಿದೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಾಂವಿಧಾನಿಕ ಸ್ಥಾಮಾನ ಕಲ್ಪಿಸಲು 2018 ಆಗಸ್ಟ್‌ನಲ್ಲಿ ಸಂಸತ್ತಿನಲ್ಲಿ ಸಂವಿಧಾನ ತಿದ್ದುಪಡಿಯನ್ನು ಮೋದಿ ಸರ್ಕಾರ ಅಂಗೀಕರಿಸಿತ್ತು. ಒಂದು ವರ್ಗವನ್ನು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗ (ಎಸ್‌ಇಬಿಸಿ) ಎಂದು ಅಧಿಸೂಚಿಸುವ ಅಧಿಕಾರ ರಾಷ್ಟ್ರಪತಿಗೆ ಇರುತ್ತದೆ ಎಂಬ ನಿಯಮವನ್ನು ಅದರಲ್ಲಿ ಸೇರಿಸಲಾಗಿತ್ತು. ಇದು ಒಬಿಸಿಗಳನ್ನು ಗುರುತಿಸುವ ರಾಜ್ಯಗಳ ಹಕ್ಕಿನ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂದು ಆಗ ಪ್ರತಿಪಕ್ಷಗಳ ಸದಸ್ಯರು ಸಂಸತ್ತಿನಲ್ಲಿ ಹೇಳಿದ್ದರು. ಆದರೆ ಇಂಥ ಆಕ್ಷೇಪಗಳನ್ನು ಸರ್ಕಾರ ತಳ್ಳಿ ಹಾಕಿತ್ತು. ಆಗಿನ ವರೆಗೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಮೂಲಕವೇ ಕೇಂದ್ರ ಪಟ್ಟಿಗೆ ಒಬಿಸಿಗಳನ್ನು ಗುರುತಿಸುತ್ತಿತ್ತು. ರಾಜ್ಯ ಸರ್ಕಾರಗಳು ರಾಜ್ಯ ಹಿಂದುಳಿದ ವರ್ಗಗಳ ಆಯೋಗಗಳ ಮೂಲಕ ರಾಜ್ಯ ಪಟ್ಟಿಗೆ ಒಬಿಸಿಗಳನ್ನು ಗುರುತಿಸುತ್ತಿದ್ದವು.

ಸಂವಿಧಾನ ತಿದ್ದುಪಡಿ ಅಗತ್ಯ

ಇದೇ ವರ್ಷ ಮೇ ತಿಂಗಳಲ್ಲಿ ಈ ತಿದ್ದುಪಡಿಗೆ ಸಂಬಂಧಿಸಿದ ಪ್ರಕರಣವೊಂದರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಸಂವಿಧಾನದ 102ನೇ ತಿದ್ದುಪಡಿ ಒಬಿಸಿಗಳು ಯಾರು ಎಂಬುದನ್ನು ನಿರ್ಣಯಿಸುವ ಅಧಿಕಾರ ರಾಷ್ಟ್ರಪತಿ, ಅಂದರೆ ಕೇಂದ್ರ ಸರ್ಕಾರದಲ್ಲಿ ಇರುತ್ತದೆ ಎಂದು ವ್ಯಾಖ್ಯಾನಿಸಿತ್ತು. ಈ ತಿದ್ದುಪಡಿ ಮೂಲಕ ರಾಜ್ಯಗಳು ತಮ್ಮ ಹಕ್ಕಿನಿಂದ ವಂಚಿತವಾಗಿವೆ ಎಂದು ಸುಪ್ರೀಂ ಕೋರ್ಟ್‌ನ ಈ ತೀರ್ಪು ಹೇಳುತ್ತದೆ. ರಾಜ್ಯಗಳು ರಾಷ್ಟ್ರಪತಿ ಅಥವಾ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಲಹೆ ನೀಡಬಹುದು ಅಷ್ಟೇ.

ಇದು ರಾಜ್ಯಗಳ ವ್ಯಾಪ್ತಿಯಲ್ಲಿ ಒಬಿಸಿಗಳನ್ನು ನಿರ್ಧರಿಸುವ ರಾಜ್ಯಗಳ ಹಕ್ಕಿನ ಮೇಲೆ ಒಂದು ಗದಾ ಪ್ರಹಾರವಾಗಿದೆ. ರಾಜ್ಯಗಳ ಹಕ್ಕನ್ನು ವಂಚಿಸುವುದು ಸಂವಿಧಾನ ತಿದ್ದುಪಡಿಯು ಉದ್ದೇಶವಲ್ಲ ಎಂದು ಮೋದಿ ಸರ್ಕಾರ ಹೇಳಿದರೂ ಆಗಿರುವ ಅನಾಹುತವನ್ನು ಸರಿ ಮಾಡಲು ಅದು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಹಿಂದಿನ ತಪ್ಪು–ಹೆಜ್ಜೆಯನ್ನು ಸರಿಪಡಿಸಲು ಸಂವಿಧಾನದ ತಿದ್ದುಪಡಿ ಅಗತ್ಯವಾಗಿದೆ.

ರಾಜ್ಯಗಳ ಹಕ್ಕನ್ನು ವಂಚಿಸುವುದು 102ನೇ ಸಂವಿಧಾನ ತಿದ್ದುಪಡಿಯ ಉದ್ದೇಶವಲ್ಲ ಎಂದು ಮೋದಿ ಸರ್ಕಾರ ಹೇಳಿದರೂ ಆಗಿರುವ ಅನಾಹುತವನ್ನು ಸರಿ ಮಾಡಲು ಅದು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇದನ್ನು ಸರಿಪಡಿಸಲು ಸಂವಿಧಾನದ ತಿದ್ದುಪಡಿ ತರುವ ಬದಲು ಅದು ಸುಪ್ರೀಂ ಕೋರ್ಟ್‌ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸಿತು, ಅದನ್ನು ಕೋರ್ಟ್ ತಿರಸ್ಕರಿಸಿದೆ. ಕೋರ್ಟ್‌ಗೆ ಹೋಗುವ ಬದಲು ಸರ್ಕಾರ ಸಂಸತ್ತಿನ ಪ್ರಸಕ್ತ ಮುಂಗಾರು ಅಧಿವೇಶನದಲ್ಲಿ ನೇರವಾಗಿ ಸಂವಿಧಾನ ತಿದ್ದುಪಡಿಯ ದಾರಿಯನ್ನು ಅನುಸರಿಸಬೇಕಿತ್ತು. ಈಗ ಸಮಯವನ್ನು ವ್ಯರ್ಥ ಮಾಡಿದ ನಂತರ ಅಧಿವೇಶನದ ಮಧ್ಯದಲ್ಲಿ ಸಂವಿಧಾನ ತಿದ್ದುಪಡಿ ವಿಧೇಯಕ ಮಂಡಿಸಲು ಕೇಂದ್ರ ಸಚಿವ ಸಂಪುಟ ನಿರ್ಧರಿಸಿದೆ.

ಮೋದಿ ಸರ್ಕಾರ ಹಾಗೆ ಮಾಡುವ ಬದಲು ಸುಪ್ರೀಂ ಕೋರ್ಟ್‌ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದು ಅದನ್ನು ಕೋರ್ಟ್ ತಿರಸ್ಕರಿಸಿದೆ. ಕೋರ್ಟ್‌ಗೆ ಹೋಗುವ ಬದಲು ಸರ್ಕಾರ ಸಂಸತ್ತಿನ ಪ್ರಸಕ್ತ ಮುಂಗಾರು ಅಧಿವೇಶನದಲ್ಲಿ ನೇರವಾಗಿ ಸಂವಿಧಾನ ತಿದ್ದುಪಡಿಯ ದಾರಿಯನ್ನು ಅನುಸರಿಸಬೇಕಿತ್ತು. ಆದರೆ ಸಮಯವನ್ನು ವ್ಯರ್ಥ ಮಾಡಿದ ನಂತರ ಅಧಿವೇಶನದ ಮಧ್ಯದಲ್ಲಿ ಸಂವಿಧಾನ ತಿದ್ದುಪಡಿ ವಿಧೇಯಕ ಮಂಡಿಸಲು ಕೇಂದ್ರ ಸಚಿವ ಸಂಪುಟ ನಿರ್ಧರಿಸಿದೆ. ಸರ್ಕಾರದ ವಿವೇಚನಾಶೂನ್ಯ ಕ್ರಮದಿಂದ ರಾಜ್ಯಗಳು ಪ್ರಮುಖ ಹಕ್ಕಿನಿಂದ ವಂಚಿತವಾಗಿದ್ದು ಅದನ್ನು ಮರಳಿಸಲು ಆ ಕ್ರಮವನ್ನು ತಕ್ಷಣವೇ ಸರಿಪಡಿಸಬೇಕಾಗಿದೆ.

ಅನು: ವಿಶ್ವ

ಈ ಅಧ್ಯಯನ ಹೊರ ತಂದಿರುವ ಒಂದು ದೊಡ್ಡ ಅಂಶವೆಂದರೆ (ಹಾಲಿ ಅಥವಾ ಮಾಜಿ) ಸಮಾಜವಾದಿ ದೇಶಗಳು ಬೇರೆ ಸಮಾನಾರ್ಥಕ ಆರ್ಥಿಕ ಸಾಮಾಜಿಕ ಸಾಂಸ್ಕೃತಿ ಮಟ್ಟ ಇರುವ ದೇಶಗಳಿಗಿಂತ ಪದಕ ಗಳಿಕೆಯಲ್ಲಿ ಮುಂದಿವೆ.ಇವೆಲ್ಲದಕ್ಕೂ ಸಮಾಜವಾದಿ ವ್ಯವಸ್ಥೆ ಸಾಮಾನ್ಯ ಅಂಶವಾಗಿದ್ದರೂ ಆ ವ್ಯವಸ್ಥೆಯ ಯಾವ ಅಂಶಗಳು ಪದಕ ಪಟ್ಟಿಯಲ್ಲಿ ಮೇಲಿರಲು ಸಹಾಯಕವಾಗಿವೆ ಎಂದು ತಿಳಿಯಲು ಈ ಅಧ್ಯಯನ ಪ್ರಯತ್ನಿಸಿದೆ. ಶಾಲಾ ಪೂರ್ವ ಹಂತದಿಂದ ವಿ.ವಿ. ವರೆಗೆ ಆಟೋಟಗಳು ಶಿಕ್ಷಣದ ಭಾಗವಾಗಿರುವುದು, ಪ್ರತಿ ಹಂತದಲ್ಲೂ (ಶಾಲಾ, ಅಂತರ-ಶಾಲಾ, ಜಿಲ್ಲಾ, ರಾಜ್ಯ, ರಾಷ್ಟ್ರೀಯ) ಕ್ರೀಡಾ ಸ್ಪರ್ಧೆಗಳು, ಆಟೋಟಗಳಲ್ಲಿ ಉತ್ತಮ ಪ್ರಗತಿ ತೋರಿಸಿದವರಿಗೆ ಉತ್ತೇಜನ, ಇಂತಹವರಿಗೆ ವಿಶೇಷ ಗೌರವ ಮತ್ತು ತರಬೇತಿ, ರಾಷ್ಟ್ರೀಯ ಆಟಗಳ ವಿಜೇತರಿಗೆ ಅಂತರ್ರಾಷ್ಟ್ರೀಯ ಸ್ಪರ್ಧೆಗೆ ಆಟೋಟಗಳಲ್ಲಿ ಸ್ಪರ್ಧಿಸಲು ವಿಶೇಷ ತರಬೇತಿ ಉತ್ತೇಜನ, ಕ್ರೀಡಾ ವೃತ್ತಿ ಜೀವನದಿಂದ ನಿವೃತ್ತಿಯ ನಂತರ ವಿಶೇಷ ಶಿಕ್ಷಣ-ಉದ್ಯೋಗ ಅವಕಾಶ - ಇವುಗಳು ಇರುವ ಒಂದು ಸಮಗ್ರ ರಾಷ್ಟ್ರೀಯ ಕ್ರೀಡಾ ನೀತಿ ಆ ಅಂಶ ಎಂದು ಅಧ್ಯಯನ ತಿಳಿಸುತ್ತದೆ.



ಭಾರತ ಒಲಿಂಪಿಕ್ಸ್ ನಲ್ಲಿ ವಿಶ್ವಗುರು ಆದೀತೆ?

ವಸಂತರಾಜ ಎನ್.ಕೆ.

ಪ್ರತಿ ಒಲಿಂಪಿಕ್ಸ್ ಮುಗಿಯುವ ಹೊತ್ತಿಗೆ ಭಾರತದ ಎದುರು ಹಲವು ಪ್ರಶ್ನೆಗಳು ಎದುರಾಗುತ್ತವೆ. ಒಲಿಂಪಿಕ್ಸ್ ನಲ್ಲಿ ಶತಕೋಟಿ+ ಜನಸಂಖ್ಯೆ ಇರುವ ನಮ್ಮ ದೇಶದ ಸಾಧನೆ ಇಷ್ಟು ಯಾಕೆ ಕಳಪೆಯಾಗಿರುತ್ತದೆ. ಎಲ್ಲದರಲ್ಲೂ ವಿಶ್ವಗುರು ಆಗುವ ಆಕಾಂಕ್ಷೆ ಇರುವ 5 ಟ್ರಿಲಿಯನ್ ಆರ್ಥಿಕತೆಯ ಕನಸು ಕಾಣುತ್ತಿರುವ ನಾವು ನಮ್ಮ ಒಲಿಂಪಿಕ್ಸ್ ಪದಕಗಳು ಎರಡಂಕಿ ತಲುಪಬೇಕು ಎಂಬ ಕನಸಾದರೂ ಕಾಣುವುದು ಬೇಡವೇ? ನಿಧಾನವಾಗಿಯಾದರೂ ಪದಕಗಳ ಸಂಖ್ಯೆ ಯಾಕೆ ಏರುತ್ತಿಲ್ಲ? ಇದಕ್ಕೆ ನಿರ್ದಿಷ್ಟ ಕಾರಣಗಳೇನು? ಇದಕ್ಕೆ ಪರಿಹಾರಗಳೇನು? ಈ ಬಗ್ಗೆ ನಾವು ಯೋಚಿಸುತ್ತಿದ್ದೇವಾ? ಕ್ರಮ ಕೈಗೊಳ್ಳುತ್ತಿದ್ದೇವಾ? ಇಲ್ಲ ಎನ್ನುತ್ತಾರೆ, ಹಾಲಿ ಮತ್ತು ಮಾಜಿ ಕ್ರೀಡಾಪಟುಗಳು, ತರಬೇತಿದಾರರು ಮತ್ತು ಪ್ರಾಮಾಣಿಕ (ಈ ವಿಶೇಷಣ ಬೇಕು, ಈ ಕುರಿತು ವಿವರಗಳು ಅ ಮೇಲೆ) ಕ್ರೀಡಾ ಅಧಿಕಾರಿಗಳು ಆಡಳಿತಗಾರರು. ಒಲಿಂಪಿಕ್ಸ್ ಪಂದ್ಯಗಳು ನಡೆಯುತ್ತಿರುವಾಗ ಮಾಧ್ಯಮಗಳಲ್ಲಿ ಸಾರ್ವಜನಿಕರಲ್ಲಿ ಎಲ್ಲೆಡೆ ಚರ್ಚೆ ನಡೆಯುತ್ತದೆ. ಆ ಮೇಲೆ ಎಲ್ಲರೂ ಮರೆತು ಬಿಡುತ್ತಾರೆ, ಮುಂದಿನ ಒಲಿಂಪಿಕ್ಸ್ ಬರುವವರೆಗೆ.

ಈ ಒಲಿಂಪಿಕ್ಸ್ ನಲ್ಲಿ ನಮ್ಮ ಸಾಧನೆ ಯಾವುದಾದರೂ ಆಯಾಮದಲ್ಲಿ 'ಪ್ರಗತಿ' ಕಂಡಿದೆಯೇ? ಭಾರತ ಒಲಿಂಪಿಕ್ಸ್ ನಲ್ಲಿ ಪ್ರತ್ಯೇಕ ದೇಶವಾಗಿ ಪಾಲುಗೊಳ್ಳಲು ಆರಂಭವಾಗಿನಿಂದ ಹೆಚ್ಚಾಗಿ 1 ಪದಕಕ್ಕೆ ಸೀಮಿತವಾಗಿದೆ. 3 ಬಾರಿ (1900, 1952, 2016) ಮಾತ್ರ 2 ಪದಕಗಳು, 1 ಬಾರಿ (2008) ಮಾತ್ರ 3 ಪದಕಗಳು ಬಂದಿವೆ. 2012ರಲ್ಲಿ ಪಡೆದ 6 ಪದಕಗಳು ಭಾರತ ಗಳಿಸಿದ ಅತ್ಯಧಿಕ ಪದಕಗಳು.

ಈ ಬಾರಿ ಈ ವರೆಗೆ (ಶುಕ್ರವಾರ ಅಗಸ್ಟ್ 6 ಸಂಜೆ) 5 ಪದಕಗಳು ಬಂದಿರುವುದು ಈ ವರೆಗಿನ ಪರಿಸ್ಥಿತಿಯಲ್ಲಿ ಸಮಾಧಾನಕಾರ ಎನ್ನಬಹುದೇ ಹೊರತು ಪ್ರಗತಿ ಎನ್ನಲಿಕ್ಕಾಗುವುದಿಲ್ಲ. ಇನ್ನು ಒಂದೆರಡು ಪದಕದ ಸಾಧ್ಯತೆಯಿರಬಹುದು. ಅದು ಆದರೆ, 7 ಪದಕಗಳೊಂದಿಗೆ ಸ್ವಲ್ಪ ಪ್ರಗತಿಯಾಗಿದೆ ಎನ್ನಬಹುದು.

ಈ ವರೆಗಿನ ಎಲ್ಲ ಒಲಿಂಪಿಕ್ಸ್ ಸೇರಿಸಿದರೆ ಒಟ್ಟು 9 ಬಾರಿ ಚಿನ್ನ ಪದಕ ಗೆದ್ದಿದೆ. ಇದರಲ್ಲಿ 8 ಬಾರಿ (1928ರಿಂದ 1956 ವರೆಗೆ ಸತತ 6 ಬಾರಿ, 1960, 1980) ಗೆದ್ದಿದ್ದು ಪುರುಷರ ಹಾಕಿ ತಂಡ. 2008ರಲ್ಲಿ ಮಾತ್ರ ಅಭಿನವ ಬಿಂದ್ರಾ ಶೂಟಿಂಗ್ ನಲ್ಲಿ ಚಿನ್ನ ಗೆದ್ದಿದ್ದಾರೆ. ಕ್ರೀಡೆ ಅಥವಾ ಆಟೋಟ ಎನ್ನುವಾಗ ಎರಡು ಭಾಗಗಳಿವೆ. ಆಟ (ಗೇಮ್ಸ್) ಮತ್ತು ಓಟ (ಸ್ಪೋರ್ಟ್ಸ್) – ಈ ಎರಡು ವಿಭಾಗಗಳಲ್ಲಿ ಆಟದಲ್ಲಿ (ಹಾಕಿ, ಬ್ಯಾಡ್ಮಿಂಟನ್, ಟೆನ್ನಿಸ್) ಮಾತ್ರ ಭಾರತ ಸ್ವಲ್ಪ ಮಟ್ಟಿಗಾದರೂ ಪೈಪೋಟಿಯಲ್ಲಿ ಇರುತ್ತಿತ್ತು. ಇತ್ತೀಚಿನ ವರೆಗೆ ಓಟದಲ್ಲಿ ಪೈಪೋಟಿಯಲ್ಲೇ ಇರುತ್ತಿರಲಿಲ್ಲ. ಆದರೆ 2000ದಿಂದ 2016 ವರೆಗೆ ಸಿಂಧು ಬ್ಯಾಡ್ಮಿಂಟನ್ ಪದಕ ಬಿಟ್ಟರೆ ಎಲ್ಲ ಪದಕಗಳು ಓಟಗಳಿಗೆ (ಕುಸ್ತಿ, ಓಟ, ಭಾರ ಎತ್ತುವಿಕೆ, ಶೂಟಿಂಗ್, ಇತ್ಯಾದಿ) ಬಂದಿವೆ. ಇತರ ಹಲವು ಓಟಗಳಲ್ಲಿ 4 ನೇ ಸ್ಥಾನದವರೆಗೆ ತಲುಪಿದ್ದರು ಎನ್ನುವುದು ಸ್ವಲ್ಪ ಮಟ್ಟಿನ ಪ್ರಗತಿ.

ಜಿಡಿಪಿ, ತಲಾ ಜಿಡಿಪಿ ಸಾಧನೆಯ ಮುಖ್ಯ ಅಂಶವಾ?

ಈಗ ಇತರ ದೇಶಗಳಿಗೆ ಹೋಲಿಸಿ ನೋಡಿದರೆ ಭಾರತದ ಸಾಧನೆ ಏನು? ಒಲಿಂಪಿಕ್ಸ್ ಪದಕಗಳ ಆಧಾರದ (ಚಿನ್ನ, ಬೆಳ್ಳಿ, ಕಂಚು – ಬೇರೆ ಭಾರ ಹೊಂದಿರುತ್ತವೆ) ಮೇಲೆ ರ್‍ಯಾಂಕ್ ಮಾಡಲಾಗುತ್ತದೆ. 2016ರಲ್ಲಿ ಭಾರತ 67ನೇ ರ್‍ಯಾಂಕ್ ನಲ್ಲಿತ್ತು. ಈ ಬಾರಿ 65ನೇ ರ್‍ಯಾಂಕಿಗೆ ಏರಿದೆ. ಆದರೆ 2012ರಲ್ಲಿ 6 ಪದಕಗಳೊಂದಿಗೆ (2 ಬೆಳ್ಳಿ, 4 ಕಂಚು) ಭಾರತ 57ನೇ ರ್‍ಯಾಂಕ್ ಪಡೆದಿತ್ತು. ಅಲ್ಲಿಂದ ಪ್ರಗತಿಯಾಗಿಲ್ಲ. ಇನ್ನೂ ಪದಕ–ಜನಸಂಖ್ಯೆ(ಜನಸಂಖ್ಯೆಯನ್ನು ಪದಕಗಳ ಸಂಖ್ಯೆಯಿಂದ ಭಾಗಿಸಿದರೆ ಬರುವ ಸಂಖ್ಯೆ) ಯಲ್ಲಿ ಈ ಬಾರಿಯೂ ಸೇರಿದಂತೆ (87ನೇ ಸ್ಥಾನ) ಯಾವತ್ತೂ ಕೊನೆ ಸ್ಥಾನದಲ್ಲಿರುತ್ತದೆ. ಇದು ದೊಡ್ಡ ಮಾನದಂಡವಲ್ಲ. ಈ ಸೂಚಕವು, ಪದಕಗಳ ಸಂಖ್ಯೆ ಸೀಮಿತವಿರುವುದರಿಂದ ದೊಡ್ಡ ಜನಸಂಖ್ಯೆ ಇರುವ ದೇಶಗಳಿಗೆ ಪ್ರತಿಕೂಲವಾಗಿರುತ್ತದೆ. ಆದರೂ ಸತತವಾಗಿ ಕೊನೆಯ ಸ್ಥಾನ ಸ್ವೀಕಾರಾರ್ಹವೂ ಅಲ್ಲ, ಅನಿವಾರ್ಯವೂ ಅಲ್ಲ. ಉದಾಹರಣೆಗೆ ಭಾರತಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಚೀನಾ 73 ನೇ ಸ್ಥಾನದಲ್ಲಿದೆ. ಸಾಕಷ್ಟು ಜನಸಂಖ್ಯೆ ಇರುವ ಅಮೆರಿಕ 55ನೇ, ಬ್ರೆಜಿಲ್ 69ನೇ ಸ್ಥಾನದಲ್ಲಿದೆ.

ಪದಕಗಳ ಗೆಲುವಿನಲ್ಲಿ ಯಾವುದು ಎಷ್ಟು ಪಾತ್ರ ವಹಿಸುತ್ತದೆ ಎಂದು ಹಲವು ಅಧ್ಯಯನ ಸಂಸ್ಥೆಗಳು ಈ ವರೆಗಿನ ಎಲ್ಲ ದೇಶಗಳು ಗೆದ್ದ ಪದಕಗಳು, ಹಲವು ಆಯಾಮಗಳಲ್ಲಿ ಆಯಾ ದೇಶಗಳ ವಿಶಿಷ್ಟತೆಗಳ ಜತೆ ಇಟ್ಟುಕೊಂಡು ವಿಶ್ಲೇಷಣೆ ನಡೆಸಿದ್ದಾರೆ. ಜಿಡಿಪಿ, ತಲಾ ಜಿಡಿಪಿ ಒಂದು ಅಂಶವೇ ಎಂದು ಈ ಅಧ್ಯಯನಗಳು ವಿಶ್ಲೇಷಿಸಿವೆ.

2016 ಅಂತಿಮ ಪದಕ ಪಟ್ಟಿಯೊಂದಿಗೆ ಅತಿ ಹೆಚ್ಚು ಜಿಡಿಪಿಯ 10 ದೇಶಗಳನ್ನು ಹೋಲಿಸಿದರೆ 7 ದೇಶಗಳು ಮಾತ್ರ ಎರಡೂ ಪಟ್ಟಿಯಲ್ಲಿವೆ. ಆದರೆ ಟಾಪ್ 10 ಜಿಡಿಪಿ ಪಟ್ಟಿಯಲ್ಲಿರುವ 3 ದೇಶಗಳು – ಭಾರತ, ಬ್ರೆಜಿಲ್, ಕೆನಡಾ, ಟಾಪ್ 10 ಪದಕ ಪಟ್ಟಿಯಲ್ಲಿಲ್ಲ. ಟಾಪ್ 10 ಜಿಡಿಪಿ ಪಟ್ಟಿಯಲ್ಲಿ ಇಲ್ಲದ 3 ದೇಶಗಳು – ಆಸ್ಟ್ರೇಲಿಯಾ, ದ.ಕೊರಿಯಾ ಮತ್ತು ರಶ್ಯಾ, ಟಾಪ್ 10 ಪದಕ ಪಟ್ಟಿಯಲ್ಲಿವೆ. ತಲಾ ಜಿಡಿಪಿಯ ಟಾಪ್ 10 ಪಟ್ಟಿಯಲ್ಲಿರುವ ಎರಡು ದೇಶಗಳು ಮಾತ್ರ (ಅಮೆರಿಕ ಮತ್ತು ಆಸ್ಟ್ರೇಲಿಯಾ) ಟಾಪ್ 10 ಪದಕದ ಪಟ್ಟಿಯಲ್ಲಿವೆ. ಇನ್ನೂ ಕೆಳಗಿನ ಸ್ಥಾನಗಳಿಗೆ ಹೋದರೆ ಇದು ಇನ್ನಷ್ಟು ಗೋಜಲಾಗುತ್ತದೆ. ಮುಂದಿನ 10 (2016ರ 11ರಿಂದ 20) ಸ್ಥಾನಗಳಿಗೆ ಹೋದರೆ ಕೆನ್ಯಾ(15), ಜಮೈಕಾ (16), ಕ್ರೊಶಿಯ(17) ದಂತಹ ಜಿಡಿಪಿ ತಲಾ ಜಿಡಿಪಿ, ಜೀವನಮಟ್ಟ, ಅಭಿವೃದ್ಧಿಯ ಹಂತದಲ್ಲೂ ಬಲು ದೂರ ಇರುವ ದೇಶಗಳು ಕಾಣಸಿಗುತ್ತವೆ. ಟಾಪ್ 10 ಜಿಡಿಪಿ ಪಟ್ಟಿಯಲ್ಲಿದ್ದು ಟಾಪ್ 10 ಪದಕ ಪಟ್ಟಿಯಲ್ಲಿ ಇಲ್ಲದ 3 ರಲ್ಲಿ 2 ದೇಶಗಳು ಬ್ರೆಜಿಲ್(13), ಕೆನಡಾ(20) ಇಲ್ಲಿ ಕಾಣಸಿಗುತ್ತವೆ. ಒಂದೆ ಅಪವಾದವೆಂದರೆ ಭಾರತ! ಇವೆಲ್ಲದರಿಂದ ವ್ಯಕ್ತವಾಗುವುದು ಎಂದರೆ ಭಾರತ ಕನಿಷ್ಠ 11ರಿಂದ 20 ಪಟ್ಟಿ ಯಲ್ಲಿರಬೇಕಾಗಿತ್ತು. ಒಟ್ಟಿಗೆ ಜಿಡಿಪಿ ಒಂದು ಅಂಶ ನಿಜ. ಆದರೆ ಹೆಚ್ಚಾಗಿ ದೇಶ ಕ್ರೀಡೆಗೆ ಹೂಡಿಕೆ ಮಾಡುವ ಸಾಮರ್ಥ್ಯದ ದೃಷ್ಟಿಯಿಂದ ಮಾತ್ರ ಎಂದು ಅಧ್ಯಯನ ಹೇಳುತ್ತದೆ.

ಸಮಗ್ರ ರಾಷ್ಟ್ರೀಯ ಕ್ರೀಡಾ ನೀತಿ

ಇನ್ನೊಂದು ಈ ಅಧ್ಯಯನ ಹೊರ ↘

ನಾಲ್ಕು ದಶಕಗಳ ಬಳಿಕ ಹಾಕಿಯಲ್ಲಿ ಪದಕ ಗೆದ್ದು ಬೀಗಿದ ಭಾರತ



ಕಂಚಿಗೆ ಮುತ್ತಿಕ್ಕಿದ ಹಾಕಿ ಪುರುಷರ ತಂಡ 41 ವರ್ಷಗಳಿಂದ ಭಾರತ ಪದಕ ಗೆದ್ದಿರಲಿಲ್ಲ

ಟೋಕಿಯೋ: ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಹಾಕಿಯಲ್ಲಿ ಬರೋಬ್ಬರಿ 41 ವರ್ಷಗಳ ಪದಕದ ಬರವನ್ನು ಮನ್‌ಪ್ರೀತ್ ಸಿಂಗ್ ನೇತೃತ್ವದ ಭಾರತ ಪುರುಷರ ಹಾಕಿ ತಂಡ ನೀಗಿಸಿದೆ. ಸಾಕಷ್ಟು ರೋಚಕತೆಯಿಂದ ಕೂಡಿದ ಕಂಚಿನ ಪದಕಕ್ಕಾಗಿನ ಕಾದಾಟದಲ್ಲಿ ಬಲಿಷ್ಠ ಜರ್ಮನಿ ತಂಡವನ್ನು ಮಣಿಸುವ ಮೂಲಕ ಭಾರತ ಹಾಕಿ ತಂಡ ಕಂಚಿನ ಪದಕ ಜಯಿಸುವಲ್ಲಿ ಯಶಸ್ವಿಯಾಗಿದೆ.

ಮೊದಲ ಕ್ವಾರ್ಟರ್‌ನ ಎರಡನೇ ನಿಮಿಷದಲ್ಲಿ ಟೈಮೂರ್ ಗೋಲು ಬಾರಿಸುವ ಮೂಲಕ ಜರ್ಮನಿಗೆ 1–0 ಮುನ್ನಡೆ ಒದಗಿಸಿಕೊಟ್ಟರು. ಇದರೊಂದಿಗೆ ಮೊದಲ ಕ್ವಾರ್ಟರ್‌ನಲ್ಲಿ ಜರ್ಮನಿ 1–0 ಮುನ್ನಡೆ ಕಾಯ್ದುಕೊಂಡಿತು. ಇನ್ನು ಎರಡನೇ ಕ್ವಾರ್ಟರ್‌ನಲ್ಲಿ ಕಮ್‌ಬ್ಯಾಕ್ ಮಾಡುವಲ್ಲಿ ಭಾರತ ಯಶಸ್ವಿಯಾಯಿತು. ಎರಡನೇ ಕ್ವಾರ್ಟರ್‌ನಲ್ಲಿ ಭಾರತ ಮೂರು ಗೋಲು ಬಾರಿಸಿದರೆ, ಜರ್ಮನಿ ಎರಡು ಗೋಲು ಬಾರಿಸಿತು. ಇದರೊಂದಿಗೆ ಮೊದಲಾರ್ಧ ಮುಕ್ತಾಯದ ವೇಳೆಗೆ 3–3ರ ಸಮಬಲ ಸಾಧಿಸಿತು.

ಇನ್ನು ಮೂರನೇ ಕ್ವಾರ್ಟರ್‌ನಲ್ಲಿ ಮತ್ತಷ್ಟು ಆಕ್ರಮಣಕಾರಿ ಪ್ರದರ್ಶನ ತೋರಿದ ಮನ್‌ಪ್ರೀತ್ ಪಡೆ ಮತ್ತೆರಡು ಗೋಲು ಬಾರಿಸುವ ಮೂಲಕ ಭಾರತಕ್ಕೆ 5–3ರ ಮುನ್ನಡೆ ಒದಗಿಸಿಕೊಟ್ಟಿತು. ಇನ್ನು ಕೊನೆಯ ಕ್ವಾರ್ಟರ್‌ನಲ್ಲಿ ಜರ್ಮನಿ ಕೇವಲ ಒಂದು ಗೋಲು ಗಳಿಸಲಷ್ಟೇ ಶಕ್ತವಾಯಿತು.

ಸಾಧನೆಯ ಸಂಕ್ಷಿಪ್ತ ಇತಿಹಾಸ:

ಇದಕ್ಕೂ ಮೊದಲು 49 ವರ್ಷದ ಹಿಂದೆ 1972ರಲ್ಲಿ ಮ್ಯೂನಿಚ್‌ನಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಭಾರತ ತಂಡ ಸೆಮಿಫೈನಲ್ ನಲ್ಲಿ ಪಾಕಿಸ್ತಾನದ ವಿರುದ್ಧ 2–0 ಗೋಲುಗಳ ಅಂತರದಿಂದ ಸೋಲೊಪ್ಪಿಕೊಂಡಿತ್ತು. ಇದಾದ ಬಳಿಕ ಭಾರತ ತಂಡ ಸೆಮಿಫೈನಲ್ ಪ್ರವೇಶಿಸುವಲ್ಲಿ ವಿಫಲವಾಗಿತ್ತು. ಆದರೆ, 41 ವರ್ಷದ ಹಿಂದೆ 1980ರಲ್ಲಿ ಮಾಸ್ಕೋದಲ್ಲಿ ನಡೆದ ಒಲಿಂಪಿಕ್‌ನಲ್ಲಿ ಕೇವಲ 6 ತಂಡಗಳಿದ್ದ ಕಾರಣ ಸೆಮಿಫೈನಲ್ ಹಂತ ಇಲ್ಲದೆಯೇ ಫೈನಲ್ ಪ್ರವೇಶಿಸಿತ್ತು, ಜೊತೆಗೆ ಅಂದು ಚಿನ್ನಕ್ಕೆ ಕೊರಳೊಡ್ಡಿತ್ತು. 2020 – 21 ರ ಟೋಕಿಯೋ ಒಲಿಂಪಿಕ್ಸ್ ಕಂಚಿನ ಪದಕ ಗೆಲ್ಲುವ ಮೂಲಕ ದೇಶಿ ಕ್ರೀಡಗೆ ಹೆಚ್ಚಿನ ಮಹತ್ವ ಬಂದಂತಾಗಿದೆ.







ಮುರಿದ ಹಾಕಿ ಸ್ಟಿಕ್ ನಿಂದ ನಾಯಕಿ ಪಟ್ಟದವರೆಗೆ– ರಾಣಿ ರಾಂಪಾಲ್ ಸಾಧಿಸಿದ ಸಾಹಸಗಾಥೆ

ಗುರುರಾಜ ದೇಸಾಯಿ

ಭಾರತ ಮಹಿಳಾ ಹಾಕಿ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ಬಲಿಷ್ಠ ಆಸ್ಟೇಲಿಯಾ ತಂಡದ ಎದುರು ಸೆಣಸಾಡಿದ ರಾಣಿ ರಾಂಪಾಲ್ ನೇತೃತ್ವದ ಭಾರತ ಮಹಿಳಾ ಹಾಕಿ ತಂಡ, ಶ್ರೇಷ್ಠ ಪ್ರದರ್ಶನ ತೋರುವ ಮೂಲಕ ಸೆಮಿಫೈನಲ್‌ಗೆ ಎಂಟ್ರಿಕೊಟ್ಟಿದೆ. ಬರೋಬ್ಬರಿ 41 ವರ್ಷಗಳ ಬಳಿಕ ಭಾರತೀಯ ಮಹಿಳಾ ಹಾಕಿ ತಂಡವು ಟೋಕಿಯೋ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ನಾಕೌಟ್ ಹಂತಕ್ಕೇರಿದ ಸಾಧನೆ ಮಾಡಿದೆ.

ಕೂಲಿಕಾರನ ಮಗಳಾಗಿರುವ ರಾಣಿ ರಾಂಪಾಲ್ ಹಾಕಿ ಸೇರಿದ್ದು, ನಾಯಕಿಯಾಗಿ ಬೆಳದ ಕಣ್ಣೀರನ ಕಥೆಯನ್ನು ಹ್ಯೂಮನ್ಸ್ ಆಫ್ ಬಾಂಬೆ ಎಂಬ ಇನ್ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. ಆ ನೋವಿನ ಕಥೆ ಏನು ನೋಡೋಣ ಬನ್ನಿ.

ರಾಣಿ ರಾಂಪಾಲ್ ಹುಟ್ಟಿದ್ದು ಡಿಸೆಂಬರ್ 04, 1994 ರಲ್ಲಿ, ಹರಿಯಾಣ ರಾಜ್ಯದ ಕುರುಕ್ಷೇತ್ರ ಜಿಲ್ಲೆಯ ಶಹಾಬಾದ್ ಮಾರ್ಕಂಡದಲ್ಲಿ ಜನಿಸಿದರು, ಇವರು ಬಡ ಕುಟುಂಬದ ಹಿನ್ನಲೆಯನ್ನು ಹೊಂದ್ದಿದ್ದಾರೆ. ಅವರ ತಂದೆ ಬಂಡಿ ಎಳೆಯುವ ಕೂಲಿಕಾರ ಕೆಲಸ ಮಾಡುತ್ತಿದ್ದಾರೆ. ತಾಯಿ ಮನೆ ಮನೆಗಳಿಗೆ ಹೋಗಿ ಮುಸುರಿ ತಿಕ್ಕಿವ ಮನೆಕೆಲಸ ಮಾಡುವ ಕಾರ್ಮಿಕರಾಗಿದ್ದಾರೆ. "ಮುರಿದ ಹಾಕಿ ಸ್ಟಿಕ್" ನೊಂದಿಗೆ ಹೇಗೆ ಅಭ್ಯಾಸ ಮಾಡಲು ಪ್ರಾರಂಭಿಸಿದರು ಎಂಬುದರ ಕುರಿತು ಅದರಲ್ಲಿ ರಾಣಿಯವರು ವಿವಿರಗಳನ್ನು ಹಂಚಿಕೊಂಡಿದ್ದಾರೆ.

ಜೀವನ ಸಾಗಿಸುವುದೆ ಕಷ್ಟವಾಗಿತ್ತು, ನನ್ನ ಬದುಕು ಮುಗಿದೇಹೋಯಿತು ಎಂದು ನಾನು ನಿರ್ಧರಿಸಿ ಬಿಟ್ಟಿದ್ದೆ, ನಮ್ಮ ಮನೆಯಲ್ಲಿ ವಿದ್ಯುತ್ ಇರಲಿಲ್ಲ, ವಿಪರೀತ ಸೊಳ್ಳೆಗಳು, ದಿನಂಪ್ರತಿ ಸೊಳ್ಳೆ ಕಚ್ಚಿಸಿಕೊಂಡೆ ಮಲಗುತ್ತಿದ್ದೆವು. ಎರಡು ಹೊತ್ತಿನ ಊಟಕ್ಕು ನಮಗೆ ಕಷ್ಟ ಆಗುತ್ತಿತ್ತು. ನಮ್ಮ ಮನೆ ಪ್ರವಾಹಕ್ಕೆ ಸಿಲುಕಿ ಎಲ್ಲವನ್ನೂ ಕಳೆದುಕೊಂಡೆವು ಮುಂದೇನು ಮಾಡುವುದು ಎಂದು ಯೋಚಿಸುತ್ತಿದ್ದಾಗ ನಮ್ಮ ಮನೆಯ ಮುಂಭಾಗ ಹಾಕಿ ಅಕಾಡೆಮಿ ಇತ್ತು. ಅಲ್ಲಿ ದಿನಂಪ್ರತಿ ನಾಲ್ಕಾರು ಗಂಟೆಗಳ ಕಾಲ ಆಟ ನೋಡಲು ಸಮಯ ಕಳೆಯುತ್ತಿದೆ. ನನಗೂ ಕಲಸಿ ಎಂದು ಹಾಕಿ ತರಬೇತುದಾರರನ್ನು ನಾನು ಗೋಗರೆಯುತ್ತಿದ್ದೆ, ಆದರೆ ನನ್ನ ಬೇಡಿಕೆಯನ್ನು ಅವರು ತಿರಸ್ಕಾರ ಮಾಡುತ್ತಿದ್ದರು.

ಈ ಘಟನೆ ರಾಣಿ ರಾಂಪಾಲ್ ರವರಲ್ಲಿ ಛಲ ಹುಟ್ಟಿಸುತ್ತದೆ. ಅಕಾಡೆಮಿಯಲ್ಲಿ ಬಿದ್ದಿದ್ದ ಮುರಿದ ಸ್ಟಿಕ್ ನ್ನು ಹಿಡಿದು ಆಟ ಕಲಿಯಲು ಆರಂಭಿಸುತ್ತಾರೆ. ನನ್ನನ್ನು ನೋಡಿ ನಕ್ಕವರೆ ಜಾಸ್ತಿ. ಆಡುವಷ್ಟು, ಓಡುವಷ್ಟು ಶಕ್ತಿ ನಿನ್ನಲ್ಲಿಲ್ಲ' ಎಂದು ಕೋಚ್ ಕಿಚಾಯಿಸುತ್ತಿದ್ದರು. ಅಪೌಷ್ಟಿಕತೆಯಿಂದ ಬಳಲುತ್ತಿದ್ದದ್ದರಿಂದ ನಿನಗೆ ತರಬೇತಿ ನೀಡಲು ಸಾಧ್ಯವಿಲ್ಲ ಎಂದು ತಿರಸ್ಕಾರ ಮಾಡುತ್ತಲೆ ಇರುತ್ತಾರೆ. ಅಕಾಡೆಮಿಯಲ್ಲಿ ಬೇರೆಯವರು ಸಮವಸ್ತ್ರ ಹಾಕಿ ಆಡುತ್ತಿದ್ದರು, ಆದರೆ ರಾಣಿಯವರು ತಮ್ಮ ಬಳಿ ಇದ್ದ ನಾನು ಸಲ್ವಾರ್ ಕಮೀಜ್‌ನಲ್ಲಿ ಓಡುತ್ತಾರೆ, ಆಟದಲ್ಲಿನ ಅವರ ದೃಢ ವಿಶ್ವಾಸ, ಸಂಕಲ್ಪ ಹೊಂದದ್ದ ಕಾರಣ ಕೊನೆಗೂ ತರಬೇತುದಾರನನ್ನೂ ಮನವೊಲಿಸುವಲ್ಲಿ ಯಶಸ್ವಿಯಾಗುತ್ತಾಳೆ.

ಹಾಕಿ ಪ್ರಾಕ್ಟೀಸ್ ಆರಂಬವಾಗುವುದು ಬೆಳಗಿನ ಜಾವ. ಆದರೆ ಇವರ ಬಳಿ ಗಡಿಯಾರ ಇರಲಿಲ್ಲ. ಇವರ ತಾಯಿ ಇವರನ್ನು ಬೇಗ ಎಬ್ಬಿಸಿ ಆಟಕ್ಕೆ ಸನ್ನದ್ದು ಗೊಳಿಸುತ್ತಾರೆ. ಈ ಚಿಕ್ಕ ಉಡುಗೆಯಲ್ಲಿ ಮಗಳ ಆಟವನ್ನು ನೋಡಿದವರು ಏನೆಂದುಕೊಳ್ಳುತ್ತಾರೆ ಎಂದು ಭಯದಿಂದಲೆ ರಾಣಿಯವರಿಗೆ ಅವರ ಕುಟುಂಬ ಬೆಂಬಲಕ್ಕೆ ನಿಲ್ಲುತ್ತದೆ. ಹೀಗೆ ರಾಣಿಯವರು ಹಾಕಿಯಲ್ಲಿ ಬೆಳವಣಿಗೆ ಆರಂಭಿಸುತ್ತಾರೆ.

"ಅಕಾಡೆಮಿಯಲ್ಲಿ, ಪ್ರತಿಯೊಬ್ಬ ಆಟಗಾರನೂ 500 ಮಿಲಿ ಹಾಲನ್ನು ತರುವುದು ಕಡ್ಡಾಯವಾಗಿತ್ತು. ಆದರೆ ರಾಣಿಯವರ ಕುಟುಂಬವು ಕೇವಲ 200 ಮಿಲಿ ಮೌಲ್ಯದ ಹಾಲನ್ನು ಮಾತ್ರ ಖರೀದಿಸಬಲ್ಲ ಸಾಮರ್ಥ್ಯ ಉಳ್ಳವರಾಗಿದ್ದರು. ಹಾಗಾಗಿ ರಾಣಿಯವರು ಹಾಲನ್ನು ನೀರಿನೊಂದಿಗೆ ಬೆರೆಸಿ ಕುಡಿಯಲು ಆರಂಭಿಸುತ್ತಾರೆ. ರಾಣಿಯವರ ಬಡತನದ ಕಷ್ಟ ಇವರ ಕೋಚ್ ಗೆ ಗೊತ್ತಾಗುತ್ತದೆ. ಅವರೆ ಇವರಿಗೆ ಪೌಷ್ಟಿಕ ಆಹಾರವನ್ನು ನೀಡುವ ವ್ಯವಸ್ಥೆಯನ್ನು ಮಾಡುತ್ತಾರೆ. ಇದನ್ನೆಲ್ಲ ಖುಷಿಯಿಂದಲೇ ಸ್ವಿಕರಿಸಿದ ರಾಣಿಯವರು ಒಂದಿಲ್ಲೊಂದು ದಿನ ನಾನು ಸಾಧನೆ ಮಾಡುತ್ತೇನೆ ಎಂದು ಕುಟುಂಬಕ್ಕೆ ಭರವಸೆ ನೀಡುತ್ತಾರೆ.

ಅದರಂತೆ ರಾಣಿಯವರು ಹಾಕಿಯಲ್ಲಿ ಇಲ್ಲಿಯವರೆಗೆ ಸಾಕಷ್ಟು ಸಾಧನೆ ಮಾಡಿದ್ದಾರೆ. 15ನೇ ವಯಸ್ಸಿನಲ್ಲೇ ಭಾರತದ ರಾಷ್ಟ್ರೀಯ ಹಾಕಿ ತಂಡದಲ್ಲಿದ್ದು 2010 ವರ್ಷದಲ್ಲಿ ನಡೆದ ವಿಶ್ವಕಪ್‌ನಲ್ಲಿ ಭಾಗವಹಿಸಿದ್ದರು. 2009 ರ ಜೂನ್‌ನಲ್ಲಿ ರಷ್ಯಾ ಕಜನ್ನಲ್ಲಿ ನಡೆದ ಚಾಂಪಿಯನ್ಸ್ ಚಾಲೆಂಜ್ ಟೂರ್ನಮೆಂಟ್‌ನ ಅಂತಿಮ ಪಂದ್ಯದಲ್ಲಿ 4 ಗೋಲುಗಳನ್ನು ಹೊಡೆಯುವ ಮೂಲಕ ಭಾರತ ತಂಡವನ್ನು ಗೆಲ್ಲಿಸಿದರು. ಅವರು "ಟಾಪ್ ಗೋಲ್ ಸ್ಕೋರರ್" ಮತ್ತು "ಟೂರ್ನಮೆಂಟ್‌ನ ಯುವ ಆಟಗಾರ್ತಿ"ಯಂಬ ಬಿರುದಿಗೆ ಕಾರಣರಾದರು.

2009 ರ ನವೆಂಬರ್‌ನಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಭಾರತೀಯ ತಂಡಕ್ಕೆ ಬೆಳ್ಳಿ ಪದಕ ತಂದುಕೊಡುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. 2010 ರ ಕಾಮನ್ವೆಲ್ತ್ ಕ್ರೀಡಾಕೂಟ ಮತ್ತು 2010 ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ರಾಷ್ಟ್ರೀಯ ತಂಡದೊಂದಿಗೆ ಆಡಿದ ನಂತರ ರಾಮ್ಪಾಲ್ 2010 ರ ಮಹಿಳಾ ಆಲ್ ಸ್ಟಾರ್ ತಂಡವನ್ನು ಸೇರಿಕೊಂಡರು. 2010 ರ ಏಷ್ಯನ್ ಕ್ರೀಡಾಕೂಟದಲ್ಲಿ ಗ್ವಾಂಗ್ಝೌನಲ್ಲಿ ಅವರ ಕಾರ್ಯ ನಿರ್ವಹಣೆ ಆಧಾರದ ಮೇಲೆ ಏಷ್ಯನ್ ಹಾಕಿ ಫೆಡರೇಶನ್ ಆಲ್ ಸ್ಟಾರ್ ತಂಡಕ್ಕೆ ಅವರನ್ನು ಸೇರಿಸಿಕೊಳ್ಳಲಾಯಿತು.

ಅರ್ಜೆಂಟೀನಾದ ರೊಸಾರಿಯೋನಲ್ಲಿ ನಡೆದ 2010 ರ ಮಹಿಳಾ ಹಾಕಿ ವಿಶ್ವಕಪ್‌ನಲ್ಲಿ ಅವರು ಒಟ್ಟು ಏಳು ಗೋಲುಗಳನ್ನು ಹೊಡೆದರು, ಇದು ವಿಶ್ವ ಮಹಿಳಾ ಹಾಕಿ ಶ್ರೇಯಾಂಕದಲ್ಲಿ ಒಂಬತ್ತನೆಯ ಸ್ಥಾನದಲ್ಲಿದೆ. ಇದು 1978 ರಿಂದಲೂ ಭಾರತದ ಅತ್ಯುತ್ತಮ ಪ್ರದರ್ಶನವಾಗಿದೆ. 2010 ರ ಎಫ್‌ಐಹೆಚ್ ಮಹಿಳಾ ಯುವ ಆಟಗಾರ ಪ್ರಶಸ್ತಿಗೆ ನಾಮನಿರ್ದೇಶನಗೊಂಡ ಏಕೈಕ ಭಾರತೀಯಳೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮಹಿಳಾ ಹಾಕಿ ವಿಶ್ವಕಪ್ 2010 ರ ಪಂದ್ಯಾವಳಿಯಲ್ಲಿ ಅಗ್ರ ಕ್ಷೇತ್ರ ಗೋಲ್ ಸ್ಕೋರರ್ ಆಗಿ ತನ್ನ ನಾಕ್ಷತ್ರಿಕ ಪ್ರದರ್ಶನವನ್ನು ಗುರುತಿಸಿ ಅವರಿಗೆ "ಅತ್ಯುತ್ತಮ ಯುವ ಆಟಗಾರನ ಪಂದ್ಯಾವಳಿಯ ಪ್ರಶಸ್ತಿ" ನೀಡಿದ್ದಾರೆ.

2013 ರ ಜೂನಿಯರ್ ವಿಶ್ವಕಪ್‌ನಲ್ಲಿ ಇವರನ್ನು 'ಪ್ಲಯೆರ್ ಆಫ್ ಟೂರ್ನಮೆಂಟ್' ಯಂದು ತೀರ್ಮಾನಿಸಿದರು, ಭಾರತ ಕಂಚಿನ ಪದಕ ಗೆಲ್ಲುವುದರ ಮೂಲಕ ಆಟ ಮುಕ್ತಾಯಗೊಂಡಿತು. ಇವರು FICCI 'ಕಮ್ಬ್ಯಾಕ್ ಆಫ್ ದಿ ಇಯರ್ 2014' ಪ್ರಶಸ್ತಿಗೆ ಪಾತ್ರರಾಗಿದ್ದಾರೆ. "ನನ್ನ ಕುಟುಂಬದ ಬೆಂಬಲದೊಂದಿಗೆ ಇವರು ಅಂತಿಮವಾಗಿ ಭಾರತೀಯ ಹಾಕಿ ತಂಡದ ನಾಯಕರಾಗಿದ್ದಾರೆ. ರಾಣಿಯವರು ಇನ್ನಷ್ಟು ಸಾಧನೆ ಮಾಡಲಿ ಎಂದು ವಿಶ್ವದಾದ್ಯಂತ ಬೆಂಬಲ ಹಾಗೂ ಶುಭಾಶಯಗಳು ಹರಿದು ಬರುತ್ತಿವೆ.

ತಂದಿರುವ ಒಂದು ದೊಡ್ಡ ಅಂಶವೆಂದರೆ (ಹಾಲಿ ಅಥವಾ ಮಾಜಿ) ಸಮಾಜವಾದಿ ದೇಶಗಳು ಬೇರೆ ಸಮಾನಾರ್ಥಕ ಆರ್ಥಿಕ ಸಾಮಾಜಿಕ ಸಾಂಸ್ಕೃತಿ ಮಟ್ಟ ಇರುವ ದೇಶಗಳಿಗಿಂತ ಪದಕ ಗಳಿಕೆಯಲ್ಲಿ ಮುಂದಿವೆ. ಚೀನಾ, ರಶ್ಯಾ ಟಾಪ್ 10 ನಲ್ಲಿವೆ. ಮುಂದಿನ ಹಂತಗಳಲ್ಲಿ ಹಂಗರಿ (12), ಕ್ರೋಶಿಯಾ (17), ಕ್ಯೂಬಾ(18), ಉಜ್ಬೆಕಿಸ್ತಾನ (21), ಕಝಾಕಿಸ್ತಾನ (22), ಉಕ್ರೇನ್ (31), ಸರ್ಬಿಯ (32), ಪೋಲೆಂಡ್ (33), ಉತ್ತರ ಕೊರಿಯಾ (34) ಇವೆ.ಇವುಗಳಲ್ಲಿ ಕೆಲವು ಬಾಹ್ಯ ದಾಳಿ, ದಿಗ್ಬಂಧನಗಳು, ಆಂತರಿಕ ಯುದ್ಧಗಳನ್ನೂ ಕಂಡಿವೆ. ತಾಜಕಿಸ್ತಾನ, ಲಿಥುವಾನಿಯ, ಬಲ್ಗೇರಿಯ ಬಿಟ್ಟರೆ ಎಲ್ಲ ದೇಶಗಳು ಟಾಪ್ 50ರೊಳಗಿವೆ. ಹೆಚ್ಚಿನ ಈ ದೇಶಗಳು ಇನ್ನೂ ಮೇಲಿನ ಸ್ಥಾನದಲ್ಲಿದ್ದವು. ಸಮಸ್ಯೆ/ಸವಾಲುಗಳಿಂದ ಸ್ವಲ್ಪ ಕೆಳಕ್ಕೆ ಬಂದಿವೆ. ಇವೆಲ್ಲದಕ್ಕೂ ಸಮಾಜವಾದಿ ವ್ಯವಸ್ಥೆ ಸಾಮಾನ್ಯ ಅಂಶವಾಗಿದ್ದರೂ ಆ ವ್ಯವಸ್ಥೆಯ ಯಾವ ಅಂಶಗಳು ಪದಕ ಪಟ್ಟಿಯಲ್ಲಿ ಮೇಲಿರಲು ಸಹಾಯಕವಾಗಿವೆ ಎಂದು ತಿಳಿಯಲು ಈ ಅಧ್ಯಯನ ಪ್ರಯತ್ನಿಸಿದೆ. ಶಾಲಾ ಪೂರ್ವ ಹಂತದಿಂದ ವಿ.ವಿ. ವರೆಗೆ ಆಟೋಟಗಳು ಶಿಕ್ಷಣದ ಭಾಗವಾಗಿರುವುದು, ಪ್ರತಿ ಹಂತದಲ್ಲೂ (ಶಾಲಾ, ಅಂತರ-ಶಾಲಾ, ಜಿಲ್ಲಾ, ರಾಜ್ಯ, ರಾಷ್ಟ್ರೀಯ) ಕ್ರೀಡಾ ಸ್ಪರ್ಧೆಗಳು, ಆಟೋಟಗಳಲ್ಲಿ ಉತ್ತಮ ಪ್ರಗತಿ ತೋರಿಸಿದವರಿಗೆ ಉತ್ತೇಜನ, ಇಂತಹವರಿಗೆ ವಿಶೇಷ ಗೌರವ ಮತ್ತು ತರಬೇತಿ, ರಾಷ್ಟ್ರೀಯ ಆಟಗಳ ವಿಜೇತರಿಗೆ ಅಂತರ್ರಾಷ್ಟ್ರೀಯ ಸ್ಪರ್ಧೆಗೆ ಆಟೋಟಗಳಲ್ಲಿ ಸ್ಪರ್ಧಿಸಲು ವಿಶೇಷ ತರಬೇತಿ ಉತ್ತೇಜನ, ಕ್ರೀಡಾ ವೃತ್ತಿ ಜೀವನದಿಂದ ನಿವೃತ್ತಿಯ ನಂತರ ವಿಶೇಷ ಶಿಕ್ಷಣ-ಉದ್ಯೋಗ ಅವಕಾಶ – ಇವುಗಳು ಇರುವ ಒಂದು ಸಮಗ್ರ ರಾಷ್ಟ್ರೀಯ ಕ್ರೀಡಾ ನೀತಿ ಎಂದು ಅಧ್ಯಯನ ತಿಳಿಸುತ್ತದೆ. ಇದಕ್ಕೆ ಬೇಕಾದ ಎಲ್ಲ ಸಂಪನ್ಮೂಲಗಳನ್ನು ಸರಕಾರವೇ ಒದಗಿಸಿ ಅದರ ಜಾರಿಯ ಮೇಲೆ ನಿಗಾ ಇಡುತ್ತಿತ್ತು. ರಶ್ಯಾ, ಚೀನಾ ಹಂತ ಹಂತವಾಗಿ ಎಲ್ಲ ಅಟೋಟಗಳನ್ನು ಆಯ್ದುಕೊಂಡರೆ ಸಣ್ಣ, ಮಧ್ಯಮ ದೇಶಗಳು ತಮ್ಮ ಪರಿಸ್ಥಿತಿಗೆ ಅನುಗುಣವಾಗಿ ಕೆಲವನ್ನು ಆಯ್ಕೆ ಮಾಡಿಕೊಂಡು ಅವುಗಳ ಮೇಲೆ ಹೆಚ್ಚಿನ ಒತ್ತು ಕೊಟ್ಟವು. ಆಯ್ದುಕೊಂಡ ಆಟೋಟಗಳನ್ನು ರಾಷ್ಟ್ರೀಯವಾಗಿ ವ್ಯಾಪಕವಾಗಿ ಜನಪ್ರಿಯವಾಗಿಸುವುದು ಆಡುವುದು ಮುಖ್ಯ. ಈ ಆಧಾರ (ಅಂದರೆ ಕ್ಯಾಚ್ ಮೆಂಟ್ ಏರಿಯಾ) ವ್ಯಾಪಕವಾದಷ್ಟು ಅತ್ಯುತ್ತಮ ರಾಷ್ಟ್ರೀಯ ಹಂತದ ಆಟಗಾರರು ಹೊಮ್ಮುವುದು ಸಾಧ್ಯ. ಇದರ ಜೊತೆಗೆ ಎರಡನೆಯ ಮಹಾಯುದ್ಧದ ನಂತರದ ಸ್ಥಿತಿಯಲ್ಲಿ ಸಮಾಜವಾದಿ ದೇಶಗಳ ಜನತೆಯಲ್ಲಿ ಬಂಡವಾಳಶಾಹಿ ದೇಶಗಳನ್ನು ಮೀರಿಸಬೇಕು ಎನ್ನುವ ರಾಷ್ಟ್ರೀಯ ಪ್ರಜ್ಞೆ ಮತ್ತು ಛಲದ ರಾಜಕೀಯ ನಾಯಕತ್ವ ಸಹ ಸಹಾಯಕವಾಗಿರಬೇಕು.

ದೇಶದ ಪರಿಸ್ಥಿತಿಗೆ ಅನುಗುಣವಾಗಿ ಈ ಸಮಗ್ರ ರಾಷ್ಟ್ರೀಯ ಕ್ರೀಡಾ ನೀತಿ ಮತ್ತು ಆಟೋಟಗಳ ಅಯ್ಕೆ ಬಹಳ ಮುಖ್ಯ ಎಂದು ಅಧ್ಯಯನ ತಿಳಿಸುತ್ತದೆ. ಸಮಗ್ರ ರಾಷ್ಟ್ರೀಯ ಕ್ರೀಡಾ ನೀತಿ ಸಮಾಜವಾದಿ ವ್ಯವಸ್ಥೆಯಲ್ಲಿ ಮಾತ್ರ ಎಂದು ತಿಳಿಯಬೇಕಾಗಿಲ್ಲ, ಎಂದು ಅಧ್ಯಯನ ಹೇಳುತ್ತದೆ. ಸುಮಾರಾಗಿ ಇದೇ ನೀತಿಯನ್ನು ಹೆಚ್ಚಿನ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲೂ ಅಂತಹುದೇ ವ್ಯವಸ್ಥೆ ಇದೆ. ಹೈಸ್ಕೂಲ್ ವರೆಗೆ ಶಾಲಾ ಶಿಕ್ಷಣದಲ್ಲಿ ಸಾರ್ವತ್ರಿಕವಾಗಿ ಮತ್ತು ಸರಕಾರಿ ಕಾಲೇಜು ವಿವಿಗಳಲ್ಲಿ ಈ ನೀತಿಗೆ ಬೇಕಾದ ಸಂಪನ್ಮೂಲಗಳನ್ನು ಸರಕಾರವೇ ಒದಗಿಸುತ್ತದೆ. ಖಾಸಗಿ ಸಂಸ್ಥೆಗಳಲ್ಲಿ ಸಹ ಆ ಸಂಸ್ಥೆಗಳು ಅಥವಾ ಖಾಸಗಿ ಪ್ರಾಯೋಜಕರು ಬೇಕಾದ ಸಂಪನ್ಮೂಲಗಳನ್ನು ಒದಗಿಸುತ್ತಾರೆ. 50ರ ದಶಕದಿಂದ ಒಲಿಂಪಿಕ್ಸ್ ನಲ್ಲಿ ಸಮಾಜವಾದಿ ಬಣದ ಸವಾಲಿನಿಂದಾಗಿ, 90ರ ದಶಕದಿಂದ ಚೀನಾದ ಸವಾಲಿನಿಂದಾಗಿ ರಾಷ್ಟ್ರೀಯ ಪ್ರಜ್ಞೆ ಮತ್ತು ಛಲದ ಅಂಶ ಸಹ ಇದೆ ಎನ್ನಬಹುದು.

ಒಟ್ಟಾರೆ ಇದರರ್ಥ ಸಮಾಜವಾದಿ ದೇಶವಾಗದೆ ಒಲಿಂಪಿಕ್ಸ್ ಪದಕಗಳಲ್ಲಿ ಕಳಪೆ ಸಾಧನೆ ಮುಂದುವರೆಯುವುದು ಅನಿವಾರ್ಯ ಅಂದುಕೊಳ್ಳಬೇಕಾಗಿಲ್ಲ. ಬಹಳಷ್ಟು ಪ್ರಗತಿ ಸಾಧಿಸಬಹುದು ಎಂಬುದನ್ನು ಇತರ ದೇಶಗಳ ಅನುಭವದಿಂದ ತಿಳಿಯಬಹುದು. ಪ್ರಮುಖವಾಗಿ ಸಮಗ್ರ ರಾಷ್ಟ್ರೀಯ ಕ್ರೀಡಾ ನೀತಿ ರೂಪಿಸಿ ಜಾರಿಗೆ ತರಬೇಕು. ಇದಕ್ಕೆ ಏನು ತೊಡಕುಗಳಿವೆ?

ಕ್ಯಾಚ್ ಮೆಂಟ್ ಏರಿಯಾ ವಿಸ್ತಾರ

ಈಗ ಕ್ರಿಕೆಟ್ ಗೆ ಸರಕಾರ, ಕ್ರೀಡಾ ಇಲಾಖೆ, ಮಾಧ್ಯಮಗಳು, ಕಂಪನಿಗಳು, ಶಿಕ್ಷಣ ಸಂಸ್ಥೆಗಳು, ಜನತೆಯ ವಿಶೇಷ ಮಮತೆ ಇತರ ಎಲ್ಲ ಆಟೋಟಗಳಿಗೆ ಮಲತಾಯಿ ಧೋರಣೆಯಾಗಿ ಪರಿಣಮಿಸಿದೆ. (ಸಂಪನ್ಮೂಲಗಳ ಸಿಂಹಪಾಲು ನುಂಗುವ ಕ್ರಿಕೆಟ್ ಒಲಿಂಪಿಕ್ಸ್ ನಲ್ಲಿ ಇಲ್ಲ!) ಇತರ ಆಟೋಟಗಳಿಗೆ ಮಾಡಬೇಕಾದ ಸಂಪನ್ಮೂಲ ಹೂಡಿಕೆ, ಉತ್ತೇಜನ ಸಿಗುತ್ತಿಲ್ಲ. ಹಿಂದಿನಿಂದಲೂ ಒಲಿಂಪಿಕ್ಸ್ ಪದಕಕ್ಕೆ (ಮಾತ್ರವಲ್ಲ ಏಶ್ಯನ್ ಕ್ರೀಡೆ, ಜಾಗತಿಕ ಹಾಕಿ ಸ್ಪರ್ಧೆಗಳಲ್ಲಿ) ಸಹಜ ಸೋಪಾನವಾಗಿದ್ದ ಹಾಕಿಯ ರಾಷ್ಟ್ರೀಯ ತಂಡದ ಖರ್ಚನ್ನು ರಾಷ್ಟ್ರೀಯ ಸರಕಾರ ವಹಿಸಿಕೊಳ್ಳುವುದಿಲ್ಲ. ಒಂದು ರಾಜ್ಯದ ತಲೆಗೆ ಕಟ್ಟಿದೆ. ಪದಕ ಗೆದ್ದಾಗ ಮಾತ್ರ ಅದರ ಕುರಿತು ಒಂದು ಪೈಸಾ ಖರ್ಚು ಮಾಡದ ಪ್ರಧಾನಿಫೋನ್ ಮಾಡುವ ಉತ್ತೇಜನ ಸಾಕೆ? ಎಲ್ಲ ಸಂಪನ್ಮೂಲಗಳನ್ನು ಕೇಂದ್ರೀಕರಿಸಿಕೊಂಡಿರುವ ಕೇಂದ್ರ ಸರಕಾರ ಅಂತರ್ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಲು ಆಯ್ಕೆಯಾದ ರಾಷ್ಟ್ರೀಯ ಕ್ರೀಡಾಪಟುಗಳ ಮತ್ತು ತಂಡಗಳ ತರಬೇತಿ, ನಿರ್ವಹಣೆ ಮತ್ತು ಎಲ್ಲ ವೆಚ್ಚಗಳನ್ನು ಕೇಂದ್ರ ಸರಕಾರ ವಹಿಸಿಕೊಳ್ಳಬೇಕು. ಇದು ಹೆಚ್ಚಿನ ಆಟ (ಫುಟ್‌ಬಾಲ್,ಟೆನ್ನಿಸ್, ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ವಾಲಿಬಾಲ್) ಗಳು ಮತ್ತು ಓಟಗಳಿಗೆ ಅನ್ವಯ ಆಗಬೇಕು. ಈಗ ಇರುವ ಕ್ರೀಡಾ ಆಡಳಿತ ವ್ಯವಸ್ಥೆಯಲ್ಲಿ ಅತಿ ರಾಜಕೀಯಕರಣ, ಅಧಿಕಾರಶಾಹಿ, ಭ್ರಷ್ಟಾಚಾರ ತಾಂಡವವಾಡುತ್ತಿದ್ದು ಅವು ಈ ಆಟೋಟಗಳ ಉತ್ತೇಜನ, ಬೆಳವಣಿಗೆಯಲ್ಲಿ ಯಾವುದೇ ಪಾತ್ರ ವಹಿಸುತ್ತಿಲ್ಲ. ಪ್ರಮುಖವಾಗಿ ಈ ಹಾಕಿ ಫೆಡರೇಶನ್, ಫುಟ್‌ಬಾಲ್ ಫೆಡರೇಶನ್ ಮುಂತಾದವುರಾಷ್ಟ್ರೀಯ ಮಟ್ಟದಲ್ಲಿ ಮಾತ್ರ ಇವೆ. ಇವು ರಾಜ್ಯ, ಜಿಲ್ಲೆ, ತಾಲೂಕು, ಸ್ಥಳೀಯ ಮಟ್ಟಗಳಲ್ಲಿ ಈ ಆಟೋಟಗಳನ್ನು ಉತ್ತೇಜನ, ಬೆಳವಣಿಗೆ ಮಾಡದೆ, ಕ್ಯಾಚ್ ಮೆಂಟ್ ಏರಿಯಾ ವಿಸ್ತಾರ ಮಾಡದೆ, ಎಲ್ಲ ಹಂತಗಳಲ್ಲಿ ಪುಟ 15 ಕ್ಕೆ

ಎನ್.ಇ.ಪಿ.–2020 ಕುರಿತು ತರಬೇತಿಯಲ್ಲೂ ಖಾಸಗೀಕರಣ


ಬಿ. ಶ್ರೀಪಾದ ಭಟ್

'ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ' (ಡಯಟ್) ಉಡುಪಿ ಹೊರಡಿಸಿದ ಎರಡು ಸುತ್ತೋಲೆಗಳನ್ನು ಲಗತ್ತಿಸಿದ್ದೇನೆ.

ಅದರಲ್ಲಿ ಅರಬಿಂದೋ ಸೊಸೈಟಿ ಎನ್ನುವ ಖಾಸಗಿ ಸಂಸ್ಥೆಯು ಶಿಕ್ಷಕರ ತರಬೇತಿ ನಡೆಸುತ್ತಿದೆ ಮತ್ತು ಎನ್.ಇ.ಪಿ 2020 ಕುರಿತು ಕಾರ್ಯಾಗಾರ ನಡೆಸುತ್ತಿದೆ (ಎರಡೂ ಬೇರೆ ಕಾರ್ಯಕ್ರಮಗಳು, ಒಂದೇ ಸಂಸ್ಥೆ)

ಅದರಲ್ಲಿ ಎಲ್ಲಾ ಸರಕಾರಿ, ಖಾಸಗಿ, ಅನುದಾನಿತ ಶಾಲಾ ಶಿಕ್ಷಕರು ಭಾಗವಹಿಸಬೇಕೆಂದು ಸರಕಾರದ ಪ್ರಾಂಶುಪಾಲರು ಫರ್ಮಾನು ಹೊರಡಿಸಿದ್ದಾರೆ. ಆದರೆ ಈ ಅರಬಿಂದೋ ಸೊಸೈಟಿ ಸಂಸ್ಥೆಯನ್ನು ತರಬೇತಿ ಮತ್ತು ಶಿಕ್ಷಣಕ್ಕೆ ಆಯ್ಕೆ ಮಾಡಿದ್ದು ಯಾರು? ಮಾನದಂಡಗಳೇನು!? ಅದರ ಇತಿಹಾಸದ ಮೌಲ್ಯ ಮಾಪನವಾಗಿದೆಯೇ? ಎಂದು ಪ್ರಜೆಗಳು ಪ್ರಶ್ನಿಸಲಿಲ್ಲ, ಪ್ರಭುತ್ವವೂ ಅರಾಮಾಗಿತ್ತು. ಮಕ್ಕಳು ಮತ್ತು ಶಿಕ್ಷಕರು ಬಲಿಪಶುಗಳಾದರು.

ನೋಡಿ ಮುಂದಿನ ಮೂರು ತಲೆಮಾರುಗಳ


ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಉಡುಪಿ.

ಸಂ. IVG Training / 01 / 20-21 (Arobindo Society) ದಿನಾಂಕ 14. 04. 2021

3. ಶ್ರೀ ... Head, Operation & Rxxxxx, Arbindo Society, Bangalore.

ಶಿಕ್ಷಣ ರೂಪಿಸುವ ಎನ್.ಇ.ಪಿ 2020 ಕುರಿತು ಖಾಸಗಿ ಸಂಸ್ಥೆಯಿಂದ ತರಬೇತಿ ಕೊಡುವ ದುರಂತ ತಲುಪಿದ್ದೇವೆ.

ಉಡುಪಿ ವಲಯದ ಎಲ್ಲಾ ಡಯಟ್ ಜವಾಬ್ದಾರಿಯನ್ನು ಈ ಅರವಿಂದ ಸೊಸೈಟಿ ಗೆ ವಹಿಸಲಾಗಿದೆ. ಮತ್ತು ಅರವಿಂದ ಸೊಸೈಟಿಯ ಸ್ಥಾಪಿತ ಹಿತಾಸಕ್ತಿಗೆ ಸಾರ್ವಜನಿಕ ವ್ಯಾಸಂಗಕ್ರಮವೇ ಬಲಿಯಾಗುತ್ತಿದೆ.ಅವರು ಏನು ಬೋದಿಸುತ್ತಾರೆ, ಯಾವ ಪಠ್ಯಗಳು ಎಲ್ಲವೂ ಪ್ರಶ್ನಾರ್ಹವಾಗಿದೆ.

ಗದಗ್ ಜಿಲ್ಲೆಯಲ್ಲಿ ವಿಜ್ಞಾನ ಶಿಕ್ಷಕರ ತರಬೇತಿಯನ್ನು ನಡೆಸಲು 'ಅಗಸ್ತ್ಯ ಫೌಂಡೇಶನ್' ಗೆ ವಹಿಸಲಾಗಿದೆ. ಡಯಟ್ ನ ಸಹಯೋಗದಲ್ಲಿ ಶಿಕ್ಷಕರ ತರಬೇತಿಯನ್ನು ಅವರು ನಡೆಸುತ್ತಿದ್ದಾರೆ. ಇದಕ್ಕೊಂದು ಸುತ್ತೋಲೆಯನ್ನು ಡಯಟ್ ಹೊರಡಿಸಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಇದು ಎರಡು ಉದಾಹರಣೆಗಳು ಮಾತ್ರ. ಮಿಕ್ಕ ಡಯಟ್ ಕೇಂದ್ರಗಳ ಹಣೆಬರಹವೂ ಸಹ ಇದೇ ರೀತಿಯಿದೆ.

ಎನ್.ಇ.ಪಿ–86ರ ಫಲಶ್ರುತಿಯಾದ ವಿಕೇಂದ್ರೀಕರಣ ಗೊಂಡ ಡಯಟ್ ಸಾರ್ವಜನಿಕ ಸಂಸ್ಥೆಯು ಎನ್.ಇ.ಪಿ–2020 ಕುರಿತು ಬೋಧಿಸಲು ಖಾಸಗಿಯವರಿಗೆ ಗುತ್ತಿಗೆ ಕೊಟ್ಟಿದೆ.

ಏನಿದು DIET?

ಕರ್ನಾಟಕದ ಸಾರ್ವಜನಿಕ ಶಿಕ್ಷಣ ಇಲಾಖೆ ಅಡಿಯಲ್ಲಿ ಒಟ್ಟು 31 DIET (ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ) ಗಳಿವೆ. ಎನ್.ಇ.ಪಿ–86 ಶಿಕ್ಷಣ ನೀತಿಯ ಶಿಫಾರಸ್ಸಿನ ಆಶಯದಂತೆ ಇದನ್ನು ಪ್ರಾರಂಭಿಸಲಾಯಿತು. ಕೇಂದ್ರೀಕರಣಗೊಂಡಿದ್ದ ತರಬೇತಿಯನ್ನು ಜಿಲ್ಲಾ ಕೇಂದ್ರಗಳ ಹಂತಕ್ಕೆ ವಿಕೇಂದ್ರೀಕರಿಸುವುದು ಮುಖ್ಯ ಉದ್ದೇಶವಾಗಿತ್ತು

ಇದರ ಮುಖ್ಯ ಕಾರ್ಯಭಾರಗಳು

1. ಪ್ರಾಥಮಿಕ ಶಿಕ್ಷಕರ ತರಬೇತಿ
2. ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಕ್ಷೇತ್ರ ಮಟ್ಟದ ಶಿಕ್ಷಣ ಅಧಿಕಾರಿಗಳಿಗೆ ತರಬೇತಿ
3. ಎಸ್ ಡಿ ಎಂಸಿ ಸದಸ್ಯರಿಗೆ ತರಬೇತಿ
4. ಕ್ಷೇತ್ರ ಸಂಪನ್ಮೂಲ ಕೇಂದ್ರ ಮತ್ತು ಕ್ಲಸ್ಟರ್ ಸಂಪನ್ಮೂಲ ಕೇಂದ್ರದ ಶಿಕ್ಷಕರಿಗೆ ತರಬೇತಿ ಜೊತೆಗೆ ಶೈಕ್ಷಣಿಕ ಸಂಪನ್ಮೂಲ ಬೆಂಬಲ ಒದಗಿಸುವುದು

ಡಯಟ್ ಗೆ ಪ್ರಾಂಶುಪಾಲರಿರುತ್ತಾರೆ.

ಇದರ ಶಾಖೆಗಳು

1) ಸೇವಾ ಪೂರ್ವ ಶಿಕ್ಷಕರ ಶಿಕ್ಷಣ (PSTE)
2) ಕೆಲಸದ ಅನುಭವ (WE)
3) ಜಿಲ್ಲಾ ಸಂಪನ್ಮೂಲ ಘಟಕ (DRU)
4) ಸೇವೆಯ ಕಾರ್ಯಕ್ರಮಗಳು, ಕ್ಷೇತ್ರ ಸಂವಹನ ಮತ್ತು ನಾವೀನ್ಯತೆ ಸಮನ್ವಯ (IFIC)
5) ಪಠ್ಯಕ್ರಮ, ಬೋಧನ ಉಪಕರಣಗಳ ಅಭಿವೃದ್ಧಿ ಮತ್ತು ಮೌಲ್ಯಮಾಪನ (CMDE)
6) ಶೈಕ್ಷಣಿಕ ತಂತ್ರಜ್ಞಾನ (ಇಟಿ)
7) ಯೋಜನೆ ಮತ್ತು ನಿರ್ವಹಣೆ (P&M)

ಇದೆಲ್ಲಾ ಶುರುವಾಗಿ 36 ವರ್ಷಗಳಾದವು. ಆದರೆ ಇಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಭ್ರಷ್ಟತೆ, ಖಾಸಗೀಕರಣ ಪರವಾದ ನೀತಿ ಮತ್ತು ನಿರ್ಲಕ್ಷ್ಯಗಳ ಕಾರಣದಿಂದ "ಡಯಟ್"ನ ಉದ್ದೇಶವೇ ಸಂಪೂರ್ಣವಾಗಿ ವಿಫಲಗೊಂಡಿದೆ.

ಶಿಕ್ಷಣ ಇಲಾಖೆಯು ಹೊಸ ಒಳನೋಟಗಳ, ನಾವೀನ್ಯತೆಯುಳ್ಳ, ಸದಾ ಅಪ್ ಡೇಟ್ ಆಗುವಂತಹ ಬೋಧನಾ ಕ್ರಮ ರೂಪಿಸಲು ಸೋತಿದೆ.

ಶ್ರಮವಹಿಸಿ ಕಟ್ಟ ಬೇಕಾಗಿದ್ದ ಡಯಟ್ ಸಾರ್ವಜನಿಕ ಸಂಸ್ಥೆಯು ಶೇ. 90 ಪ್ರಮಾಣದ ಕಾರ್ಯಭಾರದ ಜವಾಬ್ದಾರಿಯಿಂದ ನುಣಿಚಿಕೊಂಡು ಖಾಸಗಿ ಸಂಸ್ಥೆಗಳಿಗೆ, ಎನ್.ಜಿ.ಓಗಳಿಗೆ ಹೊರಗುತ್ತಿಗೆ ಕೊಟ್ಟಿದೆ.

ಈ ಹೊಣಗೇಡಿತನದಿಂದಾಗಿ ಸರಕಾರಿ ಶಾಲೆಯ ಬೋಧನಾ ಕ್ರಮದ ಪಠ್ಯಕ್ರಮವನ್ನು (teaching Curicullum) ನ್ನು ಖಾಸಗಿ ಸಂಸ್ಥೆಗಳು ತಯಾರಿಸುತ್ತವೆ.

ಸಹಜವಾಗಿಯೇ ಖಾಸಗಿಯವರ ಸ್ವಹಿತಾಸಕ್ತಿಯನ್ನು ಆದ್ಯತೆಯಾಗುಳ್ಳ ಈ ಪಠ್ಯಕ್ರಮವು ಮಕ್ಕಳ ಕಲಿಕೆ ಕೇಂದ್ರಿತವಾಗಿರುವುದಿಲ್ಲ,


ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಉಡುಪಿ.

ದಿನಾಂಕ 2.8.2021

ಸ್ಥಳೀಯತೆಯನ್ನು, ನೆಲಸಂಸ್ಕೃತಿಯ ಪಠ್ಯಗಳನ್ನು, ಹೊಸ ತಲೆಮಾರು ಗಳನ್ನು ರೂಪಿಸುವಂತಹ ಬಹುತ್ವದ ಸೆಕ್ಯುಲರ್ ವ್ಯಾಸಂಗ ಕ್ರಮವನ್ನು ಒಳಗೊಂಡಿರುವುದಿಲ್ಲ.


ಇದು ಇಲ್ಲಿನ ಶಿಕ್ಷಣದ ದುರಂತ. ಸಾರ್ವಜನಿಕರು ಕನ್ನಡ, ಕರ್ನಾಟಕದ ಕುರಿತು ಮಾತನಾಡುವಾಗ ಈ ಬಿಕ್ಕಟ್ಟಿನ ಕುರಿತಾದ ಚರ್ಚೆಯನ್ನೇ ಕೈ ಬಿಟ್ಟರು.

ಈ ಡಯಟ್ ನಲ್ಲಿ ಶಿಕ್ಷಕರಿದ್ದಾರೆ, ಅವರೇ ಬೋಧಿಸಬೇಕು,

31 ಕೇಂದ್ರಗಳಿವೆ, ಸರಕಾರವೇ ಈ ಪಠ್ಯಕ್ರಮವನ್ನು ರೂಪಿಸಬೇಕು ಮತ್ತು ಶಿಕ್ಷಣವು

ಈ "ಸಾರ್ವಜನಿಕ– ಖಾಸಗಿ ಪಾಲುದಾರಿಕೆ" ಯ ವ್ಯಾಪಾರೀಕರಣಕ್ಕೆ ಬಲಿಯಾಗಬಾರದು ಎಂದು ಯಾರೂ ಪ್ರಶ್ನಿಸಲಿಲ್ಲ. ಈ ಖಾಸಗೀಕರಣ ಒಂದು ಸಾಮಾನ್ಯ ಸಂಗತಿ ಎಂದೇ ಭಾವಿಸಲಾಯಿತು. ಪ್ರಜೆಗಳಿಗೆ ಇಲ್ಲದ ಆತಂಕ ಭ್ರಷ್ಟ ಪ್ರಭುತ್ವಕ್ಕೆ ಕಾಡಲು ಸಾಧ್ಯವೇ ಇಲ್ಲ. ಇಂದು ಕಾಲಮಿಂಚಿ ಹೋದ ದುರಂತದಲ್ಲಿ ನಾವಿದ್ದೇವೆ.

ಮೈಕೋ ಕಾರ್ಮಿಕ ಸಂಘದ ಚುನಾವಣೆಯಲ್ಲಿ ಸಿಐಟಿಯು ಬೆಂಬಲಿತ ಆನೆ ತಂಡ ಗೆಲುವು



ಬೆಂಗಳೂರು: ಬಾಷ್ (ಮೈಕೋ) ಕಂಪನಿಯಲ್ಲಿ ಆಗಸ್ಟ್ 05 ರಂದು ನಡೆದ ಮೈಕೋ ಎಂಪ್ಲಾಯೀಸ್ ಅಸೋಶಿಯೇಷನ್ (ಎಂಇಎ) ಕಾರ್ಮಿಕ ಸಂಘದ ಚುನಾವಣೆಯಲ್ಲಿ ಸಿಐಟಿಯು ಬೆಂಬಲಿತ ಆನೆ ತಂಡ ಅಭೂತಪೂರ್ವ ಗೆಲುವು ಸಾಧಿಸಿದೆ.

ಆನೆ ತಂಡದಿಂದ ಸ್ಪರ್ಧಿಸಿದ್ದ ವಿಜೆಕೆ ನಾಯರ್ ಪರವಾಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶೇಷಾದ್ರಿ ಎಸ್., ಉಪಾಧ್ಯಕ್ಷರಾಗಿ ಸೋಮಶೇಖರ್ ರೆಡ್ಡಿ. ಬಿ.ಆರ್. ಮತ್ತು ಅನಿಲ್‌ಕುಮಾರ್ ಬಿ.ಪಿ., ಪ್ರಧಾನ ಕಾರ್ಯದರ್ಶಿಯಾಗಿ ಮಂಜುನಾಥ ಆರ್. (ವಿಆರ್‌ಎಲ್), ಸಂಘಟನಾ ಕಾರ್ಯದರ್ಶಿಂಯಾಗಿ ಅನ್ಬಳಗನ್ ಎನ್., ಸಹ ಕಾರ್ಯದರ್ಶಿಂಯಾಗಿ ಆನಂದ ಬಿ.ಕೆ., ಖಜಾಂಚಿಯಾಗಿ ಶಂಕರ್ ಪಾಟೀಲ್ ಗೆಲುವು ಸಾಧಿಸಿದ್ದಾರೆ.

ಕ್ಯಾಂಟೀನ್ ಸಮಿತಿ ಸದಸ್ಯರಾಗಿ ವೀರೇಂದ್ರ ಕುಮಾರ್ ಜಿ. ಹಾಗೂ ರಿತೇಶ್ ಎಸ್.ಟಿ. ಅವರು ಸಹ ಗೆಲುವು ಸಾಧಿಸಿದ್ದಾರೆ. ಕಾರ್ಯಕಾರಿ ಸಮಿತಿಯ 18 ಸ್ಥಾನಗಳಲ್ಲಿ 13 ಸ್ಥಾನಗಳು ಹಾಗೂ 25 ಜನರಲ್ ಕೌನ್ಸಿಲ್ ಸ್ಥಾನಗಳಲ್ಲಿ 15 ಸ್ಥಾನಗಳು ಸಿಐಟಿಯು ಗೆದ್ದಿದೆ.

ಚುನಾವಣಾ ಕಣದಲ್ಲಿ ಜಿಂಕೆ ತಂಡದ ಪರವಾಗಿ ಸ್ಪರ್ಧಿಸಿದ್ದ ಬಿಜೆಪಿ ಪಕ್ಷದ ಕುಣಿಗಲ್ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಸುರೇಶ್‌ಗೌಡ ಮತ್ತು ಪಂಜು ತಂಡದಿಂದ ಎಐಟಿಯುಸಿಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ವಿಜಯಭಾಸ್ಕರ್ ನೇತೃತ್ವದ ತಂಡದ ಎಲ್ಲಾ ಪದಾಧಿಕಾರಿಗಳು ಸೋಲು ಅನುಭವಿಸಿದ್ದಾರೆ.

ಮತ ವಿವರ (ಒಟ್ಟು ಮತದಾರರು 1076)

ಶೇಷಾದ್ರಿ ಎಸ್. – 512
ಸೋಮಶೇಖರ್ ರೆಡ್ಡಿ ಬಿ.ಆರ್. – 557
ಅನಿಲ್‌ಕುಮಾರ್ ಬಿ.ಪಿ. –529



ಮಂಜುನಾಥ ಆರ್.(ವಿಆರ್‌ಎಲ್) – 536
ಅನ್ಬಳಗನ್ ಎನ್. – 515
ಆನಂದ ಬಿ.ಕೆ. – 515
ಶಂಕರ್ ಪಾಟೀಲ್ – 505

ಸಚಿವಸ್ಥಾನಕ್ಕಾಗಿ ಶಾಸಕರ ಕಿತ್ತಾಟ–ಮಳೆಯಲ್ಲಿ ಅಸ್ತವ್ಯಸ್ತಗೊಂಡ ರಾಜ್ಯದ ಜನ........ ಪುಟ 5 ರಿಂದ

ರೂ ನಷ್ಟವಾಗಿರುವ ಬಗ್ಗೆ ಅಂದಾಜಿಸಲಾಗಿದೆ.

ಕೃಷ್ಣಾನದಿಗೆ ಹೆಚ್ಚಿನ ನೀರು ಹರಿದ ಕಾರಣ ಬಾಗಲಕೋಟೆ ಜಿಲ್ಲೆಯ ನದಿ ಪಾತ್ರದ 60 ಗ್ರಾಮಗಳು ಜಲಾವೃತಗೊಂಡಿವೆ, ಈವರೆಗೆ ಒಟ್ಟು 100 ಹೆಚ್ಚಿನ ಮನೆಗಳು ಮಳೆಯಿಂದ ಹಾನಿಯಾಗಿವೆ. ಪರಿಹಾರ ವಿತರಿಸುವ ಕಾರ್ಯ ನಡೆಯುತ್ತಿದೆ ಎಂದು ಜಿಲ್ಲಾಡಳಿತ ತಿಳಿಸಿದೆ. ಜಿಲ್ಲೆಯ 60 ಪ್ರವಾಹ ಬಾಧಿತ ಗ್ರಾಮಗಳ 8813 ಕುಟುಂಬಗಳ, 35,157 ಜನ ಸಂತ್ರಸ್ತರಾಗಿದ್ದು, ಅವರಿಗಾಗಿ ಒಟ್ಟು 55 ಕಾಳಜಿ ಕೇಂದ್ರ ಸ್ಥಾಪಿಸಲಾಗಿದೆ. ಸದ್ಯ 55 ಕಾಳಜಿ ಕೇಂದ್ರಗಳಲ್ಲಿ 11,961 ಜನ ಆಶ್ರಯ ಪಡೆದಿದ್ದು, ಉಳಿದವರು ತೋಟದ ಮನೆ, ಸಂಬಂಧಿಕರ ಮನೆಗಳಲ್ಲಿ ಆಶ್ರಯ ಪಡೆದಿದ್ದಾರೆ.

ಉಡುಪಿ, ರಾಯಚೂರು, ಕೊಪ್ಪಳ, ಯಾದಗಿರಿ, ಬಿಜಾಪುರ, ಹಾವೇರಿ, ಸೇರಿದಂತೆ ಅನೇಕ ಕಡೆಗಳಲ್ಲೂ ಮಳೆ ಅವಾಂತರವನ್ನು ಸೃಷ್ಟಿಸಿದೆ. ರಾಜ್ಯದಲ್ಲಿ ಮಳೆಯಿಂದ ಸಾಕಷ್ಟು ನಷ್ಟವಾಗಿದ್ದು, ಜನಸಾಮಾನ್ಯರ ಬದುಕು ಸಂಕಷ್ಟಕ್ಕೆ ತಳ್ಳಿದೆ. ಕೂಡಲೇ ಪರಿಹಾರವನ್ನು ನೀಡಬೇಕು ಎಂದು ಸಾರ್ವಜನಿಕರು ಸರಕಾರವನ್ನು ಒತ್ತಾಯಿಸುತ್ತಿದ್ದಾರೆ.

ಮಳೆ ಪ್ರವಾಹದಿಂದ ಹಾನಿಗೊಳಗಾದ ಕುಟುಂಬಗಳಿಗೆ 5 ಲಕ್ಷರೂ ಪರಿಹಾರ ನೀಡುವುದಾಗಿ ಸರಕಾರ ಘೋಷಣೆ ಮಾಡಿದೆ. ಈ ರೀತಿ ಘೋಷಣೆಗಳು ಪ್ರತಿಬಾರಿಯೂ ಮಾಡಲಾಗುತ್ತೆ, ಆದರೆ ಘೋಷಿತ ಪರಿಹಾರ ಆ ಫಲಾನುಭವಿಗಳಿಗೆ ಸರಿಯಾಗಿ ಸಿಕ್ಕ ಉದಾಹರಣೆಗಳು ಇಲ್ಲ. ಆ ಪರಿಹಾರವನ್ನು ಪಡೆದುಕೊಳ್ಳುವುದಕ್ಕಾಗಿ ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡುವ ಇಲ್ಲವೆ ಲಂಚವನ್ನು ಕೇಳುವ ಕಾರಣಕ್ಕಾಗಿ ಅದೆಷ್ಟೊ ಜನ ಪರಿಹಾರ ಪಡೆಯದೇ ಹಾಗೇ ಭಿಟ್ಟ ಉದಾಹರಣೆಗಳಿವೆ. ಇತ್ತ ಪ್ರತಿಬಾರಿಯೂ ಮಳೆಗಾಲದಲ್ಲಿ ಈ ರೀತಿ ಸಮಸ್ಯೆ ಬರುತ್ತದೆ ಎಂಬ ಅರಿವಿದ್ದರೂ ಸರಕಾರ ಕೈ ಚೆಲ್ಲಿ ಸುಮ್ಮನೆ ಕುಳಿತು ಬಿಡುತ್ತದೆ. ಅದಕ್ಕೊಂದು ಶಾಶ್ವತ ಪರಿಹಾರ ಒದಗಿಸುವ ಯೋಜನೆಗಳನ್ನು ಸರಕಾರ ಮಾಡದರುವುದು ಬೇಸರದ ಸಂಗತಿಯಾಗಿದೆ.

ಇನ್ನೂ ರಾಜ್ಯದಲ್ಲಿ ಹೊಸ ಮುಖಮಂತ್ರಿ ಅಧಿಕಾರ ನಡೆಸುತ್ತಿದ್ದು, ಅವರು ಸಂಪುಟ ರಚನೆಯ ಕಸರತ್ತಿನಲ್ಲಿ ತೊಡಗಿದ್ದಾರೆ. ಈ ಜನರ ಗೋಳು ಕೇಳುವವರು ಯಾರೂ ಎಂಬ ಪ್ರಶ್ನೆಯೂ ಈಗ ಉದ್ಭವವಾಗಿದೆ. ಸರಕಾರ ಕೂಡಲೆ ಸಂಪುಟ ರಚನೆ ಮಾಡಿಕೊಂಡು ಮಳೆಹಾನಿಗೊಳಗಾಗಿರುವ ಜನರಿಗೆ ಮೂಲ ಸೌಲಭ್ಯ ಆರ್ಥಿಕ ಸಹಾಯ ಹಾಗೂ ಶಾಶ್ವತ ಪರಿಹಾರವನ್ನು ನೀಡಲು ಮುಂದಾಗಬೇಕಿದೆ.

2010: ಜಾಗತಿಕ ದಾಳಿಗಳ ವಿರುದ್ಧ ಕಾರ್ಮಿಕ ವರ್ಗದಿಂದ ಹೋರಾಟದ ದೃಢ ನಿಶ್ಚಯ



2010ರ ವರ್ಷದ ಆರಂಭದಲ್ಲೇ ಭಾರತದ ಕಾರ್ಮಿಕ ಆಂದೋಲನ ತನ್ನ ಹಿರಿಯ ನೇತಾರ ಜ್ಯೋತಿ ಬಸುರವರ ನಿಧನದ ದುಃಖವನ್ನು ಅನುಭವಿಸಬೇಕಾಗಿ ಬಂದರೂ, ಆ ವರ್ಷ ಕಾರ್ಮಿಕ ವರ್ಗದ ಮೇಲೆ ಜಾಗತಿಕ ದಾಳಿಗಳ ವಿರುದ್ಧ ಐಕ್ಯ ಹೋರಾಟಗಳ ವರ್ಷವಾಗಿತ್ತು. ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಸಿಐಟಿಯು ವಿನ ಸಮ್ಮೇಳನದಲ್ಲಿ ಸೌಹಾರ್ದದ ಮತ್ತು ಐಕ್ಯ ಹೋರಾಟದ ಸಂದೇಶಗಳನ್ನು ನೀಡಿದ ಅಪರೂಪದ ಘಟನೆಗೆ ಸಾಕ್ಷಿಯಾದ ವರ್ಷ. ಕಟ್ಟಡ ನಿರ್ಮಾಣ ಕಾರ್ಮಿಕರು, ಬಿಎಸ್‌ಎನ್‌ಎಲ್, ಬ್ಯಾಂಕ್, ಕಲ್ಲಿದ್ದಲು ಮುಂತಾದ ಕ್ಷೇತ್ರಗಳಲ್ಲಿ ಐಕ್ಯ ಮುಷ್ಕರಗಳು ನಡೆದ ವರ್ಷ.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ

ದಂತಕಥೆಯಾದ ನಾಯಕ ಜ್ಯೋತಿ ಬಸು ನಿಧನ

ಹೊಸ ವರ್ಷದ 2010 ರ ಆರಂಭವಾಗುತ್ತಿದ್ದಂತೆ, ಟ್ರೇಡ್ ಯೂನಿಯನ್ ಆಂದೋಲನ ಮತ್ತು ದೇಶದ ಎಡ ರಾಜಕೀಯ ಚಳುವಳಿ 17 ಜನವರಿಯಲ್ಲಿ ಕಾಂ. ಜ್ಯೋತಿ ಬಸು, ನಿಧನರಾದ ದುಃಖದಲ್ಲಿ ಮುಳುಗಿತು. ಅವರಿಗೆ 93 ವರ್ಷವಯಸ್ಸಾಗಿತ್ತು. ಸಿಪಿಐ(ಎಂ) ನ ಪೊಲಿಟ್‌ಬ್ಯೂರೋ ಸದಸ್ಯರಾಗಿದ್ದ ಮತ್ತು 1977 ರ ಜೂನ್‌ನಿಂದ 23 ವರ್ಷಗಳ ಕಾಲ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಜ್ಯೋತಿ ಬಸು ಅವರು ಸಮರ್ಥ ಆಡಳಿತಗಾರರೆಂದು ನಿರಂತರವಾಗಿ ಸಾಬೀತಾಗಿತ್ತು. ಎಡ ಚಳುವಳಿ ಮತ್ತು ದೇಶದ ಎಡ ಕಾರ್ಮಿಕ ಆಂದೋಲನವನ್ನು ಅಭಿವೃದ್ಧಿಪಡಿಸುವಲ್ಲಿ ಅವರು ಹೆಚ್ಚಿನ ಕೊಡುಗೆ ನೀಡಿದ್ದರು. ಅವರು 6 ನವೆಂಬರ್, 2000 ರಂದು ಆರೋಗ್ಯ ಕಾರಣಕ್ಕಾಗಿ ಮುಖ್ಯಮಂತ್ರಿ ಸ್ಥಾನದಿಂದ ಸ್ವತ: ಕೆಳಗಿಳಿದರು. ಇಂಗ್ಲೆಂಡ್‌ನಲ್ಲಿ ಉನ್ನತ ಶಿಕ್ಷಣ ಪಡೆದ ನಂತರ ಅವರು ಭಾರತಕ್ಕೆ ಬಂದಾಗ, ರೈಲ್ವೆ ಕಾರ್ಮಿಕರ ಆಂದೋಲನದ ಸಂಘಟಕರಾಗಿ ತಮ್ಮ ಕಾರ್ಮಿಕ ಚಳುವಳಿಯ ಜೀವನವನ್ನು ಪ್ರಾರಂಭಿಸಿದರು.ಮತ್ತು ಕೊನೆಯ ಉಸಿರಿರುವವರೆಗೂ ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರಾಗಿದ್ದರು.

ವಿವಿಧ ಕ್ಷೇತ್ರಗಳ ಕಾರ್ಮಿಕರ ರಾಷ್ಟ್ರವ್ಯಾಪಿ ಮುಷ್ಕರಗಳು

ನಿರ್ಮಾಣ ಕಾರ್ಮಿಕರ ದೇಶವ್ಯಾಪಿ ಮುಷ್ಕರ

ಕನ್‌ಸ್ಟ್ರಕ್ಷನ್ ವರ್ಕರ್ಸ್ ಫೆಡರೇಶನ್ ಆಫ್ ಇಂಡಿಯಾದ (ಸಿಡಬ್ಲ್ಯುಎಫ್‌ಐ) ಕರೆಯ ಮೇರೆಗೆ, 2009 ರ ಡಿಸೆಂಬರ್ 8 ರಂದು ಏಳು ಲಕ್ಷಕ್ಕೂ ಹೆಚ್ಚು ಕಟ್ಟಡ ಕಾರ್ಮಿಕರು ಅಖಿಲ ಭಾರತ ಮುಷ್ಕರವನ್ನು ನಡೆಸಿದರು. ಮುಷ್ಕರದ ಪರಿಣಾಮ 19 ರಾಜ್ಯಗಳ 175 ಜಿಲ್ಲೆಗಳಲ್ಲಿ ಮತ್ತು 50 ಕ್ಕೂ ಹೆಚ್ಚು ದೊಡ್ಡ ನಿರ್ಮಾಣ ಯೋಜನೆಗಳ ಮೇಲಾಯಿತು.

ಸಿ.ಡಬ್ಲ್ಯು.ಎಫ್.ಐ.ನ ಆರು ಸದಸ್ಯರ ನಿಯೋಗ, ಮಹಮ್ಮದ್ ಅಮೀನ್, ಸಂಸದ ಮತ್ತು ಸಿಐಟಿಯು ಪ್ರಧಾನ ಕಾರ್ಯದರ್ಶಿ, ಮತ್ತು ಸಂಸದ ತಪನ್ ಸೇನ್, ನೇತೃತ್ವದಲ್ಲಿ ಕೇಂದ್ರ ಕಾರ್ಮಿಕ ಸಚಿವರು ಮತ್ತು ಕೇಂದ್ರ ಸಾಗರೋತ್ತರ ಭಾರತೀಯ ವ್ಯವಹಾರಗಳ ಸಚಿವರನ್ನು ಭೇಟಿಯಾಗಿ ಕಟ್ಟಡ ಕಾರ್ಮಿಕರ, ಹತ್ತು ಅಂಶಗಳ ಚಾರ್ಟರ್ ಕುರಿತು ಚರ್ಚೆ ನಡೆಸಿದರು. ರಾಜ್ಯಗಳಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣ ಯೋಜನೆ 'ಅನುಷ್ಠಾನ' ಕುರಿತು ಚರ್ಚಿಸಲು 2010 ರ ಜನವರಿ 22 ರಂದು ರಾಜ್ಯ ಕಾರ್ಮಿಕ ಸಚಿವರ ಸಭೆ ಕರೆಯಲಾಗುವುದು ಎಂದು ನಿಯೋಗಕ್ಕೆ ಭರವಸೆ ನೀಡಲಾಯಿತು. ಎಡ ಕಾರ್ಮಿಕ ಸಂಘಗಳ ಸತತ ಪ್ರಯತ್ನದಿಂದ, ಅಸಂಘಟಿತ ವಲಯಗಳಿಗೆ ಸಾಮಾಜಿಕ ಭದ್ರತಾ ಯೋಜನೆಯನ್ನು ಮೂರು ತಿಂಗಳ ಅವಧಿಯಲ್ಲಿ ಸಿದ್ಧಪಡಿಸಲು ಭಾರತ ಸರ್ಕಾರ ಏಕ-ವ್ಯಕ್ತಿ ಸಮಿತಿಯನ್ನು ರಚಿಸಿತು.

ಭಾರತದಾದ್ಯಂತ ಬ್ಯಾಂಕ್ ನೌಕರರ ಮುಷ್ಕರ

ಸ್ಟೇಟ್ ಬ್ಯಾಂಕ್ ಆಫ್ ಇಂದೋರ್‌ನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ವಿಲೀನಗೊಳಿಸುವುದನ್ನು ವಿರೋಧಿಸಿ, ದೇಶಾದ್ಯಂತ ಬ್ಯಾಂಕ್ ನೌಕರರು ಡಿಸೆಂಬರ್ 16, 2009 ರಂದು ಒಂದು ದಿನದ ಮುಷ್ಕರವನ್ನು ಆಚರಿಸಿದರು. ಎಐಬಿಇಎ ಮತ್ತು ಎಐಬಿಒಎ ಮುಷ್ಕರಕ್ಕೆ ಕರೆ ನೀಡಿದ್ದವು. ಸಣ್ಣ ಬ್ಯಾಂಕುಗಳನ್ನು ದೊಡ್ಡ ಬ್ಯಾಂಕುಗಳಲ್ಲಿ ವಿಲೀನಗೊಳಿಸುವ ಮೂಲಕ ಸಂಬಂಧಪಟ್ಟ ಬ್ಯಾಂಕುಗಳ ನೌಕರರ ಭವಿಷ್ಯಕ್ಕೆ ಅಪಾಯವನ್ನುಂಟು ಮಾಡುತ್ತಿರುವ.ಕೇಂದ್ರ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಬ್ಯಾಂಕ್ ಸಂಘಗಳು ಪ್ರತಿಭಟಿಸುತ್ತಿದ್ದವು.

ಸೆಣಬು ಕಾರ್ಮಿಕರ ಮುಷ್ಕರ ಮುಂದುವರಿಕೆ

ಸೆಣಬು ಕಾರ್ಮಿಕರ ಮುಷ್ಕರವು ದೇಶಾದ್ಯಂತ ತೀವ್ರಗೊಂಡಿದ್ದು, 20 ಕಾರ್ಮಿಕ ಸಂಘಗಳು ಸೆಣಬಿನ ಗಿರಣಿಗಳ ಪ್ರವೇಶದ್ವಾರದಲ್ಲಿ ಬೃಹತ್ ಪ್ರತಿಭಟನಾ ಧರಣಿಗಳು, ಗೇಟ್-ಘೋಷಣೆಗಳು ಮತ್ತು ಸಭೆಗಳನ್ನು ಆಯೋಜಿಸಿದವು. ಸೆಣಬಿನ ಗಿರಣಿಗಳ ಆಧುನೀಕರಣ, ಸೆಣಬಿನ ಕಾರ್ಮಿಕರ ಬಾಕಿ ವೇತನ ಪಾವತಿ, ಭವಿಷ್ಯ ನಿಧಿ ವಂತಿಗೆಗಳನ್ನು ಕ್ರಮಬದ್ಧಗೊಳಿಸುವುದು ಮತ್ತು ಸೆಣಬಿನ ಗಿರಣಿಗಳ ಪುನರ‍್ರಚನೆ ಮುಂತಾದ ಕಾರ್ಮಿಕರ ಬೇಡಿಕೆಗಳನ್ನು ಇತ್ಯರ್ಥಗೊಳಿಸುವವರೆಗೂ ಮುಷ್ಕರ ಮುಂದುವರಿಯುತ್ತದೆ ಎಂದು ನಾಯಕರು ಎಚ್ಚರಿಸಿದ್ದರು. ಸೆಣಬಿನ ಉದ್ಯಮವನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳದಿದ್ದಲ್ಲಿ, ಜಾಗತಿಕ ಹಿನ್ನೆಲೆಯಲ್ಲಿ ಸಿಂಥೆಟಿಕ್ ಫೈಬರ್‌ಗೆ ಸೆಣಬನ್ನು ಕಾರ್ಯಸಾಧ್ಯವಾದ ಪರ್ಯಾಯವಾಗಿ ಯೋಜಿಸಲು ಸಾಧ್ಯವಿಲ್ಲ ಎಂದು ಸಹ ಸೂಚಿಸಲಾಯಿತು.

ಹೂಡಿಕೆ -ಹಿಂದೆಗೆತದ ವಿರುದ್ಧ ಬಿ.ಎಸ್.ಎನ್.ಎಲ್. ನೌಕರರ ಧರಣಿ

ಬಿ.ಎಸ್.ಎನ್.ಎಲ್. ನೌಕರರು ಮತ್ತು ಅಧಿಕಾರಿಗಳ ಜಂಟಿ ಕ್ರಿಯಾ ಸಮಿತಿಯ ಕರೆಯ ಮೇರೆಗೆ, ಮಾರ್ಚ್ 26, 2010 ರಂದು ಒಂದು ದಿನ ಧರಣಿ ಮತ್ತು ಪ್ರದರ್ಶನ ಕಾರ್ಯಕ್ರಮವನ್ನು ದೇಶಾದ್ಯಂತ ಯಶಸ್ವಿಯಾಗಿ ನಡೆಸಲಾಯಿತು. ಏಳು ಅಂಶಗಳ ಬೇಡಿಕೆಗಳಲ್ಲಿ, ಸ್ಯಾಮ್ ಪಿಟ್ರೊಡಾ ಸಮಿತಿ ಸೂಚಿಸಿದಂತೆ ಯು.ಪಿ.ಎ. ಸರ್ಕಾರ ಲಾಭಗಳಿಸುವ ಸಾರ್ವಜನಿಕ ಉದ್ದಿಮೆಯಾದ ಬಿ.ಎಸ್.ಎನ್. ಎಲ್. ಷೇರುಗಳನ್ನು ಮಾರಾಟ ಮಾಡುವ ಮತ್ತು ಒಂದು ಲಕ್ಷ ಬಿಎಸ್‌ಎನ್‌ಎಲ್ ಉದ್ಯೋಗಿಗಳನ್ನು ರಿಟ್ರೆಂಚಮೆಂಟ್ ಮಾಡುವ ಪ್ರಯತ್ನವನ್ನು ನಿಲ್ಲಿಸಬೇಕು ಎಂಬುದು ಸೇರಿದ್ದವು. ಕಾರ್ಯಕ್ರಮವು ದೇಶಾದ್ಯಂತದ ಬಿಎಸ್‌ಎನ್‌ಎಲ್ ಕಚೇರಿಗಳ ಮುಂದೆ ಬೆಳಿಗ್ಗೆ 10 ಗಂಟೆಗೆ ನೌಕರರ ಭಾರಿ ಭಾಗವಹಿಸುವಿಕೆಯ ನಡುವೆ ಪ್ರಾರಂಭವಾಯಿತು. ಬೇಡಿಕೆಗಳನ್ನು ಈಡೇರಿಸದಿದ್ದರೆ 2010 ರ ಏಪ್ರಿಲ್ 20 ರಂದು ರಾಷ್ಟ್ರವ್ಯಾಪಿ ಮುಷ್ಕರದ ನೋಟಿಸ್ ನೀಡಲಾಯಿತು. ಟೆಲಿಕಾಂ ಕ್ಷೇತ್ರದ ಹಲವಾರು ಸೌಹಾರ್ದ ಸಂಘಟನೆಗಳು ಸಹ ಬೆಂಬಲವನ್ನು ನೀಡಿದವು.

ತಮ್ಮ ಬೇಡಿಕೆಗಳನ್ನು ಬೆಂಬಲಿಸಿ ಬಿ.ಎಸ್.ಎನ್. ಎಲ್. ನೌಕರರ ಸಂಪೂರ್ಣ ಸಮೂಹದ ತೀವ್ರ ಪ್ರತಿರೋಧದ ಹಿನ್ನೆಲೆಯಲ್ಲಿ, 2010 ರ ಏಪ್ರಿಲ್ 20 ರಂದು ಮುಷ್ಕರ ಪ್ರಾರಂಭವಾದ ಎರಡು ಗಂಟೆಗಳಲ್ಲಿ ಕೇಂದ್ರ ಸರ್ಕಾರವು ಹಿಮ್ಮೆಟ್ಟಬೇಕಾಗಿ ಬಂತು ಮತ್ತು ಮುಷ್ಕರನಿರತ ನೌಕರರ ನಾಯಕತ್ವದೊಂದಿಗೆ ಚರ್ಚೆಯನ್ನು ನಡೆಸಿತು. ಮುಷ್ಕರವು ದೇಶಾದ್ಯಂತ ಬಹುತೇಕ ಪೂರ್ಣವಾಗಿದ್ದು, 3000 ಕ್ಕೂ ಹೆಚ್ಚು ಬಿ.ಎಸ್. ಎನ್.ಎಲ್. ಕಚೇರಿಗಳಲ್ಲಿ ಹೆಚ್ಚಿನವು ಕಾರ್ಮಿಕರು ಮತ್ತು ಅಧಿಕಾರಿಗಳ ಮುಷ್ಕರದಿಂದಾಗಿ ನಿರ್ಜನವಾಗಿ ಕಂಡವು.. ಬಿ.ಎಸ್.ಎನ್.ಎಲ್. ಉದ್ಯೋಗಿಗಳ ಸಂಘಗಳ ಜಂಟಿ ಕ್ರಿಯಾ ಸಮಿತಿಯು ರಾಷ್ಟ್ರವ್ಯಾಪಿ ಅನಿರ್ದಿಷ್ಟ ಮುಷ್ಕರಕ್ಕೆ ಕರೆ ನೀಡಿತ್ತು, ಇದರಲ್ಲಿ ಬಿ.ಎಸ್.ಎನ್.ಎಲ್.ನ ಕಾರ್ಯನಿರ್ವಾಹಕರು ಮತ್ತು ಕಾರ್ಯನಿರ್ವಾಹಕೇತರರು ಸೇರಿದ್ದರು. 'ಸ್ವಯಂ-ನಿವೃತ್ತಿ ಪರಿಚಯ, ಹೂಡಿಕೆ-ಹಿಂದೆಗೆತ ಮತ್ತು ಬಿ.ಎಸ್.ಎನ್.ಎಲ್. ಮೂಲಸೌಕರ್ಯ ಹಂಚಿಕೆ ಮತ್ತು ಇತರ ವಿಷಯಗಳ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಯೂನಿಯನ್‌ಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸಂವಹನ ಮತ್ತು ಮಾಹಿತಿ ಮಂತ್ರಿ ಮತ್ತು ಜಂಟಿ ಕ್ರಿಯಾ ಸಮಿತಿಯ ನಾಯಕತ್ವಕ್ಕೆ ನೀಡಿದ ಭರವಸೆಯ ನಂತರವೇ, ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು ಮತ್ತು ಕರ್ತವ್ಯವನ್ನು ಪುನರಾರಂಭಿಸುವಂತೆ ಕಾರ್ಮಿಕರಿಗೆ ಕರೆ ನೀಡಲಾಯಿತು. ಮುಷ್ಕರದ ಮುಖ್ಯ ಬೇಡಿಕೆಗಳೆಂದರೆ 1) ಬಿ.ಎಸ್.ಎನ್.ಎಲ್.ನ ಹೂಡಿಕೆ-ಹಿಂದೆಗೆತ ಅಥವಾ ಖಾಸಗೀಕರಣ ಬೇಡ; 2) ರಿಟ್ರೆಂಚ್‌ಮೆಂಟ್/ ವಿಆರ್‌ಎಸ್ ಬೇಡ, 3) ಕೊನೆಯಹಂತದ ಸಂಪರ್ಕ ಮತ್ತು ಇತರ ಮೂಲಸೌಕರ್ಯಗಳ ಹೊರಗುತ್ತಿಗೆ ಬೇಡ, 4) ಹೊರಗುತ್ತಿಗೆ ಬೇಡ, 5) ಐ.ಟಿ.ಎಸ್. ಹುದ್ದೆಗಳ ಹೀರಿಕೊಳ್ಳುವಿಕೆಯ ಇತ್ಯರ್ಥ, 6) ಮೊಬೈಲ್ ಮಾರ್ಗಗಳ ತಕ್ಷಣದ ಖರೀದಿ ಮತ್ತು 7) ಬಿ.ಎಸ್. ಎನ್.ಎಲ್. ನಿವೃತ್ತರಿಗೆ ಐಡಿ / ಪಿಂಚಣಿ ಪರಿಷ್ಕರಣೆ ಖಚಿತಪಡಿಸುವುದು ಸೇರಿದ್ದವು.

ಸಿ.ಐ.ಟಿ.ಯು. ಐಕ್ಯ ಹೋರಾಟದ ಪ್ರತಿಜ್ಞೆಯನ್ನು ನವೀಕರಿಸಿತು

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ತನ್ನ ಹದಿಮೂರನೆಯ ಅಖಿಲ ಭಾರತ ಸಮ್ಮೇಳನವನ್ನು ಚಂಡೀಗಢ್ ದಲ್ಲಿ 2010 ಮಾರ್ಚ್ 17-21 ರಂದು ಆಯೋಜಿಸಿತು. ಬಹಳ ಶಿಸ್ತು ಮತ್ತು ಉತ್ಸಾಹದಿಂದ ಸಮ್ಮೇಳನವನ್ನು ಭರ್ಜರಿ ಯಶಸ್ಸಿನೊಂದಿಗೆ ನಡೆಸಲಾಯಿತು. ದುಡಿಯುವ ಜನರನ್ನು ಒಗ್ಗೂಡಿಸುವ ಮತ್ತು ಸರ್ಕಾರವು ಅನುಸರಿಸುತ್ತಿರುವ 'ನವ-ಉದಾರವಾದಿ' ಪ್ರತಿಗಾಮಿ ಆರ್ಥಿಕ ನೀತಿಗಳ ದಾಳಿಗಳ ವಿರುದ್ಧ ಪಟ್ಟುಬಿಡದ ಹೋರಾಟವನ್ನು ನಡೆಸುವ ಹೊಸ ಪ್ರತಿಜ್ಞೆಯೊಂದಿಗೆ ಸಮ್ಮೇಳನವು ಮುಕ್ತಾಯಗೊಂಡಿತು: ಸಮ್ಮೇಳನ ಎಲ್ಲಾ ಇತರ ಕೇಂದ್ರ ಕಾರ್ಮಿಕ ಸಂಘಗಳ ನಾಯಕರು ಸಿಐಟಿಯು ಪ್ರತಿನಿಧಿಗಳಿಗೆ ಶುಭಕೋರಿದ, ಅಪರೂಪದ ಘಟನೆಗೆ ಸಾಕ್ಷಿಯಾಯಿತು, ಅಭೂತಪೂರ್ವವಾಗಿ, ಇತರ ಕಾರ್ಮಿಕ ಸಂಘಗಳ ನಾಯಕರು ಕೇಂದ್ರ ಸರ್ಕಾರದ ಮುಂದಿಟ್ಟ ಒಂಬತ್ತು ಅಂಶಗಳ ಬೇಡಿಕೆಗಳ ಪತ್ರ ಮೇಲೆ ರಾಷ್ಟ್ರವ್ಯಾಪಿ ಜಂಟಿ ಅಭಿಯಾನಗಳನ್ನು ನಡೆಸುವ ಕಾರ್ಯವನ್ನು ಒಗ್ಗಟ್ಟಿನಿಂದ ಮುಂದುವರೆಸಲು ಒತ್ತು ನೀಡಿದರು. ಇದರಲ್ಲಿ 5 ಲಕ್ಷ ನೌಕರರು ಮತ್ತು ಕಾರ್ಮಿಕರು 5,ಮಾರ್ಚ್ 2010ರಂದು ಜೈಲ್-ಭರೋ ನಡೆಸುವ ಕಾರ್ಯಕ್ರಮವೂ ಸೇರಿತ್ತು. ಸಮ್ಮೇಳನದಲ್ಲಿ 357 ಮಹಿಳಾ ಪ್ರತಿನಿಧಿಗಳು ಸೇರಿದಂತೆ 2410 ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನದಲ್ಲಿ 16 ದೇಶಗಳಿಂದ 32 ವಿದೇಶಿ ಪ್ರತಿನಿಧಿಗಳು ಮತ್ತು ಐಎಲ್‌ಒನ ಇಬ್ಬರು ಪ್ರತಿನಿಧಿಗಳು ಭಾಗವಹಿಸಿದ್ದರು. ಎ.ಐ.ಎಸ್.ಜಿ.ಇಎಫ್ ಸಹಾಯಕ ಪ್ರಧಾನ ಕಾರ್ಯದರ್ಶಿ ಆರ್ ಸಿ ಜಗ್ಗಾ ಅವರು ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದರು. ಪಶ್ಚಿಮ ಬಂಗಾಳದಲ್ಲಿ ಮಾವೋವಾದಿ ದಾಳಿಯ ವಿರುದ್ಧ, ಟ್ರೇಡ್ ಯೂನಿಯನ್ ಐಕ್ಯತೆಯ ಮೇಲೆ, ಬೆಲೆ ಏರಿಕೆಯ ವಿರುದ್ಧ, ಕೃಷಿ ಬಿಕ್ಕಟ್ಟುಗಳ ಮೇಲೆ ಮತ್ತು ಕಾರ್ಮಿಕ-ರೈತರ ಐಕ್ಯತೆಯನ್ನು ರೂಪಿಸಲು, ಕ್ಯೂಬನ್ ಕ್ರಾಂತಿಯ 50 ನೇ ವಾರ್ಷಿಕೋತ್ಸವ ಆಚರಣೆ, ಪ್ರತಿಗಾಮಿ ಕಾರ್ಮಿಕ ಕಾನೂನುಗಳಿಗೆ ವಿರುದ್ಧ, ಪಿಎಸ್ಯುಗಳು, ವಿಮೆ ಮತ್ತು ಬ್ಯಾಂಕುಗಳಲ್ಲಿ ಹೂಡಿಕೆ-ಹಿಂದೆಗೆತಗಳ ವಿರುದ್ಧ ಸಮ್ಮೇಳನವು ಸರ್ವಾನುಮತದಿಂದ ನಿರ್ಣಯಗಳನ್ನು ಅಂಗೀಕರಿಸಿತು. ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟ ಪ್ರಧಾನ ಕಾರ್ಯದರ್ಶಿಯ ವರದಿಯ ಕುರಿತು ಚರ್ಚೆಯಲ್ಲಿ 60 ಪ್ರತಿನಿಧಿಗಳು ಭಾಗವಹಿಸಿದ್ದರು. ಮುಂದಿನ ಅವಧಿಗೆ ಹೊಸ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಎ. ಕೆ. ಪದ್ಮನಾಭನ್ ಮತ್ತು ತಪನ್ ಸೇನ್ ಕ್ರಮವಾಗಿ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ, 16 ಕಾರ್ಯದರ್ಶಿಗಳು ಮತ್ತು ಕಾಂ ಎಂ.ಕೆ. ಪಂಧೆ ಮತ್ತು ಸುಕೋಮಲ್ ಸೇನ್ ಸೇರಿದಂತೆ 16 ಉಪಾಧ್ಯಕ್ಷರು ಆಯ್ಕೆಯಾದರು.

ಬೆಲೆ ಏರಿಕೆಯ ವಿರುದ್ಧ ರಾಷ್ಟ್ರವ್ಯಾಪಿ ಹರತಾಳಕ್ಕೆ ವ್ಯಾಪಕ ಮತ್ತು ಸ್ವಯಂಪ್ರೇರಿತ ಪ್ರತಿಕ್ರಿಯೆ

27 ಏಪ್ರಿಲ್ 2010 ರಂದು 13 ಎಡ ಮತ್ತು ಎನ್‌ಡಿಎಯೇತರ ಜಾತ್ಯತೀತ ವಿರೋಧ ಪಕ್ಷಗಳ ಕರೆಯ ಮೇರೆಗೆ, ರಾಷ್ಟ್ರವ್ಯಾಪಿ ಹನ್ನೆರಡು ಗಂಟೆಗಳ ಹರತಾಳ ಅದ್ಭುತ ಯಶಸ್ಸನ್ನು ಕಂಡಿತು. ಮುಷ್ಕರದ ಪರಿಣಾಮವು ಅಸ್ಸಾಂ, ಆಂಧ್ರಪ್ರದೇಶ, ಬಿಹಾರ, ಹರಿಯಾಣ, ಜಾರ್ಖಂಡ್, ಕೇರಳ, ಮಹಾರಾಷ್ಟ್ರ, ಒರಿಸ್ಸಾ, ತಮಿಳುನಾಡು, ತ್ರಿಪುರ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಸಂಪೂರ್ಣ ಮತ್ತು ಉಳಿದ ರಾಜ್ಯಗಳಲ್ಲಿ ವಿಭಿನ್ನ ಬಗೆಯದಾಗಿತ್ತು.

ಮುಷ್ಕರದ ಕರೆಗೆ ಹೆಚ್ಚಿನ ಸಂಖ್ಯೆಯ ಸ್ವಯಂಪ್ರೇರಿತ ಪ್ರತಿಕ್ರಿಯೆಯು, ಗಗನಕ್ಕೇರಿದ್ದ ಬೆಲೆಗಳ ವಿಶೇಷವಾಗಿ ಅಗತ್ಯ ಸರಕುಗಳಿಗೆ ಸಂಬಂಧಿಸಿದಂತೆ ಮತ್ತು ಕೇಂದ್ರ ಸರ್ಕಾರವು ಬೆಲೆ ಏರಿಕೆಯನ್ನು ನಿಯಂತ್ರಿಸುವಲ್ಲಿ ವಿಫಲವಾದುದರ ವಿರುದ್ಧ ಜನರ ಹೆಚ್ಚುತ್ತಿರುವ ಅಸಮಾಧಾನವನ್ನು ಪ್ರತಿಬಿಂಬಿಸಿತ್ತು. ರ‍್ಯಾಲಿಗಳು, ಮೆರವಣಿಗೆಗಳು ಮತ್ತು ಧರಣಿಗಳು ಹಲವಾರು ಕೇಂದ್ರಗಳಲ್ಲಿ ನಡೆದವು. ದೇಶಾದ್ಯಂತ ಸಾವಿರಾರು ಪ್ರತಿಭಟನಾಕಾರರು ಬಂಧನಕ್ಕೊಳಗಾದರು. ಕೆಲವು ಸ್ಥಳಗಳಲ್ಲಿ ಪೊಲೀಸರು ಹರತಾಳ ಬೆಂಬಲಿಗರ ಮೇಲೆ ಲಾಠಿ ಪ್ರಹಾರ ಮಾಡಿದರು.

ಪಶ್ಚಿಮ ಬಂಗಾಳದಲ್ಲಿ ಬೆಲೆ ಏರಿಕೆ ವಿರುದ್ಧ ಅಹೋರಾತ್ರಿ ಧರಣಿ

ಪಶ್ಚಿಮ ಬಂಗಾಳದ ದುಡಿಯುವ ಜನರ ಸಂಘಟಿತ ವಲಯದ ಜಂಟಿ ವೇದಿಕೆಯಾದ ವಿಶಾಲ ಸಮಿತಿಯ ಕರೆಯ ಮೇರೆಗೆ, ನಿರಂತರವಾಗಿ ಹನ್ನೆರಡು ಗಂಟೆಗಳ ಕಾಲ ಬೃಹತ್ ಸಾಮೂಹಿಕ ಪ್ರದರ್ಶನ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಬ್ಲಾಕ್ ಮಟ್ಟದಿಂದ ರಾಜ್ಯ ಮಟ್ಟದವರೆಗೆ 23 ಏಪ್ರಿಲ್ 2010 ರಂದು ಸಂಜೆಯಿಂದ 24 ಏಪ್ರಿಲ್ 2010 ಬೆಳಿಗ್ಗೆ ವರೆಗೆ ಆಚರಿಸಲಾಯಿತು. ರಾಜ್ಯ ಮತ್ತು ಕೇಂದ್ರ ಸರ್ಕಾರ, ರಾಜ್ಯ ಮತ್ತು ಕೇಂದ್ರ ಪಿ.ಎಸ್.ಯು.ಗಳು, ರೈಲ್ವೆ, ರಕ್ಷಣಾ, ಬ್ಯಾಂಕ್, ವಿಮೆ, ವಾಣಿಜ್ಯ ಕಚೇರಿಗಳು, ಭಾರತದ ಆಹಾರ ನಿಗಮಗಳ, ಸಾವಿರಾರು ನೌಕರರು ಮತ್ತು ಕಾರ್ಮಿಕರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಶಿಕ್ಷಕರು ಮತ್ತು ಪಿಂಚಣಿದಾರರು ಸಹ ಭಾಗವಹಿಸಿದ್ದರು. ಎಲ್ಲಾ ಅಗತ್ಯ ವಸ್ತುಗಳ ನಿರಂತರ ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಈ ಆಂದೋಲನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವುದು, ಆನ್‌ಲೈನ್ ಮತ್ತು ಫಾರ್ವರ್ಡ್ ಟ್ರೇಡಿಂಗ್‌ನಿಂದ ಅಗತ್ಯ ಸರಕುಗಳಿಗೆ ವಿನಾಯಿತಿ, ಆಹಾರ ಧಾನ್ಯಗಳು, ಪೆಟ್ರೋಲ್, ಡೀಸೆಲ್ ಮತ್ತು ರಸಗೊಬ್ಬರಗಳ ಬೆಲೆಏರಿಕೆಯನ್ನು ಹಿಂತೆಗೆದುಕೊಳ್ಳುವುದು, ಸಾರ್ವಜನಿಕ ವಲಯದಲ್ಲಿ ಹೂಡಿಕೆ-ಹಿಂತೆಗೆತ ಮಾಡುವುದನ್ನು ನಿಲ್ಲಿಸುವುದು

ಪುಟ 14 ನೋಡಿ

ಪೆಗಸಸ್ ಗೂಢಚಾರಿಕೆ ಪ್ರಕರಣ: ಸತ್ಯ ಹೊರಬರಲೇ ಬೇಕು-ಸುಪ್ರಿಂ ಕೋರ್ಟ್

ಆಗಸ್ಟ್ 5ರಂದು ದೇಶದ ಸರ್ವೋಚ್ಚ ನ್ಯಾಯಾಲಯ ಪೆಗಸಸ್ ಗೂಢಚಾರಿಕೆ ಕುರಿತಂತೆ ಹಾಕಿದ್ದ ಅರ್ಜಿಗಳ ವಿಚಾರಣೆಯನ್ನು ಕೈಗೆತ್ತಿಕೊಂಡಿತು. ನಾಗರಿಕರು, ಪತ್ರಕರ್ತರು, ಮಂತ್ರಿಗಳು, ಸಂಸದ್ ಸದಸ್ಯರು, ಚಳುವಳಿಕಾರರ ಮೇಲೆ ಗೂಢಚಾರಿಕೆ ನಡೆಸಲು ಇಸ್ರೇಲ್ ನಲ್ಲಿ ನೆಲೆಯಿರುವ ತಂತ್ರಜ್ಞಾನವನ್ನು ಬಳಸಿರುವ ವರದಿಗಳು ನಿಜವಾಗಿದ್ದರೆ, ಅದು "ನಿಸ್ಸಂದೇಹವಾಗಿಯೂ ಗಂಭೀರ" ಎಂದು ಟಿಪ್ಪಣಿ ಮಾಡುತ್ತ "ಸತ್ಯವು ಹೊರಬರಲೇ ಬೇಕು" ಎಂದು ಸ್ಪಷ್ಟಪಡಿಸಿತು.

ಹಿರಿಯ ಪತ್ರಕರ್ತರಾದ ಎನ್.ರಾಮ್ ಮತ್ತು ಶಶಿ ಕುಮಾರ್ ರವರ ಅರ್ಜಿ, ಅದಕ್ಕೆ ಮೊದಲು ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್ ಮತ್ತು ವಕೀಲರಾದ ಎಂ ಎಲ್ ಶರ್ಮರವರ ಅರ್ಜಿಗಳು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳಾಗಿದ್ದರೆ, ನಂತರ ಪೆಗಸಸ್ ಗೂಢಚಾರಿಕೆಯ ಪಟ್ಟಿಯಲ್ಲಿ ಹೆಸರಿರುವ ಐದು ಪತ್ರಕರ್ತರು ಮತ್ತು ಹಕ್ಕು ಕಾರ್ಯಕರ್ತರುಗಳಾದ ಜಗದೀಶ್ ಚೊಕ್ಕರ್, ನರೇಂದ್ರ ಮಿಶ್ರ, ಎಸ್ ಎನ್ ಎಂ ಅಬ್ದಿ, ಪತ್ರಕರ್ತ ರೂಪೇಶ್ ಕುಮಾರ್ ಸಿಂಗ್ ಮತ್ತು ಪರಂಜೊಯ್ ಗುಹ ಠಾಕುರ್ತ ವೈಯಕ್ತಿಕ ಅರ್ಜಿಗಳನ್ನು ಸಲ್ಲಿಸಿದರು. ಹಾಗೂ ಕೊನೆಯದಾಗಿ ಭಾರತದ ಸಂಪಾದಕರ ಸಂಘ (ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯ) ಮತ್ತು ಮಾಜಿ ಕೇಂದ್ರ ಮಂತ್ರಿ ಯಶವಂತ ಸಿನ್ಹ ಕೂಡ ಅರ್ಜಿ ಸಲ್ಲಿಸಿದರು.

ಇವೆಲ್ಲ ಅರ್ಜಿಗಳ ವಿಚಾರಣೆಯನ್ನು ಕಳೆದ ವಾರ ಆಶ್ವಾಸನೆ ನೀಡಿದಂತೆ ಆಗಸ್ಟ್ 5ರಂದು ಕೈಗೆತ್ತಿಕೊಂಡ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿಎನ್.ವಿ.ರಮಣ ಹಾಗೂ ನ್ಯಾಯಮೂರ್ತಿ ಸೂರ್ಯಕಾಂತ್‌ರವರಿರುವ ಪೀಠ ಪ್ರಾಥಮಿಕ ವಿಚಾರಣೆಗಳ ನಂತರ, ಇವರೆಲ್ಲರು ತಮ್ಮ ಅರ್ಜಿಗಳ ಪ್ರತಿಗಳನ್ನು ಅಟಾರ್ನಿ ಜನರಲ್ ಮತ್ತು ಸಾಲಿಸಿಟರ್ ಜನರಲ್ ರವರಿಗೆ ತಲುಪಿಸಬೇಕು ಎಂದು ನಿರ್ದೇಶನ ನೀಡಿತು. ವಿಚಾರಣೆಯನ್ನು ಆಗಸ್ಟ್ 10ಕ್ಕೆ ಮುಂದೂಡುತ್ತ ಮುಖ್ಯ ನ್ಯಾಯಮೂರ್ತಿಗಳು ಅಂದು "ಸರಕಾರದಿಂದ ಯಾರಾದರೂ ಹಾಜರಿರಬೇಕು" ಎಂದೂ ಹೇಳಿದರು.

ವಿಚಾರಣೆ ನ್ಯಾಯಪೀಠದಿಂದ ಅರ್ಜಿದಾರರಿಗೆ ಹಲವಾರು ಪ್ರಶ್ನೆಗಳೊಂದಿಗೆ ಆರಂಭವಾಯಿತು ಎಂದು ವರದಿಯಾಗಿದೆ. ಮೊದಲನೆಯದಾಗಿ, ಹೆಚ್ಚಿನ ಅರ್ಜಿಗಳು ವಿದೇಶಿ ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ಆಧರಿಸಿವೆ. ಇತರ ಪರೀಕ್ಷಿಸಬಹುದಾದ ಸಾಮಗ್ರಿಗಳನ್ನು ಪಡೆಯಲು ಅರ್ಜಿದಾರರಿಗೆ ಸಾಧ್ಯವಿರಲಿಲ್ಲವೇ? ಎರಡನೆಯದಾಗಿ, ಗೂಢಚಾರಿಕೆಯ ಪ್ರಶ್ನೆ ಎರಡು ವರ್ಷಗಳ ಹಿಂದೆಯೇ ಬಂದಿತ್ತು, ಈಗ ಇದ್ದಕ್ಕಿದ್ದಂತೆ ಇದನ್ನು ಎತ್ತಿರುವುದೇಕೆ? ಮತ್ತು ಮೂರನೆಯದಾಗಿ, ನಿಮ್ಮ ಫೋನ್‌ಗಳನ್ನು ಬೇಧಿಸಲಾಗಿದೆ ಎಂದು ನಿಮಗೆ ಗೊತ್ತಿದ್ದರೆ, ಒಂದು ಕ್ರಿಮಿನಲ್ ದೂರು ಯಾಕೆ ಸಲ್ಲಿಸಲಿಲ್ಲ?

ಮೊದಲ ಪ್ರಶ್ನೆಗೆ ಉತ್ತರಿಸುತ್ತ, ಅರ್ಜಿದಾರರ ಒಬ್ಬ ವಕೀಲರಾದ ಕಪಿಲ್ ಸಿಬಲ್ ಈ ಗೂಢಚರ್ಯೆ ತಂತ್ರಾಂಶವನ್ನು "ಸರಕಾರೀ ಸಂಸ್ಥೆಗಳಿಗೆ ಮಾತ್ರ ಮಾರಾಟ ಮಾಡಲಾಗಿದೆ" ಎಂದು ಅಮೆರಿಕಾದ ಒಂದು ಕೋರ್ಟ್ ದಾಖಲು ಮಾಡಿಕೊಂಡಿದೆ. ಅಮೆರಿಕಾದ ಕೋರ್ಟ್ ಈಗಾಗಲೇ ಈ ತಂತ್ರಾಂಶದ ಒಡೆಯರಾದ ಎನ್.ಎಸ್.ಒ. ವಿರುದ್ಧ ವಾಟ್ಸ್‌ಆಪ್ ಸಲ್ಲಿಸಿದ ದೂರಿನ ವಿಚಾರಣೆ ನಡೆಸುತ್ತಿದೆ ಎಂದರು. ಅಲ್ಲದೆ ಭಾರತ ಸರಕಾರದ ಮಂತ್ರಿಗಳು ಕಳೆದ ತಿಂಗಳು ಸಂಸತ್ತಿನಲ್ಲಿ ನೀಡಿರುವ ಹೇಳಿಕೆ ಭಾರತದ ಬಳಕೆದಾರರ ಗೂಢಚರ್ಯೆಯನ್ನು ಗಮನಿಸಿದೆ ಎಂದೂ ಅವರು ಹೇಳಿದರು.

ಎರಡನೇ ಪ್ರಶ್ನೆ ಕುರಿತಂತೆ, 2019ರಲ್ಲಿ ಇದನ್ನು ಎತ್ತಲಾಗಿತ್ತು, ಆಗ ಸರಕಾರ ಯಾವುದೇ ಮಾತುಕತೆಯ ಮೇಲೆ ನಿಗಾ ಇಡಲು ಅಧಿಕಾರ ನೀಡಿಲ್ಲ ಎಂದಿತು. ಅಲ್ಲದೆ ಗೂಢಚರ್ಯೆಗೆ ಗುರಿಯಾಗಿರಬಹುದಾದವರ ಹೆಸರುಗಳು ಗೊತ್ತಾಗಿರುವುದು 2021ರಲ್ಲೇ ಎಂದು ಇನ್ನೊಬ್ಬ ವಕೀಲರು ಹೇಳಿದರು.

ಮೂರನೆಯದಾಗಿ, ಈ ಗೂಢಚರ್ಯೆ ವೈಯಕ್ತಿಕ ಪ್ರಕರಣವಲ್ಲ, ಇದಕ್ಕೆ ವ್ಯಾಪಕ ಆಯಾಮಗಳಿವೆ, ಆದ್ದರಿಂದ ಇದರ ತನಿಖೆಯಾಗಬೇಕಾಗಿದೆ ಎಂದು ಮತ್ತೊಬ್ಬ ಅರ್ಜಿದಾರರ ವಕೀಲರು ಹೇಳಿದರು.

ಈ ಸಂದರ್ಭದಲ್ಲೇ ನ್ಯಾಯಾಲಯ, ಈ ಕುರಿತ ವರದಿಗಳು ನಿಜವಾಗಿದ್ದರೆ, ಅದು "ನಿಸ್ಸಂದೇಹವಾಗಿಯೂ ಗಂಭೀರ" ಎಂದೂ, "ಸತ್ಯವು ಹೊರಬರಲೇ ಬೇಕು" ಎಂದೂ ಟಿಪ್ಪಣಿ ಮಾಡಿತು.



"ಈ ಪ್ರಶ್ನೆಯಲ್ಲಿ ಚರ್ಚಿಬೇಕಾದ್ದು ಏನೂ ಇಲ್ಲ"!
ವ್ಯಂಗ್ಯಚಿತ್ರ: ಅಲೋಕ್ ನಿರಂತರ್, ಫೇಸ್‌ಬುಕ್

ಖಾಸಗೀಕರಣದ ನಡೆಗಳ ವಿರುದ್ಧ ಸಾಮಾನ್ಯ ವಿಮಾ ನೌಕರರ ದೇಶವ್ಯಾಪಿ ಮುಷ್ಕರ

ಲೋಕಸಭೆಯಲ್ಲಿ ಯಾವುದೇ ಚರ್ಚೆ ನಡೆಸದೆ ಆಗಸ್ಟ್ 2ರಂದು ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳನ್ನು ಖಾಸಗೀಕರಿಸಲು ಅವಕಾಶ ಕಲ್ಪಿಸುವ ಮಸೂದೆಯನ್ನು ಪಾಸು ಮಾಡಿಸಿಕೊಂಡಿರುವುದರ ವಿರುದ್ಧ ಆಗಸ್ಟ್ 4ರಂದು ದೇಶಾದ್ಯಂತ 66,000 ಸಾಮಾನ್ಯ ವಿಮಾ ನೌಕರರು ಪ್ರತಿಭಟನಾ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಜೀವ ವಿಮಾ ನೌಕರರು ದೇಶಾದ್ಯಂತ ಮತಪ್ರದರ್ಶನಗಳ ಮೂಲಕ ಸೌಹಾರ್ದ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಈ ನೌಕರರನ್ನು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಅಭಿನಂದಿಸಿದ್ದಾರೆ.

ಜುಲೈ 30 ರಂದು ಹಣಕಾಸು ಮಂತ್ರಿಗಳು ಸಾಮಾನ್ಯ ವಿಮಾ ವ್ಯವಹಾರಗಳು(ರಾಷ್ಟ್ರೀಕರಣ) ತಿದ್ದುಪಡಿ ಮಸೂದೆ, 2021 ನ್ನು, ಆದರ ವಿರುದ್ಧ ವ್ಯಾಪಕವಾದ ಆಕ್ಷೇಪಗಳಿದ್ದರೂ ಅವನ್ನು ಗಮನಕ್ಕೆ ತಗೊಳ್ಳದೆ ಮಂಡಿಸಿದರು. ಪೆಗಸಸ್ ಗೂಢಚಾರಿಕೆ ಹಗರಣದ ಬಗ್ಗೆ ಮತ್ತು ಎಂಟು ತಿಂಗಳಿಂದ ರಾಜಧಾನಿಯ ಗಡಿಗಳಲ್ಲಿ ನಡೆಯುತ್ತಿರುವ ರೈತರ ಹೋರಾಟದ ಬಗ್ಗೆ ಚರ್ಚೆ ನಡೆಸಬೇಕೆಂಬ ಪ್ರತಿಪಕ್ಷಗಳ ಬೇಡಿಕೆಗಳನ್ನು ಸರಕಾರ ಮನ್ನಿಸದ ಕಾರಣದಿಂದಾಗಿ ಎರಡೂ ಸದನಗಳಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಗದ್ದಲದ ನಡುವೆಯೇ ಲೋಕಸಭೆ ಈ ಮಸೂದೆಯನ್ನು ಅಂಗೀಕರಿಸಿದೆ ಎಂದು ಪ್ರಕಟಿಸಲಾಗಿದೆ. ಇದನ್ನು ಪ್ರತಿಭಟಿಸಿ ಮುಷ್ಕರಕ್ಕೆ ಸಾರ್ವಜನಿಕ ವಲಯದ ವಿಮಾಕಂಪನಿಗಳ ನೌಕರರ ಸಂಘಗಳ ಜಂಟಿ ವೇದಿಕೆ ಕರೆ ನೀಡಿತ್ತು.

ಈ ಬಾರಿಯ ಬಜೆಟ್ ಮಂಡಿಸುವಾಗಲೇ ಎರಡು ಸಾರ್ವಜನಕ ವಲಯದ ಬ್ಯಾಂಕುಗಳನ್ನು ಮತ್ತು ಒಂದು ಸಾರ್ವಜನಕ ವಲಯದ ಸಾಮಾನ್ಯ ವಿಮಾ ಕಂಪನಿಯನ್ನು ಖಾಸಗೀಕರಿಸುವ ಮತ್ತು ಎಲ್.ಐ.ಸಿ.ಯ ಐಪಿಒ ಪ್ರಕ್ರಿಯೆಯನ್ನು ಆರಂಭಿಸುವ ಗುರಿಯನ್ನು ಸರಕಾರ ಇಟ್ಟುಕೊಂಡಿದೆ ಎಂಬುದು ಸ್ಪಷ್ಟವಾಗಿತ್ತು.

ಆದರೂ **ಈ ಮಸೂದೆ ಸಾಮಾನ್ಯ ವಿಮಾ ಕಂಪನಿಗಳ ಖಾಸಗೀಕರಣಕ್ಕಾಗಿ ಅಲ್ಲ ಎಂದು ಹಣಕಾಸು ಮಂತ್ರಿಗಳ ವಾದ ಎಷ್ಟು ಹುಸಿಯೆಂಬುದು ಅವರು ತಂದಿದ್ದ ಎರಡು ತಿದ್ದುಪಡಿಗಳಿಂದಲೇ ಸ್ಪಷ್ಟವಾಗುತ್ತದೆ.** ಮೊದಲನೆಯದಾಗಿ, 1972ರಲ್ಲಿ ಸಾಮಾನ್ಯ ವಿಮಾ ಉದ್ದಿಮೆಯನ್ನು ರಾಷ್ಟ್ರೀಕರಿಸಲು ತಂದ ಈ ಶಾಸನದ ಸೆಕ್ಷನ್ 10ಬಿ ಸರಕಾರದ ಪಾಲು ಕನಿಷ್ಟ 51% ಇರುತ್ತದೆ ಎಂದು ವಿಧಿಸಿತ್ತು. ಈಗ ಲೋಕಸಭೆ 'ಅಂಗೀಕರಿಸಿರುವ' ಮಸೂದೆ ಅದನ್ನು ಕೈಬಿಟ್ಟಿದೆ. ಸರಕಾರದ ಪಾಲು 51% ಕ್ಕಿಂತ ಕಡಿಮೆಯಾಗಬಹುದು ಎಂದರೆ ಅದರ ಸಾರ್ವಜನಕ ಒಡೆತನವನ್ನು ಬಿಟ್ಟುಕೊಡಲಾಗುತ್ತದೆ ಎಂದೇ ಅರ್ಥ.

ಇದು ಎರಡನೇ ತಿದ್ದುಪಡಿಯಲ್ಲಿ ಇನ್ನಷ್ಟು ಸ್ಪಷ್ಟವಾಗುತ್ತದೆ. ಈ ತಿದ್ದುಪಡಿ ಒಂದು ಹೊಸ ಸೆಕ್ಷನ್ 24 ಬಿ ಯನ್ನು ಸೇರಿಸುತ್ತಿದ್ದು, ಅದರ ಪ್ರಕಾರ ಈ ಶಾಸನ ಸರಕಾರದ ಪಾಲು 51%ಕ್ಕಿಂತ ಕಡಿಮೆಯಿರುವ ಸಾಮಾನ್ಯ ವಿಮಾ ಕಂಪನಿಗಳಿಗೆ ಅನ್ವಯಿಸುವುದಿಲ್ಲ. ಅಂದರೆ ಸರಕಾರದ ಪಾಲು 51%ಕ್ಕಿಂತ ಕಡಿಮೆಯಿರುವ ಕಂಪನಗಳ ಮೇಲೆ ಸರಕಾರದ ಹತೋಟಿಯೇನೂ ಇರುವುದಿಲ್ಲ ಎಂದಾಗುತ್ತದೆ. ಈ ರೀತಿಯಲ್ಲಿ ಈ ಮಸೂದೆ ಸಾರ್ವಜನಿಕ ವಲಯದಲ್ಲಿರುವ ನಾಲ್ಕೂ ಸಾಮಾನ್ಯ ವಿಮಾಕಂಪನಗಳನ್ನು ಮತ್ತು ಜಿಐಸಿ ರಿ–ಇನ್ಶೂರೆನ್ಸ್ ನ್ನು ಖಾಸಗೀಕರಿಸಲು ಹಾದಿಯನ್ನು ಪ್ರಶಸ್ತಗೊಳಿಸುತ್ತದೆ.

ಈ ತಿದ್ದುಪಡಿಗಳಿಂದ ಖಾಸಗಿಯವರು ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಲು ಸಾಧ್ಯವಾಗಿ ಸಾಮಾನ್ಯ ವಿಮಾ ಉದ್ದಿಮೆ ಹೆಚ್ಚು ವಿಸ್ತಾರಗೊಳ್ಳಲು ಅವಕಾಶವಾಗುತ್ತದೆ ಎಂಬುದು ಹುಸಿತರ್ಕವಷ್ಟೇ. ಕೊವಿಡ್ ಕಾಲದಲ್ಲೂ ಸಾಮಾನ್ಯ ವಿಮಾ ಉದ್ದಿಮೆ ಸಾಕಷ್ಟು ವ್ಯವಹಾರ ನಡೆಸಿದ್ದು, ಅದರ ಮುಂಚೂಣಿಯಲ್ಲಿರುವುದು ಸಾರ್ವಜನಕ ವಲಯದ ಕಂಪನಿಗಳೇ ಎನ್ನುತ್ತಾರೆ ಸಾಮಾನ್ಯ ವಿಮಾನೌಕರರ ಸಂಘಟನೆಗಳ ಮುಖಂಡರು. ಅಲ್ಲದೆ ಈಗಲೂ ಸಣ್ಣ ಪಟ್ಟಣಗಳಲ್ಲಿಯೂ ಶಾಖೆಗಳನ್ನು ಹೊಂದಿರುವುದು ಸಾರ್ವಜನಕ ವಲಯದ ಕಂಪನಗಳು ಮಾತ್ರವೇ. ಖಾಸಗಿಯವರ ವ್ಯವಹಾರಗಳು ಮಹಾನಗರಗಲ್ಲೇ ಕೇಂದ್ರೀಕೃತವಾಗಿದೆ.

ಅಲ್ಲದೆ **2020 ಮತ್ತು 2021ರಲ್ಲಿ ತಪ್ಪು ವ್ಯವಹಾರಗಳಿಗಾಗಿ ದಂಡನೆಗೆ ಒಳಗಾಗಿರುವುದೆಲ್ಲ ಖಾಸಗಿ ಸಾಮಾನ್ಯ ವಿಮಾ ಕಂಪನಗಳೇ. ಸಾಮಾನ್ಯ ವಿಮಾ ವ್ಯವಹಾರಗಳ ವಿರುದ್ಧ ದೂರುಗಳಲ್ಲಿ 82% ಖಾಸಗಿ ಕಂಪನಿಗಳ ವಿರುದ್ಧ, 18% ಮಾತ್ರ ಸಾರ್ವಜನಕ ವಲಯದ ಕಂಪನಿಗಳ ವಿರುದ್ಧ ಎಂಬ ಸಂಗತಿಯತ್ತವೂ ಅವರು ಗಮನ ಸೆಳೆದಿದ್ದಾರೆ.**

ಇನ್ನೊಂದು ಗಮನಾರ್ಹ ಅಂಶವೆಂದರೆ, 2ಲಕ್ಷರೂ.ಗಳ ಅಪಘಾತ ವಿಮಾ ರಕ್ಷಣೆ ಒದಗಿಸುವ 'ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನಾ'ದಲ್ಲಾಗಲೀ, 'ಆಯುಷ್ಮಾನ್ ಭಾರತ ಆರೋಗ್ಯ ವಿಮಾ ಯೋಜನಾ'ದಲ್ಲಾಗಲೀ ಖಾಸಗಿ ಸಾಮಾನ್ಯ ವಿಮಾ ಕಂಪನಗಳು ಯಾವ ಆಸಕ್ತಿಯನ್ನೂ ತೋರಿಸಿಲ್ಲ. ಏಕೆಂದರೆ ಇವು, ಕಡಿಮೆ ಪ್ರೀಮಿಯಂನ ಯೋಜನೆಗಳಾಗಿದ್ದು ಒಟ್ಟಾರೆಯಾಗಿ ನಷ್ಟ ಉಂಟುಮಾಡುವ ಯೋಜನೆಗಳು. ಈ ತಿದ್ದುಪಡಿಗಳ ಪರಿಣಾಮವಾಗಿ ಸರಕಾರದ ಹತೋಟಿ ಸೀಮಿತಗೊಂಡಾಗ ಈ ಬಹುಪ್ರಚಾರಿತ ಯೋಜನೆಗಳ ಗತಿಯೇನು ಎಂಬುದು ಸಹಜವಾಗಿ ಏಳುವ ಪ್ರಶ್ನೆ.

ಆದರೂ ವ್ಯಾಪಕ ಖಾಸಗೀಕರಣದ ಗೀಳನ್ನು ಹಚ್ಚಿಕೊಂಡಿರುವ ಸರಕಾರದ ಇಂತಹ ಧೋರಣೆಯನ್ನೇ ಮುಂದುವರೆಸುತ್ತಿರುವುದರ ವಿರುದ್ಧ ಸಾರ್ವತ್ರಿಕ ಪ್ರತಿಭಟನೆಯ ಸಂಕೇತವಾಗಿ ಸಾಮಾನ್ಯ ವಿಮಾ ನೌಕರರ ಈ ಮುಷ್ಕರಕ್ಕೆ ಜೀವ ವಿಮಾ ನೌಕರರು ಮಾತ್ರವಲ್ಲ, ಸಮಸ್ತ ಕಾರ್ಮಿಕ ವರ್ಗ ಬೆಂಬಲ, ಸೌಹಾರ್ದ ನೀಡಿದೆ. ಈ ಹಿನ್ನೆಲೆಯಲ್ಲಿ ಖಾಸಗೀಕರಣದ ಮೂಲಕ ದೇಶದ ಸಂಪನ್ಮೂಲಗಳ ಲೂಟಿಯ ವಿರುದ್ಧ ಹೋರಾಟವನ್ನು ಇನ್ನಷ್ಟು ಬಲಪಡಿಸಬೇಕು, ದೇಶವನ್ನು ಮೋದಿ–ನೇತೃತ್ವದ ಸರಕಾರದ ವಿನಾಶಕಾರಿ ಧೋರಣೆಗಳಿಂದ ರಕ್ಷಿಸಬೇಕು ಎಂದು ಸಿಐಟಿಯು ಸಮಸ್ತ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

"ಎರಡು ವರ್ಷಗಳಾದವು–ಬಿಜೆಪಿಯ 'ಹೊಸ ಕಾಶ್ಮೀರ' ಘೋಷಣೆ ಜೋಕಾಗಿ ಬಿಟ್ಟಿದೆ"

ಸಂವಿಧಾನದ ಕಲಮು 370 ಮತ್ತು 35ಎ ನ್ನು ರದ್ದು ಮಾಡಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಕಸಿದುಕೊಂಡು ಅದನ್ನು ಕೇಂದ್ರಾಡಳಿತ ಪ್ರದೇಶದ ಮಟ್ಟಕ್ಕಿಳಿಸಿ ಆಗಸ್ಟ್ 5ರಂದು ಎರಡು ವರ್ಷಗಳಾದವು. **ಈ ಅವಧಿಯಲ್ಲಿ ಬಿಜೆಪಿಯ 'ನಯಾ ಕಾಶ್ಮೀರ' ಘೋಷಣೆ ಒಂದು ಅಪಹಾಸ್ಯದ ಮಟ್ಟಿಗೆ ಇಳಿದಿದೆ. ನಿರಂಕುಶ ರಾಜಪ್ರಭುತ್ವ ಮತ್ತು ಪಾಳೆಯಗಾರಿಕೆಯ ವಿರುದ್ದ ಹೋರಾಡಿ, ಇಲ್ಲಿ ನೆಲೆಸಿರುವ ಎಲ್ಲ ಸಮುದಾಯಗಳಿಗೆ ಘನತೆಯನ್ನು ಕೊಟ್ಟು ಅಸ್ತಿತ್ವಕ್ಕೆ ಬಂದ ಕಾಶ್ಮೀರವನ್ನು ಧ್ವಂಸಮಾಡಿ ಅಧಿಕಾರದಲ್ಲಿರುವವರು ಸಾಧಿಸಿದ್ದೇನು ಎಂದು ಜಮ್ಮು ಮತ್ತು ಕಾಶ್ಮೀರದ ಜನತೆ ಕೇಳುತ್ತಿದ್ದಾರೆ** ಎಂದು 'ಗುಪ್ಕರ್ ಘೋಷಣೆಯ ಜನತಾ ಮೈತ್ರಿ'(ಪಿ.ಎ.ಜಿ.ಡಿ.) ಹೇಳಿದೆ.

ನ್ಯಾಶನಲ್ ಕಾನ್ಫರೆನ್ಸ್, ಪಿಡಿಪಿ, ಸಿಪಿಐ(ಎಂ) ಮತ್ತಿತರ ಪಕ್ಷಗಳು ಸೇರಿರುವ ಪಿ.ಎ.ಜಿ.ಡಿ. ಪರವಾಗಿ, ಅದರ ವಕ್ತಾರ ಮತ್ತು ಸಿಪಿಐ(ಎಂ)ನ ಹಿರಿಯ ಮುಖಂಡ ಮಹಮ್ಮದ್ ಯುಸುಫ್ ತರಿಗಾಮಿ ನೀಡಿರುವ ಈ ಹೇಳಿಕೆ ಕೇಂದ್ರ ಸರಕಾರದ ಈ ಕ್ರಮ ಸಂವಿಧಾನದ ಎಲ್ಲ ಮೇರೆಗಳನ್ನೂ ದಾಟಿ ಭಾರತ ಒಕ್ಕೂಟದೊಂದಿಗೆ ಜಮ್ಮು ಮತ್ತು ಕಾಶ್ಮೀರ ಜನತೆಯ ಬಂಧವನ್ನೇ ನಾಶಪಡಿಸಿದೆ ಎಂದು ಖೇದ ವ್ಯಕ್ತಪಡಿಸಿದೆ.


ಪ್ರಜಾಪ್ರಭುತ್ವದ ಕುತ್ತಿಗೆ ಹಿಸುಕುವ ಒಂದು ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಜಮ್ಮು ಮತ್ತು ಕಾಶ್ಮೀರದ ಜನತೆಯನ್ನು ಸಣ್ಣ–ಸಣ್ಣ ಘಟಕಗಳಲ್ಲಿ ಹರಿದು ಹಂಚಿ, ಅವರ ಜೀವನೋಪಾಯಗಳನ್ನು, ಅವರದೇ ಸಂಪನ್ಮೂಲಗಳ ಮೇಲಿನ ಅವರ ಹಕ್ಕನ್ನು ಹರಿದು ಹಾಕಲಾಗಿದೆ. ನೀತಿಬಾಹಿರವಾಗಿ ನಾಗರಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ದಮನ ಅವ್ಯಾಹತವಾಗಿ ಮುಂದುವರೆದಿದೆ.

ಇತ್ತೀಚೆಗೆ ಪ್ರಧಾನ ಮಂತ್ರಿಗಳು ಜಮ್ಮು ಮತ್ತು ಕಾಶ್ಮೀರದ ರಾಜಕೀಯ ಮುಖಂಡರ ಸಭೆ ಕರೆದರು, ಭಾರತ ಸರಕಾರ ತನ್ನ ಆಗಸ್ಟ್ 5, 2019ರ ಕ್ರಮ ನಿರರ್ಥಕ ಎಂದು ಮನಗಂಡಿದೆ, ಚೂರುಚೂರಾಗಿರುವ ಜನಗಳ ವಿಶ್ವಾಸವನ್ನು ಮತ್ತೆ ಜೋಡಿಸಲಾಗುತ್ತಿದೆ ಎಂಬ ನಿರೀಕ್ಷೆಯಿಂದ ಮುಖಂಡರು ಇದರಲ್ಲಿ ಭಾಗವಹಿಸಿದರು. ಆದರೆ ನಂತರ ಅಂತಹ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಜಮ್ಮು ಮತ್ತು ಕಾಶ್ಮೀರ ಪ್ರಧಾನಿಗಳು ಹೇಳಿದಂತೆ ದಿಲ್ಲಿಗೆ ಹತ್ತಿರವಾಗಲೇ ಇಲ್ಲ, ಬದಲಿಗೆ ಇನ್ನೂ ದೂರವಾಗುತ್ತಿದೆ ಎಂದು ಪಿ.ಎ.ಜಿ.ಡಿ. ಹೇಳಿಕೆ ನೋವು ವ್ಯಕ್ತಪಡಿಸಿದೆ.

370ನೇ ಕಲಮನ್ನು ರದ್ದು ಮಾಡಿ ಯು.ಎ.ಪಿ.ಎ. ಅಡಿಯಲ್ಲಿ ಬಂಧಿಸಿದ 2364 ಮಂದಿಯಲ್ಲಿ 1100 ಮಂದಿ ಈ ಎರಡನೇ ವಾರ್ಷಿಕದ ವೇಳೆಯಲ್ಲೂ ಜೈಲಿನಲ್ಲೇ ಇದ್ದಾರೆ, ಪಿ.ಎಸ್.ಎ. ಅಡಿಯಲ್ಲಿ ಬಂಧಿಸಲ್ಪಟ್ಟ 854 ಮಂದಿಯಲ್ಲಿ 284 ಮಂದಿ ಇನ್ನೂ ಬಂಧನದಲ್ಲೇ ಇದ್ದಾರೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

ಆಧುನಿಕ ಭಾರತ ನಿರ್ಮಾಣದ ಬುನಾದಿ ತತ್ವಗಳನ್ನು ದುರ್ಬಲಗೊಳಿಸಿದ

ಆರ್ಥಿಕ ಉದಾರೀಕರಣದ ಮೂರು ದಶಕಗಳು



ಭಾರತದಲ್ಲಿ ಉದಾರೀಕರಣ ನೀತಿಗಳ ಶಿಲ್ಪಿ ಎಂದೆನಿಸಿರುವ ಮನಮೋಹನ ಸಿಂಗ್ ಅವರೇ "ಪ್ರತಿಯೊಬ್ಬ ಭಾರತೀಯನಿಗೂ ಒಂದು ಘನತೆಯ ಮತ್ತು ಆರೋಗ್ಯಕರ ಜೀವನ ಕಲ್ಪಿಸುವ ಬಗ್ಗೆ ಆದ್ಯತೆ ನೀಡಬೇಕು" ಎಂದು ವಿಷಾದದಿಂದ ಹೇಳಿದ್ದಾರೆ. ಸ್ವತಃ ಅವರೇ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾಗ ಅದನ್ನು ಏಕೆ ಕಾರ್ಯಗತಗೊಳಿಸಲಿಲ್ಲವೋ! ನವ ಉದಾರವಾದೀ ಸುಧಾರಣೆಗಳ ಆರಂಭದಿಂದಲೂ, ಕೇವಲ ಅಸಮಾನತೆಯಷ್ಟೇ ಅಲ್ಲ, ಸೇವಿಸುವ ಆಹಾರದ ಕ್ಯಾಲೊರಿ ಲಭ್ಯತೆಯ ಪ್ರಮಾಣದಂತಹ ಬಹಳ ಮೂಲಭೂತ ಅಂಶದ ಪ್ರಕಾರವೂ ಬಡತನದ ಪ್ರಮಾಣ ಹೆಚ್ಚಾಗಿದೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ನವ ಉದಾರವಾದವು ಜಿಡಿಪಿ ಬೆಳವಣಿಗೆಯ ದರವನ್ನು ಹೆಚ್ಚಿಸಿರಬಹುದು, ಆದರೆ, ಅದು ದುಡಿಯುವ ಜನರ ಪರಿಸ್ಥಿತಿಗಳನ್ನು ಹದಗೆಡಿಸಿದೆ ಮತ್ತು ಆಧುನಿಕ ಭಾರತ ರಾಷ್ಟ್ರ ನಿರ್ಮಾಣದ ಆದರ್ಶಪ್ರಾಯ ತತ್ವಗಳನ್ನು ದುರ್ಬಲಗೊಳಿಸಿದೆ ಎಂಬ ಅಂಶವನ್ನು ಉದಾರೀಕರಣದ ಸಮರ್ಥಕರು ಕಡೆಗಣಿಸುತ್ತಾರೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಭಾರತದಲ್ಲಿ 1991ರಲ್ಲಿ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಅಳವಡಿಸಿಕೊಂಡು ಈಗ ಮೂವತ್ತು ವರ್ಷಗಳು ಕಳೆದಿವೆ. ಕೆಲವು ನೀತಿಗಳನ್ನು 1985ಕ್ಕೂ ಮೊದಲೇ ಅಳವಡಿಸಿಕೊಳ್ಳಲಾಗಿತ್ತು ಎಂದೂ ಹೇಳುತ್ತಾರೆ. ಈ ನೀತಿಗಳು ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡಿದ ಪರಿಣಾಮಗಳ ಬಗ್ಗೆ ಪತ್ರಿಕೆಗಳಲ್ಲಿ ಲೇಖನಗಳು ವ್ಯಾಪಕವಾಗಿ ಪ್ರಕಟವಾಗಿವೆ. ಮನಮೋಹನ್ ಸಿಂಗ್ ಮುಂತಾದ ಉದಾರೀಕರಣಕಾರರು ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿ ಈ ನೀತಿಗಳನ್ನು ಶ್ಲಾಘಿಸಿದ್ದಾರೆ ಮತ್ತು ಉದಾರೀಕರಣದ ಪ್ರಯೋಜನಗಳ ಹಂಚಿಕೆ ಅಸಮಾನವಾಗಿವೆ ಎಂದು ಗೋಳಾಡಿದ್ದಾರೆ. ಸ್ವತಃ ಈ ನೀತಿಗಳ ಶಿಲ್ಪಿ ಎಂದೇ ಕರೆಯಲಾದ ಮನಮೋಹನ ಸಿಂಗ್ ಅವರೇ ವಿಷಾದಿಸಿದ್ದಾರೆ. ಇತ್ತೀಚೆಗೆ ಅವರು "ಪ್ರತಿಯೊಬ್ಬ ಭಾರತೀಯನಿಗೂ ಒಂದು ಘನತೆಯ ಮತ್ತು ಆರೋಗ್ಯಕರ ಜೀವನ ಕಲ್ಪಿಸುವ ಬಗ್ಗೆ ಆದ್ಯತೆ ನೀಡಬೇಕು" ಎಂದು ಹೇಳಿದ್ದಾರೆ. ಸ್ವತಃ ಅವರೇ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾಗ ಅದನ್ನು ಏಕೆ ಕಾರ್ಯಗತಗೊಳಿಸಲಿಲ್ಲವೋ ಎಂಬುದು ಆಶ್ಚರ್ಯವೇ ಸರಿ.

ಆದಾಯ ಮತ್ತು ಸಂಪತ್ತಿನ ಅಸಮಾನತೆಯನ್ನು ದೇಶದಲ್ಲಿ ಹೆಚ್ಚಿಸಿದರೂ ಸಹ, ಉದಾರೀಕರಣವು ಭಾರತದ ಜಿಡಿಪಿಯ ಬೆಳವಣಿಯನ್ನು ಬಹಳವಾಗಿ ಹೆಚ್ಚಿಸಿತು ಮತ್ತು ಆ ಮೂಲಕ ಬಹುತೇಕ ಭಾರತೀಯರ ಜೀವನವನ್ನು ಸುಧಾರಿಸಿತು ಮತ್ತು ಅವರಲ್ಲಿ ಅಪಾರ ಮಂದಿಯನ್ನು ಸಂಪೂರ್ಣ ಬಡತನದಿಂದ ಮೇಲೆತ್ತಿದೆ ಎಂಬ ಅಭಿಪ್ರಾಯವನ್ನು ಉದಾರೀಕರಣದ ಸಮರ್ಥಕರು ಮಾತ್ರವಲ್ಲ, ಎಡಪಂಥದ ಕೆಲವರನ್ನೂ ಒಳಗೊಂಡಂತೆ ಅದರ ಟೀಕಾಕಾರರೂ ಸಹ ಸಾಮಾನ್ಯವಾಗಿ ಒಪ್ಪುತ್ತಾರೆ. ಅವರಲ್ಲಿ ಕಾಣುವ ಒಂದು ವ್ಯತ್ಯಾಸವೆಂದರೆ, ಬೆಳವಣಿಗೆಗೆ 'ಎದುರಾಗಿ ಅಸಮಾನತೆಗೆ ಎಷ್ಟು ಪ್ರಾಮುಖ್ಯತೆ ಕೊಡುತ್ತಾರೆ ಎಂಬುದು ಮಾತ್ರ ಎಂದು ತೋರುತ್ತದೆ.

ಅರ್ಥವ್ಯವಸ್ಥೆಯಲ್ಲಿ ಬೆಳವಣಿಗೆ ದರವನ್ನು ಹೆಚ್ಚಿಸಿದರೆ ಅಸಮಾನತೆಗಳು ಕಾಣೆಯಾಗುತ್ತವೆ ಎಂದು ಉದಾರವಾದಿಗಳು ವಾದಿಸುತ್ತಾರೆ. ಬೆಳವಣಿಗೆಯನ್ನು ಹೆಚ್ಚಿಸುವ ಸಲುವಾಗಿ ಎಷ್ಟು ಹೆಚ್ಚು ಹೂಡಿಕೆ ಮಾಡಬೇಕಾಗುತ್ತದೆ ಎಂಬುದನ್ನು ನಿರ್ಧರಿಸುವ ಬಂಡವಾಳಶಾಹಿಗಳ "ಮೃಗೀಯ ಹುಮ್ಮಸ್ಸನ್ನು" ಪ್ರೋತ್ಸಾಹಿಸಬೇಕಾಗುತ್ತದೆ ಎಂಬುದಾಗಿ ಉದಾರವಾದದ ಸಮರ್ಥಕರು ಹೇಳುತ್ತಾರೆ. ಬಂಡವಾಳಶಾಹಿಗಳ "ಮೃಗೀಯ ಹುಮ್ಮಸ್ಸನ್ನು" ಪ್ರೋತ್ಸಾಹಿಸುವ ಕೆಲಸವನ್ನು ನಿಖರವಾಗಿ ಮಾಡುತ್ತಿರುವುದಾಗಿ ಮೋದಿ ಸರ್ಕಾರ ಹೇಳಿಕೊಳ್ಳುತ್ತದೆ. ಈ ಅಂಶಗಳ ಬಗ್ಗೆ ವಿಭಿನ್ನ ನಿಲುವು ಹೊಂದಿಲ್ಲದಿದ್ದರೂ, ಅವುಗಳಲ್ಲಿ ಕೆಲವು ಕ್ರಮಗಳನ್ನು ವಿರೋಧಿಸುವುದಾಗಿ ಕಾಂಗ್ರೆಸ್ ಹೇಳುತ್ತಿರುವುದು ವಿಚಿತ್ರವಾಗಿದೆ. ಒಟ್ಟಾರೆಯಾಗಿ, ಪ್ರಮುಖ ರಾಜಕೀಯ ಪಕ್ಷಗಳ ನಡುವೆ ನವ ಉದಾರ ನೀತಿಗಳ ಬಗ್ಗೆ ವ್ಯಾಪಕ "ಒಮ್ಮತ"ವಿದೆ ಎಂಬ ಬ್ರೆಟನ್‌ವುಡ್ಸ್ ಸಂಸ್ಥೆಗಳ ಅಭಿಪ್ರಾಯವು ಕಳೆದ ಮೂರು ದಶಕಗಳಲ್ಲಿ ಈ ನೀತಿಗಳು ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡಿದ ಪರಿಣಾಮಗಳ ಮೌಲ್ಯಮಾಪನಕ್ಕೂ ವಿಸ್ತರಿಸುತ್ತದೆ ಎಂದು ತೋರುತ್ತದೆ.

ಈ ಗ್ರಹಿಕೆಯು ಕನಿಷ್ಠ ಎರಡು ಕಾರಣಗಳಿಂದಾಗಿ ತಪ್ಪಾಗಿದೆ. ಮೊದಲನೆಯದಾಗಿ, ಈ ಗ್ರಹಿಕೆಯು ಅರ್ಥವ್ಯವಸ್ಥೆಯಲ್ಲಿನ ಬಂಡವಾಳಶಾಹಿ ವಲಯವನ್ನು ಅರ್ಥವ್ಯವಸ್ಥೆಯ ಉಳಿದ ಭಾಗಗಳಿಂದ ಬೇರ್ಪಟ್ಟ ಒಂದು ಸ್ವಸಂಪೂರ್ಣ ವಲಯವೆಂದು ಪರಿಗಣಿಸುತ್ತದೆ. ತನ್ನ ಸುತ್ತಮುತ್ತಲಿನ ಪರಿಸರದ ಮೇಲೆ ಬಂಡವಾಳಶಾಹಿ ವಲಯವು ಬೀರುವ ಒಂದು ಮುಖ್ಯ ಪರಿಣಾಮವೆಂದರೆ, ಅದರಿಂದ ಹೆಚ್ಚು ಹೆಚ್ಚು ಶ್ರಮಶಕ್ತಿಯನ್ನು ಹೀರಿಕೊಳ್ಳುತ್ತದೆ. ಆದರೆ, ಈ ಬಗ್ಗೆ ಅದು ಸಾಕಷ್ಟು ಸಾಧನೆ ಮಾಡಿಲ್ಲ ಎಂಬ ಗೋಳಾಟವೂ ಇದೆ. ವಾಸ್ತವದಲ್ಲಿ, ಬಂಡವಾಳಶಾಹಿ ವಲಯದ ಒಳಗೂ ಸಹ ಬಂಡವಾಳದ ಸಂಚಯವು ಅದರ ಹೊರಗಿನ ಪ್ರಪಂಚದ ಮೇಲೆ ಅನೇಕ ರೀತಿಯಲ್ಲಿ ಆಘಾತಮಾಡುತ್ತದೆ. ತನ್ನ ಹೊರಗಿನ ಪ್ರಪಂಚದಿಂದ ಕಾರ್ಮಿಕರನ್ನು ಸೆಳೆಯುವ ಕ್ರಮವು ಬೃಹತ್ ಸಂಖ್ಯೆಯ ಶ್ರಮಜೀವಿಗಳು ಲಭ್ಯವಿರುವ ಅರ್ಥವ್ಯವಸ್ಥೆಯಲ್ಲಿ ಒಂದು ಒಳ್ಳೆಯ ಅಂಶವೇ ಆಗಿದ್ದರೂ ಸಹ, ಭೂಮಿ, ಮತ್ತು ಹಣಕಾಸಿನ ಸಂಪನ್ಮೂಲಗಳನ್ನು ನುಂಗುತ್ತದೆ. (ಉದಾಹರಣೆಗೆ, ತಮ್ಮ 'ಮೃಗೀಯ ಹುಮ್ಮಸ್ಸ'ನ್ನು ಹೆಚ್ಚಿಸಿಕೊಳ್ಳಲು ಬಂಡವಾಳಗಾರರಿಗೆ ಒದಗಿಸುವ ಸಬ್ಸಿಡಿಗಳು ಅದರ ಕಾರ್ಯಸಾಧ್ಯತೆಗೆ ಸಾಂಪ್ರದಾಯಿಕವಾಗಿ ಕೊಡುಗೆ ನೀಡಿದ ರೈತ ಕೃಷಿಗೆ ಒದಗಿಸುತ್ತಿದ್ದ ಸಬ್ಸಿಡಿಗಳ ವೆಚ್ಚದಲ್ಲಿ ಬರುತ್ತವೆ). ಅಷ್ಟೇ ಅಲ್ಲದೆ, ಬಂಡವಾಳಶಾಹಿ ವಲಯವು ತನ್ನ ಬೆಳವಣಿಗೆಗಾಗಿ ಸಾಂಪ್ರದಾಯಿಕ ವಲಯಗಳ ಬೇಡಿಕೆಯನ್ನೂ ಕಬಳಿಸುತ್ತದೆ.

ಹಾಗಾಗಿ, ಬಂಡವಾಳದ ಸಂಚಯವು, ತನ್ನ ಸುತ್ತಮುತ್ತಲಿನ ಕಿರು ಉತ್ಪಾದನಾ ಚಟುವಟಿಕೆಗಳನ್ನು ದುರ್ಬಲಗೊಳಿಸುತ್ತದೆ (ಈ ಪ್ರಕ್ರಿಯೆಯನ್ನು"ಬಂಡವಾಳದ 'ಆದಿಮ ಸಂಚಯ' ಎಂದು ಮಾರ್ಕ್ಸ್ ಕರೆದಿದ್ದರು). ಮಾತ್ರವಲ್ಲ, ಕೆಲಸವಿಲ್ಲದ ಜನರಿಗೆ ಉದ್ಯೋಗಗಳೂ ಒದಗುವುದಿಲ್ಲ. ಆದರೆ, ಸಂಚಯಗೊಂಡ ಬಂಡವಾಳಕ್ಕೆ ಅನುಗುಣವಾಗಿ ಉದ್ಯೋಗಗಳು ಲಭ್ಯವಾಗುತ್ತವೆ, ಮತ್ತು ಆ ಮೂಲಕ ನಿರುದ್ಯೋಗವನ್ನು ಮತ್ತು ಬಡತನವನ್ನು ಕಡಿಮೆ ಮಾಡಬಹುದು ಎಂಬುದಾಗಿ ಸಾಂಪ್ರದಾಯಿಕ ಬೂರ್ಜ್ವಾ ಅರ್ಥಶಾಸ್ತ್ರವು ಹೇಳುತ್ತದೆ (ಒಂದು ವೇಳೆ ಹಾಗಾಗದಿದ್ದರೆ, ಇನ್ನೂ ತ್ವರಿತವಾದ ಬಂಡವಾಳ ಸಂಚಯವೇ ಅದಕ್ಕೆ ರಾಮಬಾಣ!). ಬೂರ್ಜ್ವಾ ಅರ್ಥಶಾಸ್ತ್ರವು ಹೇಳುವುದಕ್ಕೆ ವ್ಯತಿರಿಕ್ತವಾಗಿ, ಕೆಲಸವಿಲ್ಲದವರಿಗೆ ಉದ್ಯೋಗಗಳು ಲಭ್ಯವಾಗಲಿಲ್ಲ ಮತ್ತು ಕಿರು ಉತ್ಪಾದನಾ ಚಟುವಟಿಕೆಗಳು ದುರ್ಬಲಗೊಳ್ಳುವುದೂ ತಪ್ಪಲಿಲ್ಲ. ಅಂದರೆ, ನಿರುದ್ಯೋಗ ಮತ್ತು ಬಡತನದ ಹೆಚ್ಚಳ. ಹಾಗಾಗಿ, ಬಂಡವಾಳ ಸಂಚಯದ ದರ ಹೆಚ್ಚಿದರೆ, ನಿರುದ್ಯೋಗ ಮತ್ತು ಬಡತನಗಳು ನಿವಾರಣೆಯಾಗುವುದರ ಬದಲು ಇನ್ನಷ್ಟು ಹೆಚ್ಚುತ್ತವೆ.

ವಾಸ್ತವವಾಗಿ ಆಗಿರುವುದು ಇದೇ ಎಂಬುದನ್ನು ಸ್ವತಃ ಸರ್ಕಾರದ ಅಂಕಿಅಂಶಗಳೇ ಹೇಳುತ್ತವೆ. ಹಿಂದಿನ ನಿಯಂತ್ರಣ ನೀತಿವ್ಯವಸ್ಥೆಯ ಅವಧಿಯಲ್ಲಿ ನೀಡಲಾದ ಎಲ್ಲಾ ರಕ್ಷಣೆಯನ್ನೂ ನವ ಉದಾರ ಆಡಳಿತದಲ್ಲಿ ಕಳಚಿ ಹಾಕಿದ ಪರಿಣಾಮವಾಗಿ ರೈತ ಕೃಷಿ ದುರ್ಬಲಗೊಂಡಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ರೈತ ಕೃಷಿಯ ಲಾಭದಾಯಕತೆಯ ಕುಸಿತದಲ್ಲಿ ಈ ಅಂಶವು ಕಾಣ ಬರುತ್ತದೆ. ಜನಗಣತಿಯ ಅಂಕಿ ಅಂಶಗಳ ಪ್ರಕಾರ, 1991 ಮತ್ತು 2011ರ ಜನಗಣತಿಗಳ ನಡುವಿನ ಅವಧಿಯಲ್ಲಿ, "ಕೃಷಿಕರ" ಸಂಖ್ಯೆಯು ಒಂದೂವರೆ ಕೋಟಿಯಷ್ಟು ಇಳಿದಿರುವ ವಿದ್ಯಮಾನದಲ್ಲೂ ಈ ಅಂಶವು ಸ್ಪಷ್ಟವಾಗಿದೆ. ಮತ್ತು, ಕಳೆದ ಮೂರು ದಶಕಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಮಂದಿ ರೈತರ ಆತ್ಮಹತ್ಯೆಯ ನೋವಿನ ಅಂಶದಿಂದಲೂ ಸ್ಪಷ್ಟವಾಗಿದೆ.

ನವ ಉದಾರವಾದೀ ಸುಧಾರಣೆಗಳ ಆರಂಭದಿಂದಲೂ, ಕೇವಲ ಅಸಮಾನತೆಯಷ್ಟೇ ಅಲ್ಲ, ಸೇವಿಸುವ ಆಹಾರದ ಕ್ಯಾಲೊರಿ ಲಭ್ಯತೆಯ ಪ್ರಮಾಣದಂತಹ ಬಹಳ ಮೂಲಭೂತ ಅಂಶದ ಪ್ರಕಾರವೂ ಬಡತನದ ಪ್ರಮಾಣ ಹೆಚ್ಚಾಗಿದೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಗ್ರಾಮೀಣ ಭಾರತದಲ್ಲಿ ತಲಾ ದೈನಿಕ 2200 ಕ್ಯಾಲೊರಿಗಳಿಗಿಂತ ಕಡಿಮೆ ಕ್ಯಾಲೊರಿ ಆಹಾರ ಸೇವಿಸುವ ವ್ಯಕ್ತಿಗಳ ಸಂಖ್ಯೆಯು (ಗ್ರಾಮೀಣ ಬಡತನದ ಅಧಿಕೃತ ಮಾನದಂಡ), 1993–94 ರಲ್ಲಿ ಶೇ.58 ರಿಂದ 2011–12 ರಲ್ಲಿ ಶೇ.68ಕ್ಕೆ ಏರಿದೆ (ಈ ಎರಡೂ ವರ್ಷಗಳೂ ಎನ್‌ಎಸ್‌ಎಸ್ ನ ದೊಡ್ಡ ಪ್ರಮಾಣದ ಮಾದರಿ ಸಮೀಕ್ಷೆಯ ವರ್ಷಗಳು). ನಗರ ಭಾರತದಲ್ಲಿ ತಲಾ ದೈನಿಕ 2100 ಕ್ಯಾಲೊರಿಗಳಿಗಿಂತ ಕಡಿಮೆ ಕ್ಯಾಲೊರಿ ಆಹಾರ ಸೇವಿಸುವ ವ್ಯಕ್ತಿಗಳ ಸಂಖ್ಯೆಯು (ನಗರ ಬಡತನದ ಅಧಿಕೃತ ಮಾನದಂಡ), 1993–94 ರಲ್ಲಿ ಶೇ.57 ರಿಂದ 2011–12 ರಲ್ಲಿ ಶೇ.65ಕ್ಕೆ ಏರಿದೆ .

2011–12ರ ನಂತರ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. 2017–18ರ ಎನ್‌ಎಸ್‌ಎಸ್ ದೊಡ್ಡ ಪ್ರಮಾಣದ ಮಾದರಿ ಸಮೀಕ್ಷೆಯಲ್ಲಿ ಕಂಡುಬಂದ ಅಂಶಗಳು ಎಷ್ಟು ಮಟ್ಟಿಗೆ ಚಕಿತಗೊಳಿಸುವಂತಿದ್ದವು ಎಂದರೆ, ಮೋದಿ ಸರ್ಕಾರವು ಅವುಗಳನ್ನು ಬಚ್ಚಿಟ್ಟಿತು ಮತ್ತು ಇಂತಹ ಸಮೀಕ್ಷೆಗಳನ್ನು ನಿಲ್ಲಿಸಲು ನಿರ್ಧರಿಸಿತು. ಈ ಸಮೀಕ್ಷೆಯ ವರದಿಯನ್ನು ಬಚ್ಚಿಡುವ ಮೊದಲೇ ಕೆಲವು ಅಂಕಿ ಅಂಶಗಳು ಸೋರಿಕೆಯಾಗಿದ್ದವು. ಸೋರಿಕೆಯಾದ ಅಂಕಿ ಅಂಶಗಳ ಪ್ರಕಾರ, 2011–12 ಮತ್ತು 2017–18ರ ನಡುವೆ, ಗ್ರಾಮೀಣ ಭಾರತದಲ್ಲಿ ತಲಾ ಬಳಕೆ ವೆಚ್ಚವು ನೈಜವಾಗಿ ಶೇಕಡಾ ಒಂಬತ್ತರಷ್ಟು ಕುಸಿಯಿತು. ಪ್ರಮುಖ ಬೆಳೆ ವೈಫಲ್ಯದಂತಹ ಪರಿಸ್ಥಿತಿಯನ್ನು ಹೊರತುಪಡಿಸಿದರೆ, ಈ ರೀತಿಯ ಒಂದು ಕುಸಿತವು ಸ್ವತಂತ್ರ ಭಾರತದ ಇತಿಹಾಸದಲ್ಲೇ ಯಾವತ್ತೂ ಸಂಭವಿಸಿರಲಿಲ್ಲ.

ವಾಸ್ತವವಾಗಿ, ನವ ಉದಾರವಾದದಡಿಯಲ್ಲಿ ರೈತ ಕೃಷಿಯ ಮೇಲಿನ ಹಲ್ಲೆಯು ನಿರಂತರವಾಗಿ ತೀವ್ರಗೊಳ್ಳುತ್ತಿದೆ. ಈ ಹಲ್ಲೆಯ ಇತ್ತೀಚಿನ ಅಭಿವ್ಯಕ್ತಿಯು ಎಷ್ಟು ಹಾನಿಕಾರಕವಾಗಿದೆ ಎಂದರೆ, ದೊಡ್ಡ ದೊಡ್ಡ ಬಂಡವಾಳಗಾರರ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶ ಹೊಂದಿರುವ ಮೂರು ಕೃಷಿ ಕಾನೂನುಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ದೆಹಲಿಯ ಸುತ್ತಮುತ್ತಲಿನ ರಾಜ್ಯಗಳಿಂದ ರೈತರು ದೆಹಲಿಯ ಗಡಿಯಲ್ಲಿ ಸತತವಾಗಿ ಎಂಟು ತಿಂಗಳುಗಳಿಂದಲೂ ಪ್ರತಿಭಟಿಸುತ್ತಿದ್ದಾರೆ.

ನವ ಉದಾರವಾದಿ ಗ್ರಹಿಕೆಯ ಎರಡನೇ ದೋಷಕ್ಕೆ ಈಗ ಹೋಗುವಾ. ಬಂಡವಾಳಗಾರರ ಹೂಡಿಕೆಯು ಕೇವಲ "ಮೃಗೀಯ ಹುಮ್ಮಸ್ಸು" ಎಂದು ಕರೆಯಲ್ಪಡುವ ಕೆಲವು ಅಸ್ಪಷ್ಟ ಅಂಶಗಳ ಮೇಲೆ ಅವಲಂಬಿತವಾಗಿಲ್ಲ. ಅದು ಮಾರುಕಟ್ಟೆಗಳಲ್ಲಿನ ನಿರೀಕ್ಷಿತ ಬೆಳವಣಿಗೆಯ ಸ್ಪಷ್ಟ ಲೆಕ್ಕಾಚಾರಗಳ ಮೇಲೆ ನಿಂತಿದೆ. ಈ ಲೆಕ್ಕಾಚಾರಗಳು ಬಂಡವಾಳಗಾರರ ಆಶಾವಾದ ಅಥವಾ ನಿರಾಶಾವಾದವನ್ನೂ ಅವಲಂಬಿಸಿರಬಹುದು (ಇದನ್ನೇ "ಮೃಗೀಯ ಹುಮ್ಮಸ್ಸು" ಎಂದು ಕರೆಯಲಾಗಿದೆ) ಎಂಬುದೂ ನಿಜವೇ. ಆದರೆ, ಮಾರುಕಟ್ಟೆಯಲ್ಲಿ ಬೆಳವಣಿಗೆ ಇಲ್ಲದಿದ್ದರೆ ಅಥವಾ ಬೆಳವಣಿಗೆಯು ನಿಧಾನಗೊಂಡರೆ, ಎಷ್ಟೇ ಸಬ್ಸಿಡಿಗಳನ್ನು ನೀಡಿದರೂ ಸಹ ಹೂಡಿಕೆಯು ಕುಂಠಿತವಾಗುತ್ತದೆ.

ನವ ಉದಾರವಾದವು, ಭಾರತವೂ ಸೇರಿದಂತೆ ಎಲ್ಲೆಡೆಯೂ ಆದಾಯಗಳ ಅಸಮತೆಗಳನ್ನು ಹೆಚ್ಚಿಸಿದೆ. ಪಿಕೆಟ್ಟಿ ಮತ್ತು ಚಾನ್ಸಲ್ ಅವರ ಪ್ರಕಾರ, ಭಾರತದ ಒಟ್ಟು ರಾಷ್ಟ್ರೀಯ ಆದಾಯದಲ್ಲಿ ಜನಸಂಖ್ಯೆಯ ಮೇಲ್ತುದಿಯ ಶೇಕಡ ಒಂದರಷ್ಟು ಜನರ ಪಾಲು 1982 ರಲ್ಲಿ ಕೇವಲ ಶೇ.6 ರಷ್ಟಿತ್ತು. 2013–14 ರ ವೇಳೆಗೆ ಶೇ. 22 ಕ್ಕೆ ಏರಿತು (ಸುಮಾರು ಒಂದು ಶತಮಾನದಲ್ಲೇ ಗರಿಷ್ಠ ಹೆಚ್ಚಳ). ದುಡಿಯುವ ಜನರು ಶ್ರೀಮಂತರಂತಲ್ಲದೆ, ತಮ್ಮ ಆದಾಯದ ಹೆಚ್ಚು ಭಾಗವನ್ನು ಬಳಸಿಕೊಳ್ಳುವುದರಿಂದ, ವಿಸ್ತಾರಗೊಳ್ಳುವ ಆದಾಯಗಳ ಅಸಮತೆಯು ವರಮಾನಗಳು

ಪುಟ 14 ನೋಡಿ



ಬಂಡವಾಳಶಾಹಿಗಳ "ಮೃಗೀಯ ಹುಮ್ಮಸ್ಸನ್ನು" ಪ್ರೋತ್ಸಾಹಿಸುವ ಕೆಲಸವನ್ನು ನಿಖರವಾಗಿ ಮಾಡುತ್ತಿರುವುದಾಗಿ ಮೋದಿ ಸರ್ಕಾರ ಹೇಳಿಕೊಳ್ಳುತ್ತದೆ. ಈ ಅಂಶಗಳ ಬಗ್ಗೆ ವಿಭಿನ್ನ ನಿಲುವು ಹೊಂದಿಲ್ಲದಿದ್ದರೂ, ಅವುಗಳಲ್ಲಿ ಕೆಲವು ಕ್ರಮಗಳನ್ನು ವಿರೋಧಿಸುವುದಾಗಿ ಕಾಂಗ್ರೆಸ್ ಹೇಳುತ್ತಿರುವುದು ವಿಚಿತ್ರವಾಗಿದೆ. ಒಟ್ಟಾರೆಯಾಗಿ, ಪ್ರಮುಖ ರಾಜಕೀಯ ಪಕ್ಷಗಳ ನಡುವೆ ನವ ಉದಾರ ನೀತಿಗಳ ಬಗ್ಗೆ ವ್ಯಾಪಕ "ಒಮ್ಮತ"ವಿದೆ ಎಂಬ ಬ್ರೆಟನ್‌ವುಡ್ಸ್ ಸಂಸ್ಥೆಗಳ ಅಭಿಪ್ರಾಯವು ಕಳೆದ ಮೂರು ದಶಕಗಳಲ್ಲಿ ಈ ನೀತಿಗಳು ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡಿದ ಪರಿಣಾಮಗಳ ಮೌಲ್ಯಮಾಪನಕ್ಕೂ ವಿಸ್ತರಿಸುತ್ತದೆ ಎಂದು ತೋರುತ್ತದೆ.

ಆರ್ಥಿಕ ಉದಾರೀಕರಣದ ಮೂರು ದಶಕಗಳು

ಪುಟ 13 ರಿಂದ

ದುಡಿಯುವವರಿಂದ ಶ್ರೀಮಂತರತ್ತ ಹೊರಳುತ್ತವೆ ಎಂಬುದನ್ನು ಸೂಚಿಸುತ್ತದೆ. ಇದರ ಪರಿಣಾಮವಾಗಿ ಬಳಕೆಯು ಕಡಿತಗೊಂಡು ಒಟ್ಟು ಬೇಡಿಕೆಯನ್ನು ತಗ್ಗುತ್ತದೆ. ಹಾಗಾಗಿ, ಹೂಡಿಕೆಯೂ ತಗ್ಗುತ್ತದೆ ಮತ್ತು ಬೆಳವಣಿಗೆಯ ದರವೂ ಇಳಿಯುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನವ ಉದಾರವಾದವು ಒಂದು ಸ್ಥಗಿತತೆಯ ಪ್ರವೃತ್ತಿಯಿಂದ ನರಳುತ್ತಿದೆ. ಬಂಡವಾಳಶಾಹಿ ಜಗತ್ತಿನ ಈ ಪ್ರವೃತ್ತಿಯನ್ನು ಅಮೇರಿಕಾದ ಅರ್ಥವ್ಯವಸ್ಥೆಯಲ್ಲಿ "ಗುಳ್ಳೆಗಳ"ನ್ನು ಎಬ್ಬಿಸುವ ಮೂಲಕ ನಿಯಂತ್ರಿಸಲಾಯಿತು. ಮೊದಲು 1990ರ ದಶಕದ "ಡಾಟ್ ಕಾಮ್ ಗುಳ್ಳೆ" ಮತ್ತು ನಂತರ ಈ ಶತಮಾನದ ಮೊದಲ ದಶಕದಲ್ಲಿ ಎಬ್ಬಿಸಿದ "ವಸತಿ ಗುಳ್ಳೆ"ಗಳು ಬಂಡವಾಳಶಾಹಿ ಜಗತ್ತಿನ ಈ ಪ್ರವೃತ್ತಿಯನ್ನು ಅಂಕೆಯಲ್ಲಿಟ್ಟವು. 2008ರಲ್ಲಿ "ವಸತಿ ಗುಳ್ಳೆ"ಗಳು ಒಡೆದ ನಂತರ, ಜಾಗತಿಕ ಅರ್ಥವ್ಯವಸ್ಥೆಯು ದೀರ್ಘಕಾಲದ ಬಿಕ್ಕಟ್ಟಿಗೆ ಜಾರಿತು. ನವ ಉದಾರವಾದದಡಿಯಲ್ಲಿ ಈ ಬಿಕ್ಕಟ್ಟಿಗೆ ಪರಿಹಾರವಿಲ್ಲ ("ಬೇಡಿಕೆ ನಿರ್ವಹಣೆಯಲ್ಲಿ" ಪ್ರಭುತ್ವದ ಹಸ್ತಕ್ಷೇಪದ ಬಗ್ಗೆ ನವ ಉದಾರವಾದವು ಹುಬ್ಬುಗಂಟಿಕ್ಕುತ್ತದೆ).

ನವ ಉದಾರವಾದದ ಬಿಕ್ಕಟ್ಟು ಭಾರತದ ಅರ್ಥವ್ಯವಸ್ಥೆಯ ಮೇಲೂ ಪರಿಣಾಮ ಬೀರಿದೆ. ಕೊರೊನಾ ಸಾಂಕ್ರಾಮಿಕವು ಹರಡುವ ಮುನ್ನವೇ 2019ರಲ್ಲಿ ನಿರುದ್ಯೋಗ ದರವು 45 ವರ್ಷಗಳಲ್ಲೇ ಅತಿ ಹೆಚ್ಚಿನ ಮಟ್ಟದಲ್ಲಿತ್ತು. ಈ ಬಿಕ್ಕಟ್ಟು ಜನರ ಮೇಲೆ ಎರಡು ರೀತಿಯ ಪರಿಣಾಮಗಳನ್ನು ಬೀರಿದೆ: ಒಂದು, ನವ ಉದಾರವಾದದ ಅನುಸರಣೆಯಿಂದಾಗಿ, ಕೊರೊನಾ ಸಾಂಕ್ರಾಮಿಕವು ಹರಡುವ ಮೊದಲೇ, ನೊಂದಿದ್ದ ದುಡಿಯುವ ಜನರ ಜೀವನ ಮಟ್ಟವು ಬಹಳವಾಗಿ ಕುಸಿದಿದೆ. ಉದ್ಯೋಗ ಮತ್ತು ಬಳಕೆಯಲ್ಲಿ ಕಂಡುಬಂದ ಇತ್ತೀಚಿನ ತೀವ್ರ ಕುಸಿತವು ಈ ಅಂಶವನ್ನು ಒತ್ತಿ ಹೇಳುತ್ತದೆ.

ಎರಡನೆಯದಾಗಿ, ಈ ಬಿಕ್ಕಟ್ಟು ಮೋದಿ ಸರ್ಕಾರವನ್ನು ಪೋಷಿಸುವ ದೊಡ್ಡ ಬಂಡವಾಳ ಮತ್ತು ಫ್ಯಾಸಿಸ್ಟ್ ತೆರನ ಹಿಂದುತ್ವ ಗುಂಪುಗಳ ನಡುವಿನ ಮೈತ್ರಿಯನ್ನು ಗಟ್ಟಿಗೊಳಿಸಲು ಕಾರಣವಾಗಿದೆ. ಇಂತಹ ಮೈತ್ರಿಗಳು ಭಾರತಕ್ಕೆ ಮಾತ್ರ ನಿರ್ದಿಷ್ಟವಲ್ಲ. ಬಿಕ್ಕಟ್ಟಿನ ಅವಧಿಗಳಲ್ಲಿ, ದೊಡ್ಡ ಬಂಡವಾಳವು ಫ್ಯಾಸಿಸ್ಟ್ ತೆರನ ಗುಂಪುಗಳು ರಾಜಕೀಯ ಪ್ರಾಬಲ್ಯ ಹೊಂದುವುದನ್ನು ಉತ್ತೇಜಿಸುತ್ತದೆ ಮತ್ತು ಹಣಕಾಸನ್ನೂ ಒದಗಿಸುತ್ತದೆ. ಇಂತಹ ಗುಂಪುಗಳೊಂದಿಗೆ ಮೈತ್ರಿಯನ್ನೂ ಏರ್ಪಡಿಸಿಕೊಳ್ಳುತ್ತದೆ. ಆರ್ಥಿಕ ಸಂಕಟಗಳಿಂದ ಜನರ ಗಮನವನ್ನು ವಿಚಲಿತಗೊಳಿಸುವ ಸಲುವಾಗಿ, ಅವರನ್ನು "ಅನ್ಯ"ರ ನಿಂದನೆಯಲ್ಲಿ ತೊಡಗಿಸಿ, ಕಥನದ ದಿಕ್ಕನ್ನು ಬದಲಾಯಿಸುತ್ತದೆ. ಅಧಿಕಾರದಲ್ಲಿರುವ ಈ ಗುಂಪುಗಳು ದೊಡ್ಡ ಬಂಡವಾಳದ ಆಜ್ಞೆಗಳನ್ನು ಪಾಲಿಸುತ್ತವೆಯಾದರೂ, ಬಿಕ್ಕಟ್ಟಿಗೆ ಆರ್ಥಿಕ ಪರಿಹಾರ ಒದಗಿಸುವ ಮಾರ್ಗದ ಮೂಲಕವಲ್ಲದೆ, ಜನರ ಗಮನವನ್ನು ಆರ್ಥಿಕ ವಲಯದಿಂದ ಸಂಪೂರ್ಣವಾಗಿ ಬೇರೆಡೆಗೆ ತಿರುಗಿಸುವ ಮೂಲಕ ತಮ್ಮ ರಾಜಕೀಯ ಶಕ್ತಿಯನ್ನು ಪಡೆಯುತ್ತವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಹೆಚ್ಚು ಬೆಳವಣಿಗೆಯನ್ನು ಸಾಧಿಸಿದ್ದ ಕಾಲದಲ್ಲೂ ದುಡಿಯುವ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದ ನವ ಉದಾರವಾದವು ಬಿಕ್ಕಟ್ಟಿಗೆ ಹೊರಳುತ್ತಿರುವ ಸನ್ನಿವೇಶದಲ್ಲಿ ಅವರ ಮೇಲೆ ಹೇರುವ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿದೆ ಮತ್ತು ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಾಮಾಜಿಕ ಸಮಾನತೆಯಂತಹ ಭಾರತೀಯ ಸಂವಿಧಾನದ ಮೂಲಭೂತ ಆಶಯಗಳಿಗೆ ವಿರುದ್ಧವಾದ ಒಂದು ಏರ್ಪಾಟನ್ನು ಆರಂಭಿಸಿದೆ.

ನವ ಉದಾರವಾದವು ಜಿಡಿಪಿ ಬೆಳವಣಿಗೆಯ ದರವನ್ನು ಹೆಚ್ಚಿಸಿರಬಹುದು, ಆದರೆ, ಅದು ದುಡಿಯುವ ಜನರ ಪರಿಸ್ಥಿತಿಗಳನ್ನು ಹದಗೆಡಿಸಿದೆ ಮತ್ತು ಆಧುನಿಕ ಭಾರತ ರಾಷ್ಟ್ರ ನಿರ್ಮಾಣದ ಬುನಾದಿ ತತ್ವಗಳನ್ನು ದುರ್ಬಲಗೊಳಿಸಿದೆ ಎಂಬ ಅಂಶವನ್ನು ಉದಾರೀಕರಣದ ಭಕ್ತರು ಕಡೆಗಣಿಸುತ್ತಾರೆ.

ದಿಲ್ಲಿಯಲ್ಲಿ ದಲಿತ ಬಾಲಕಿಯ ಮೇಲೆ ಅತ್ಯಾಚಾರ, ಕೊಲೆ ಮತ್ತು ....

ಪುಟ 2 ರಿಂದ

ಗೃಹಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ



ಅವರನ್ನು ಕೆಲವು ಗಂಟೆಗಳ ಕಾಲ ಪೊಲೀಸ್ ಠಾಣೆಯಲ್ಲಿ ಬಂಧಿಸಿಟ್ಟರು. ಇದು ಅಮಾನವೀಯ ಮತ್ತು ಸಂಪೂರ್ಣವಾಗಿ ಕಾನೂನುಬಾಹಿರ. ಮೂರನೆಯದಾಗಿ, ಸಮುದಾಯದವರಿಂದ ಪ್ರತಿಭಟನೆಗಳು ಬರುವ ವರೆಗೂ ಕುಟುಂಬದವರಿಗೆ ಎಫ್‌ಐಆರ್ ಕೊಡಲಿಲ್ಲ. ಅಲ್ಲದೆ ಪೋಲಿಸರು ಎಫ್‌ಐಆರ್‌ನ್ನು ಸರಿಯಾದ ಸೆಕ್ಷನ್‌ಗಳ ಅಡಿಯಲ್ಲಿ, ಪೋಸ್ಕೋ, ಪರಿಶಿಷ್ಟ ಜಾತಿಗಳ/ಬುಡಕಟ್ಟುಗಳ ಜನಗಳ ಮೇಲೆ ಅತ್ಯಾಚಾರ ತಡೆ ಕಾಯ್ದೆ ಮುಂತಾದವುಗಳ ಅಡಿಯಲ್ಲಿ ಹಾಕಲಿಲ್ಲ.

ಆ ಮಗುವಿನ ಅಪರಾಧವೆಂದರೆ, ಆಕೆ ಒಂದು ಬಡ, ದಲಿತ, ವಸತಿಹೀನ ಕುಟುಂಬದಿಂದ ಬಂದಿರುವವಳು. ಅವಳು ಸ್ಮಶಾನದಲ್ಲಿನ ಕೂಲರ್‌ನಿಂದ ಕುಡಿಯುವ ನೀರು ತರಲು ಹೋಗಿದ್ದಳು. ಆಕೆಯ ಕುಟುಂಬದವರಿಗೆ ತಲೆಯ ಮೇಲೆ ಸೂರಿಲ್ಲ, ನಿರುದ್ಯೋಗಿಗಳು, ಆಗಾಗ ಕಸಗುಡಿಸುವ ಅಥವ ಕಸಕಡ್ಡಿ ಸಂಗ್ರಹಿಸುವ ಕೆಲಸ ಸಿಗುತ್ತಿತ್ತು. ಅವಳು ಅವರಿಗೆ ಬಹಳ ತಡವಾಗಿ ಹುಟ್ಟಿದ ಏಕೈಕ ಮಗು. ಅದರಿಂದಾಗಿ ಆಕೆ ಇನ್ನೂ ಹೆಚ್ಚು ಅಮೂಲ್ಯ. ಆಕೆಯ ಕೊಲೆ ಹಲವು ಪಟ್ಟು ದೊಡ್ಡದಾದ ಅಪರಾಧ. ಸಾಲದೆಂಬಂತೆ ಆಕೆಯ ತಂದೆ-ತಾಯಿ ಬೆದರಿಕೆ, ಕಾನೂನುಬಾಹಿರ ಬಂಧನವನ್ನೂ ಅನುಭವಿಸಬೇಕಾಯಿತು. ಆ ಪ್ರದೇಶದ ಬಲಿಷ್ಠರು ಆ ಕ್ರಿಮಿನಲ್‌ಗಳನ್ನು ರಕ್ಷಿಸ ಬಯಸುತ್ತಿರುವುದರಿಂದಾಗಿ ಹೀಗಾಗಿದೆ ಎಂದು ಆ ಪ್ರದೇಶದ ಜನರು ಹೇಳುತ್ತಿದ್ದಾರೆ. ಇದೇ ಪ್ರದೇಶದಲ್ಲಿ ಈ ಮೊದಲೂ ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆದಿವೆ ಎಂಬುದನ್ನು ಗಮನಿಸಬೇಕಾಗಿದೆ.

ದಿಲ್ಲಿ ಪೋಲೀಸರು ನೇರವಾಗಿ ತಮ್ಮ ಅಡಿಯಲ್ಲಿ ಇದ್ದರೂ, ತಾವು ಇದುವರೆಗೆ ಈ ಪ್ರಕರಣದಲ್ಲಿ ಮಧ್ಯಪ್ರವೇಶಿಸದಿರುವುದು ನಿಜವಾಗಿಯೂ ಖೇದಕರ. ದಯವಿಟ್ಟು ನೀವು ನ್ಯಾಯ ಸಿಗುವಂತೆ ಖಾತ್ರಿಪಡಿಸಬೇಕು ಎಂಬುದು ನನ್ನ ಕೋರಿಕೆ. ತಮ್ಮ ಪ್ರೀತಿಯ ಮಗಳನ್ನು ಕಳಕೊಂಡಿರುವ ತಂದೆ-ತಾಯಿಗೆ ಪರಿಹಾರ ಎಂದೂ ಸಾಧ್ಯವಿಲ್ಲ. ಆದರೆ ಸರಕಾರ ಅವರಿಗೆ ಹಣಕಾಸು ಬೆಂಬಲವನ್ನು ಖಾತ್ರಿಪಡಿಸಲು ಕರ್ತವ್ಯಬದ್ಧವಾಗಿದೆ. ಇದರಲ್ಲಿ ಶಾಮೀಲಾಗಿದ್ದ ಪೋಲೀಸ್ ಸಿಬ್ಬಂದಿಯ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕೆಂದೂ ನಿಮ್ಮನ್ನು ಕೋರುತ್ತೇನೆ. ಈ ಮಗುವಿಗೆ ನ್ಯಾಯದ ಸಂದೇಶ ಗಟ್ಟಿಯಾಗಿ ಮತ್ತು ಬಲಯುತವಾಗಿ ಹೋಗಬೇಕಾಗಿದೆ".

ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆ

ಪುಟ 2 ರಿಂದ

ನಂತರ ಸಂಭವಿಸಿದೆ. ಈ ಘರ್ಷಣೆಗಳು ನಿಲ್ಲುವಂತೆ ಮತ್ತು ಶಾಂತಿ ನೆಲೆಸುವಂತೆ ಕೇಂದ್ರ ಸರಕಾರ ಖಾತ್ರಿ ಪಡಿಸಬೇಕು.

ಅಸ್ಸಾಂ ಮತ್ತು ಮಿಝೋರಾಂ ಎರಡೂ ಎನ್‌ಡಿಎ ಸರಕಾರಗಳನ್ನು ಹೊಂದಿವೆ. ಎನ್‌ಡಿಎ ಗೆ ಬಿಜೆಪಿ ನೇತೃತ್ವ ನೀಡುತ್ತಿದೆ. ಆಳುವ ಪಕ್ಷ ಏನು ಮಾಡುತ್ತಿದೆ ಎಂದು ಪೊಲಿಟ್‌ಬ್ಯುರೊ ಪ್ರಶ್ನಿಸಿದೆ.

ಶೈಕ್ಷಣಿಕ ಸಂಸ್ಥೆಗಳನ್ನು ಬೇಗನೇ ಪುನರಾರಂಭಿಸುವ ಪರಿಸ್ಥಿತಿಗಳನ್ನು ನಿರ್ಮಿಸಬೇಕು

ಈಗ ಒಂದೂವರೆ ವರ್ಷಕ್ಕಿಂತ ಹೆಚ್ಚು ಸಮಯದಿಂದ ಶೈಕ್ಷಣಿಕ ಸಂಸ್ಥೆಗಳು ಮುಚ್ಚಿರುವುದರಿಂದಾಗಿ ಕಷ್ಟಕ್ಕೆ ಸಿಲುಕಿರುವ ತನ್ನ ಯುವಜನರನ್ನು ವ್ಯರ್ಥಗೊಳಿಸದಂತೆ ಭಾರತ ತಡೆಯಬೇಕಾಗಿದೆ. 22ಶೇಕಡಾ ವಿದ್ಯಾರ್ಥಿಗಳಿಗೆ ಮಾತ್ರವೇ ಡಿಜಿಟಲ್ ಶಿಕ್ಷಣ ಲಭ್ಯವಿದೆ ಎಂದು ವರದಿಯಾಗಿದೆ. ಬಹುಪಾಲು ಸರಕಾರೀ ಮತ್ತು ಖಾಸಗೀ ಶಾಲೆಗಳು ವೈಫೈ ಸೌಲಭ್ಯಗಳನ್ನು ಹೊಂದಿಲ್ಲ. ಈ ಡಿಜಿಟಲ್ ವಿಭಜನೆ ಮಕ್ಕಳ ಮತ್ತು ಮಾನವ ಕಳ್ಳಸಾಗಣೆ, ಬಾಲದುಡಿಮೆ, ಸಣ್ಣಪುಟ್ಟ ಅಪರಾಧಗಳು, ಮಧ್ಯಾಹ್ನದ ಊಟದ ಕೊರತೆಯಿಂದ ಅಪೌಷ್ಟಿಕತೆ ಮುಂತಾದವು ಗಳಲ್ಲಿ ಭಾರಿ ಹೆಚ್ಚಳದಂತಹ ಅಸಂಖ್ಯ ಸಮಸ್ಯೆಗಳನ್ನು ಸೃಷ್ಟಿಸಿದೆ.

ಶೈಕ್ಷಣಿಕ ಸಂಸ್ಥೆಗಳನ್ನು ಬೇಗನೇ ಪುನರಾರಂಭಿಸಲು ಅಗತ್ಯವಾದ ಸನ್ನಿವೇಶವನ್ನು ನಿರ್ಮಿಸುವಂತೆ ಎಲ್ಲ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಯನ್ನು ಮುಂಚೂಣಿಯ ಕಾರ್ಯಕರ್ತರೆಂದು ಪರಿಗಣಿಸಿ ಅವರಿಗೆ ಆದ್ಯತೆಯ ಮೇಲೆ ಪೂರ್ಣವಾಗಿ ಲಸಿಕೆಗಳನ್ನು ಹಾಕಿಸಬೇಕು.

ರೈತರ ಚಳುವಳಿ

ರೈತರು ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ಈಗ ಎಂಟು ತಿಂಗಳಿಗಿಂತಲೂ ಹೆಚ್ಚು ಸಮಯದಿಂದ ಒಂದು ನಿರಂತರ ಪ್ರತಿಭಟನಾ ಕಾರ್ಯಾಚರಣೆ ಮತ್ತು ಹೋರಾಟದಲ್ಲಿ ನಿರತರಾಗಿದ್ದಾರೆ. ಮೋದಿ ಸರಕಾರ ಅವರೊಂದಿಗೆ ಯಾವುದೇ ಮಾತುಕತೆಯಲ್ಲಿ ತೊಡಗಲು ಮೊಂಡುತನದಿಂದ ನಿರಾಕರಿಸುತ್ತಿದೆ. ಕೇಂದ್ರ ಸರಕಾರ ಸಂಯುಕ್ತ ಕಿಸಾನ್ ಮೋರ್ಚಾದೊಂದಿಗೆ ಮಾತುಕತೆಗಳನ್ನು ಪುನರಾರಂಭಿಸಬೇಕು ಎಂದಿರುವ ಸಿಪಿಐ(ಎಂ) ರೈತರ ಹೋರಾಟಗಳನ್ನು ಪೂರ್ಣವಾಗಿ ಬೆಂಬಲಿಸುತ್ತ, ಈ ಕೃಷಿ ಕಾಯ್ದೆಗಳನ್ನು ಕೂಡಲೇ ರದ್ದು ಮಾಡಬೇಕು ಮತ್ತು ಸಿ2+50% ಸೂತ್ರದಂತೆ ಕನಿಷ್ಠ ಬೆಂಬಲ ಬೆಲೆಯಲ್ಲಿ ಮಾರುವ ಹಕ್ಕನ್ನು ಒಂದು ಕಾಯ್ದೆಯಾಗಿ ತರಬೇಕು ಎಂದು ಪುನರುಚ್ಚರಿಸಿದೆ.

ಕಾರ್ಮಿಕ ವರ್ಗದ ಮೇಲೆ ದಾಳಿಗಳು

ನಮ್ಮ ರಾಷ್ಟ್ರೀಯ ಆಸ್ತಿಗಳ ಲೂಟಿ ಮತ್ತು ಎಲ್ಲ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣದೊಂದಿಗೇ, ಬಿಜೆಪಿ ಕೇಂದ್ರ ಸರಕಾರ ದುಡಿಯುವ ಜನಗಳ ಹಕ್ಕುಗಳ ಮೇಲೆ ಹೆಚ್ಚೆಚ್ಚು ದಾಳಿಗಳನ್ನು ನಡೆಸಲು ಉದ್ಯುಕ್ತವಾಗಿದೆ. ಅಗತ್ಯ ರಕ್ಷಣಾ ಸೇವೆಗಳ ಸುಗ್ರೀವಾಜ್ಞೆ, 2021ನ್ನು ಶಾಸನವಾಗಿ ಪರಿವರ್ತಿಸಬಾರದು ಎಂದು ಆಗ್ರಹಿಸುತ್ತ, ಇದನ್ನು ಸಂಸತ್ತಿನಲ್ಲಿ ಸಿಪಿಐ(ಎಂ) ಇತರ ಪಕ್ಷಗಳೊಡಗೂಡಿ ವಿರೋಧಿಸುವುದಾಗಿ ಹೇಳಿದೆ.

ಸರಕಾರೀ ಪ್ರಾಯೋಜಿತ ಅಡೆ-ತಡೆಗಳಿಂದ ಉಂಟು ಮಾಡಿದ ಗದ್ದಲದ ನಡುವೆ ಕೇಂದ್ರ ಸರಕಾರ ಮಹತ್ವದ ಶಾಸನಗಳನ್ನು ಪಾಸು ಮಾಡಿಸಿಕೊಳ್ಳುತ್ತಿದೆ. ಒಂದು ಸರಿಯಾದ ಸಂರಚಿತ ಚರ್ಚೆಯಿಲ್ಲದೆ ಯಾವುದೇ ಶಾಸನವನ್ನು ಪಾಸು ಮಾಡಿಸಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಈ ಬಿಜೆಪಿ ಸರಕಾರ ಸಂಸತ್ತು ತನ್ನ ಹೊಣೆಗಾರಿಕೆಯನ್ನು ನಿಭಾಯಿಸದಂತೆ ಮತ್ತು ದುಡಿಯುವ ಜನಗಳ ಜೀವನ್ಮರಣ ಪ್ರಶ್ನೆಗಳನ್ನು ಕುರಿತಂತೆ ಶಾಸನಗಳನ್ನು ರಚಿಸದಂತೆ ಅದನ್ನು ದುರ್ಬಲಗೊಳಿಸುತ್ತಿದೆ. ಇದು ನಿಲ್ಲಬೇಕು ಎಂದು ಅದು ಹೇಳಿದೆ.

2010 : ಜಾಗತಿಕ ದಾಳಿಗಳ ವಿರುದ್ಧ ಕಾರ್ಮಿಕ ವರ್ಗದಿಂದ ಹೋರಾಟದ ದೃಢ ನಿಶ್ಚಯ

ಪುಟ 11 ರಿಂದ



ಸೇರಿದಂತೆ ಹಲವಾರು ಸಂಬಂಧಿತ ವಿಷಯಗಳು ಸಹ ಪ್ರಸ್ತಾಪಿಸಲ್ಪಟ್ಟವು. ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರಗಳಲ್ಲಿ ಎಫ್.ಡಿ.ಐ.ನ ಮಿತಿಯನ್ನು ಹೆಚ್ಚಿಸುವ ಪ್ರಯತ್ನಗಳಿಂದ ಹಿಮ್ಮೆಟ್ಟುವಿಕೆ, ಕೇಂದ್ರ ಸರ್ಕಾರ ಮತ್ತು ರೈಲ್ವೆಯಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಿ, ಕುಖ್ಯಾತ ಪಿಎಫ್‌ಆರ್‌ಡಿಎ ಮಸೂದೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳುವುದಕ್ಕೆ ಒತ್ತಾಯಿಸಿ ಮತ್ತು ಎಡಪಂಥೀಯ ವಿರೋಧಿ ಶಕ್ತಿಗಳನ್ನು ವಿಘಟನೆಮಾಡುವ ಮೂಲಕ ರಾಜ್ಯದ ಪ್ರಜಾಸತ್ತಾತ್ಮಕ ವಾತಾವರಣಕ್ಕೆ ಅಡ್ಡಿ ಉಂಟು ಮಾಡುವ ಮತ್ತು ಭಾರತದ ಸರ್ಕಾರದ ನವ-ಉದಾರವಾದಿ ಜಾಗತೀಕರಣ ನೀತಿಗಳ ವಿರುದ್ಧ ನಡೆಯುತ್ತಿರುವ ಎಡಪಂಥೀಯ ಐಕ್ಯ ಆಂದೋಲನವನ್ನು ಹಿಸುಕಿಹಾಕಲು, ಹುಟ್ಟುಹಾಕಿರುವ ಬುದ್ಧಿಹೀನ ಹಿಂಸಾಚಾರದ ಸರಪಳಿಯನ್ನು ವಿರೋಧಿಸಿ ಈ ಧರಣಿ ನಡೆಯಿತು.

ದ'ಂಡಿಂ'ಯಿವ ಜನ'ರ' ಭಾರಿ ಭಾಗವಹಿಸುವಿಕೆಯೊಂದಿಗೆ ಈ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಬೃಹತ್ ರೀತಿಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಕೋಲ್ಕತ್ತಾದ ರಾಣಿ ರಶ್ಮೋನಿ ಅವೆನ್ಯೂದಲ್ಲಿ ಕೇಂದ್ರ ಕಾರ್ಯಕ್ರಮವನ್ನು ನಡೆಸಲಾಯಿತು, ಅಲ್ಲಿ ಹತ್ತು ಸಾವಿರ ಕ್ಕೂ ಹೆಚ್ಚಿನ ಸಂಖ್ಯೆಯ ನೌಕರರು ಮತ್ತು ಕಾರ್ಮಿಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮಹಿಳೆಯರು ಸೇರಿದಂತೆ ಐದು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ರಾಣಿ ರಾಸ್ಮೋನಿ ಅವೆನ್ಯೂದಲ್ಲಿ ಇಡೀ ರಾತ್ರಿ ತಂಗಿದ್ದರು.

ಕಲ್ಲಿದ್ದಲು ವಲಯದಲ್ಲಿ ಸಂಪೂರ್ಣ ಮುಷ್ಕರ

ಮಾರ್ಚ್ 27, 2010 ರಂದು ರಾಂಚಿಯಲ್ಲಿ ನಡೆದ ಅಖಿಲ ಭಾರತ 'ಕಲ್ಲಿದ್ದಲು ಕಾರ್ಮಿಕರ ಒಕ್ಕೂಟ' ಸೇರಿದಂತೆ ಐದು ರಾಷ್ಟ್ರೀಯ ಕಲ್ಲಿದ್ದಲು ಒಕ್ಕೂಟಗಳ ಜಂಟಿ ಸಮಾವೇಶದಲ್ಲಿ ತೆಗೆದುಕೊಂಡ ಸರ್ವಾನುಮತದ ನಿರ್ಣಯದ ಮೇರೆಗೆ, ಮತ್ತು ನಂತರ ಕೇಂದ್ರ ಕಲ್ಲಿದ್ದಲು ರಾಜ್ಯ ಸಚಿವರೊಂದಿಗೆ ಏಪ್ರಿಲ್ 9 ರಂದು ನವದೆಹಲಿಯಲ್ಲಿ ಮಾತುಕತೆ ವಿಫಲವಾದ ಕಾರಣ, ಕೋಲ್-ಇಂಡಿಯಾದ ಮತ್ತು ಅದರ ಅಧೀನ ಕಂಪನಿಗಳ ಸುಮಾರು 3 ಲಕ್ಷ ನೌಕರರು ತಮ್ಮ 10 ಬೇಡಿಕೆಗಳ ಚಾರ್ಟರ್ ಗೆ ಬೆಂಬಲವಾಗಿ 5 ಮೇ 2010 ರಂದು ತಮ್ಮ 3 ದಿನಗಳ ಮುಷ್ಕರವನ್ನು ಪ್ರಾರಂಭಿಸಿದರು. ಕಲ್ಲಿದ್ದಲು ವಲಯದಲ್ಲಿನ ಮುಷ್ಕರಕ್ಕೆ ಸಿಐಟಿಯು ಸೇರಿದಂತೆ ಒಂಬತ್ತು ಕೇಂದ್ರ ಕಾರ್ಮಿಕ ಸಂಘಗಳು ಬೆಂಬಲ ನೀಡಿದವು. ಕಲ್ಲಿದ್ದಲು ಒಕ್ಕೂಟಗಳು ಕೋಲ್ ಇಂಡಿಯಾದ ಹೂಡಿಕೆ-ಹಿಂತೆಗೆತ ಮಾಡುವುದು, ಕಲ್ಲಿದ್ದಲು ಉದ್ಯಮದಲ್ಲಿ ಕಾರ್ಯಾಚರಣೆಯ ಹೊರಗುತ್ತಿಗೆ ಮತ್ತು ಇನ್ನೂ-ಹೊಸ ಕಲ್ಲಿದ್ದಲು ಬ್ಲಾಕ್ ಗಳನ್ನು ಮತ್ತಷ್ಟು ಮಾರಾಟ ಮಾಡುವುದರ ವಿರುದ್ಧ ಪ್ರತಿಭಟಿಸುತ್ತಿದ್ದವು. ರಾಷ್ಟ್ರೀಯ ಕಲ್ಲಿದ್ದಲು ಕಾರ್ಮಿಕರ ಒಪ್ಪಂದ- VIII ರ ಪ್ರಕಾರ ಕಾರ್ಮಿಕರಿಗೆ ನೀಡಬೇಕಿದ್ದ ವೇತನ ಪಾವತಿ ಮತ್ತು ಇತರ ಸವಲತ್ತುಗಳ ಬೇಡಿಕೆಗಳು ಸೇರಿದ್ದವು.. ಮುಷ್ಕರದ ಇತರ ಬೇಡಿಕೆಗಳೆಂದರೆ: 1) ಕಲ್ಲಿದ್ದಲು ಉದ್ಯಮವನ್ನು ಮೂಲಸೌಕರ್ಯ ಉದ್ಯಮವೆಂದು ಘೋಷಿಸುವುದು, 2) ಕೋಲ್-ವಿದೇಶ ಅನ್ನು ಮುಚ್ಚುವುದು, 3) ಸಿಐಎಲ್‌ನ ಅಂಗಸಂಸ್ಥೆಗಳ ಕಲ್ಲಿದ್ದಲು ಕಂಪನಿಗಳಲ್ಲಿ ಕಾರ್ಯನಿರ್ವಾಹಕೇತರ ಹುದ್ದೆಗಳಿಗೆ ನೇಮಕಾತಿ-ನಿಷೇಧವನ್ನು ರದ್ದುಮಾಡುವುದು, 4) ಕಾರ್ಯಕ್ಷಮತೆಗೆ ಸಂಬಂಧಿಸಿದ ವೇತನ, ಫ್ರಿಂಜ್ ಸೌಲಭ್ಯಗಳು, ವಿಶೇಷ ಸೌಲಭ್ಯಗಳು ಮತ್ತು ನಿವೃತ್ತಿ ಸೌಲಭ್ಯಗಳನ್ನು ಕಾರ್ಯನಿರ್ವಾಹಕರಿಗೆ ಸಮನಾಗಿ ಎಲ್ಲಾ ಕಾರ್ಮಿಕರಿಗೆ ಪಾವತಿಸಬೇಕು. ಕಲ್ಲಿದ್ದಲು ಕಾರ್ಮಿಕರ ಪಿಂಚಣಿಯನ್ನು 25 ರಿಂದ 40% ಕ್ಕೆ ಹೆಚ್ಚಿಸುವುದು, ವಿಶೇಷಸೌಲಭ್ಯಗಳ ಮೇಲಿನ ಆದಾಯ ತೆರಿಗೆ ವಿನಾಯಿತಿ, ಒಪ್ಪಂದದ ಪ್ರಕಾರ ಉತ್ಪಾದನೆಯನ್ನು ಪ್ರಾರಂಭಿಸದ ಕಲ್ಲಿದ್ದಲು ಬ್ಲಾಕ್-ಗಳ ಹಂಚಿಕೆಯನ್ನು ರದ್ದುಪಡಿಸುವುದು ಮತ್ತು ಸಾರ್ವಜನಿಕ ವಲಯದ ಪ್ರದೇಶಗಳೊಳಗೆ ಖಾಸಗಿ ವಲಯಕ್ಕೆ ನಿಗದಿಪಡಿಸಿದ ಕಲ್ಲಿದ್ದಲು ಬ್ಲಾಕ್ ಗಳನ್ನು ರದ್ದುಗೊಳಿಸಿ ಅವನ್ನು ಸಂಬಂಧಿತ ಪಿಎಸ್‌ಯುಗಳಿಗೆ ಹಸ್ತಾಂತರಿಸುವ ಬೇಡಿಕೆಗಳೂ ಸೇರಿದ್ದವು

ಟೋಕಿಯೊ–2020 ಒಲಿಂಪಿಕ್ಸ್ ನಲ್ಲಿ ಭಾರತೀಯ ಆಟಗಾರರ ಸಾಧನೆ

ಟೋಕಿಯೋ ಒಲಿಂಪಿಕ್ಸ್‌ಗಾಗಿ ಭಾರತದಿಂದ ಒಟ್ಟು 127 ಅಥ್ಲೀಟ್ಗಳು ಸ್ಪರ್ಧೆಯಲ್ಲಿದ್ದರು. ಇದರಲ್ಲಿ ಅಧಿಕಾರಿಗಳು, ಸಿಬ್ಬಂದಿಗಳೂ ಸೇರಿ ಒಟ್ಟಾರೆ 228 ಮಂದಿಯ ಬೃಹತ್ ತಂಡ ಕ್ರೀಡಾಕೂಟ ಭಾಗವಹಿಸಿದೆ. ಒಲಿಂಪಿಕ್ಸ್ ಇತಿಹಾಸದಲ್ಲಿ ಪಾಲ್ಗೊಳ್ಳುತ್ತಿರುವ ಅತೀ ದೊಡ್ಡ ಭಾರತೀಯ ತಂಡವಿದು. ಒಟ್ಟು 17 ಕ್ರೀಡಾ ಸ್ಪರ್ಧೆಗಳಲ್ಲಿ ಭಾರತೀಯರು ಸ್ಪರ್ಧಿಸಿದ್ದಾರೆ.

ಕ್ರೀಡಾಕೂಟದ ಇತಿಹಾಸದಲ್ಲಿ ಭಾರತದ ಶ್ರೇಷ್ಠ ಸಾಧನೆ ಬಂದಿರುವುದು 2008ರ ಒಲಿಂಪಿಕ್ಸ್‌ನಲ್ಲಿ ಭಾರತ 1 ಚಿನ್ನ ಹಾಗೂ 1 ಕಂಚು ಗಳಿಸಿತ್ತು. 2012 ರಲ್ಲಿ 1 ಬೆಳ್ಳಿ ಹಾಗೂ 5 ಕಂಚು ಪದಕ ಗಳಿಸಿಕೊಂಡಿತ್ತು.

ಈ ಬಾರಿಯ ಟೋಕಿಯೋ ಒಲಿಂಪಿಕ್ಸ್‌ನಲ್ಲಿ, ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಮೀರಾಬಾಯಿ ಚಾನು, ರವಿಕುಮಾರ್ ದಹಿಯ ಬೆಳ್ಳಿ ಪದಕ ಗೆದ್ದಿದ್ದರೆ, ಪಿ.ವಿ. ಸಿಂಧು ಲವ್ಲಿನಾ ಬೊರ್ಗೊಹೈನ್ ಕಂಚಿನ ಪದಕ ತಂದಿದ್ದಾರೆ. ಪುರುಷರ ಹಾಕಿ ತಂಡಕ್ಕೆ ಕಂಚಿನ ಪದಕ ಲಭಿಸಿದೆ.

ಕುಸ್ತಿಪಟು ಭಜರಂಗ್ ಪೂನಿಯಾ ನಿರೀಕ್ಷೆಯಂತೆ. ಪುರುಷರ 65 ಕೆ.ಜಿ. ವಿಭಾಗದ ಫ್ರೀಸ್ಟೈಲ್ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದರು ಆದರೆ ಅಝುಬೈರ್ಝಾನ್ನ ಹಾಜಿ ಅಲಿವ್ ಎದುರು 5–12 ರಿಂದ ಸೋತು ಆಗಸ್ಟ್ 7 ರಂದು ಕಂಚಿನ ಪದಕ್ಕಾಗಿ ಸ್ಪರ್ಧಿಸಲಿದ್ದಾರೆ.

ಬೆಂಗಳೂರಿನ ಆಟಗಾರ್ತಿ ಅದಿತಿ ಮಹಿಳಾ ವಿಭಾಗದಲ್ಲಿ ಮೂರು ಸುತ್ತಿನ ಪ್ರದರ್ಶನದಲ್ಲಿ ಅಂಡರ್ 12 ಅಂಕಗಳೊಂದಿಗೆ 2ನೇ ಸ್ಥಾನದಲ್ಲಿದ್ದಾರೆ. ಆಗಸ್ಟ್ 7 ರಂದು ನಾಲ್ಕನೇ ಹಾಗೂ ಕೊನೆಯ ಸುತ್ತು ನಡೆಯಲಿದ್ದು, ಅದಿತಿ ಬೆಳ್ಳಿ ಪದಕ ಗೆಲ್ಲುವುದು ನಿರೀಕ್ಷೆಯಿದೆ.

ಜಾವಲಿನ್ ಥ್ರೋ ವಿಭಾಗದಲ್ಲಿ ಭಾರತದ ಸ್ಪರ್ಧಿ ನೀರಜ್ ಚೋಪ್ರಾ ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ 86.55 ಮೀಟರ್ ಎಸೆಯುವ ಮೂಲಕ ಫೈನಲ್ ಪ್ರವೇಶಿಸಿದ್ದಾರೆ. ಅಥ್ಲೇಟಿಕ್ಸ್‌ನ ವಿಭಾಗದಲ್ಲಿ ಭಾರತಕ್ಕೆ ಪದಕ ಸಾಧ್ಯತೆ ಇದೆ. ಆಗಸ್ಟ್ 7 ರಂದು ಫೈನಲ್ ಪಂದ್ಯ ನಡೆಯಲಿದೆ. ಎರಡು ಗುಂಪುಗಳ ವಿಭಾಗದಲ್ಲಿ ಅತಿ ಹೆಚ್ಚಿನ ದೂರ ಎಸೆತದಲ್ಲಿ ನೀರಜ್ ಚೋಪ್ರಾ ಮೊದಲ ಸ್ಥಾನದಲ್ಲಿದ್ದಾರೆ.

ಪದಕ ಗಳಿಸಲು ಸಾಧ್ಯವಾಗದಿದ್ದರೂ ಮಹಿಳಾ ಹಾಕಿ ತಂಡ ಸೇರಿದಂತೆ ಈ ಕೆಳಗಿನ ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ



ಹಾಕಿ ಮಹಿಳಾ ವಿಭಾಗ

ಮಹಿಳಾ ಹಾಕಿ ವಿಭಾಗದಲ್ಲಿ ಕಂಚಿನ ಪದಕದ ಪಂದ್ಯದಲ್ಲಿ ಬ್ರಿಟನ್ ಎದುರು 3–4 ಗೋಲುಗಳೊಂದಿಗೆ ಸೋತು ನಾಲ್ಕನೇ ಸ್ಥಾನಕ್ಕೆ ಪಡೆದರೂ ಇದು ಭಾರತಕ್ಕೆ ಒಂದು ಐತಿಹಾಸಿಕ ಸಾಧನೆ.

ಮೇರಿಕೋಮ್

ಬಾಕ್ಸಿಂಗ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕೊಲಂಬಿಯಾದ ವೇಲೆಂಶಿಯ ಎಂಬ ಬಾಕ್ಸರ್ಗೆ ಭಾರೀ ಪೈಪೋಟಿ ನೀಡಿ 2–3 ಅಂಕಗಳಿಂದ.

ಅಮಿತ್ ಪಂಗಲ್

ಪುರುಷರ ಬಾಕ್ಸಿಂಗ್ 52 ಕೆ.ಜಿ. ವಿಭಾಗದ ಪ್ರೀಕ್ವಾಟರ್ ಫೈನಲ್ಸ್ ವಿಭಾಗದಲ್ಲಿ 1–4 ರಿಂದ ಕೊಲಂಬಿಯಾದ ಯುಬರ್ಜೆನ್ಮಾರ್ಟಿನೆಜ ವಿರುದ್ಧ.

ಪೂಜಾರಾಣಿ

ಮಹಿಳೆಯರ ಬಾಕ್ಸಿಂಗ್ 75 ಕೆ.ಜಿ. ಮಿಡ್ಲ್‌ವೇಟ್ವಿ ಭಾಗದ ಕ್ವಾರ್ಟರ್ ಫೈನಲನಲ್ಲಿ ಚೀನಾದ ಚಿಯಾನ್ಲೀ ವಿರುದ್ಧ0–5 ಅಂತರದಲ್ಲಿ.

ವಿನೇಶಾ ಫೊಗಾಟ್

53 ಕೆ.ಜಿ. ವಿಭಾಗದ ಕ್ವಾರ್ಟರ್ ಫೈನಲ್ ನಲ್ಲಿ ಬೆಲಾರಸ್ ವನೆಸಾಕಲಾದಿಜಿಂಕ್ಯಾ ಎದುರು 3–9 – ಅಂಕಗಳ ಅಂತರ.

ಕಮಲ್ಪ್ರೀತ್ ಕೌರ್

ಮಹಿಳಾ ಡಿಸ್ಕಸ್ಥ್ರೋನಲ್ಲಿ ವಿಭಾಗದಲ್ಲಿ ಅಂತಿಮ ಹಂತದ ಸ್ಪರ್ಧೆಯಲ್ಲಿ ಕಮಲ್ಪ್ರೀತ್ ಕೌರ್ ಅಥ್ಲೆಟಿಕ್ಸ್ನಲ್ಲಿ ಫೈನಲ್ ತಲುಪುವ ಮೂಲಕ ಇತಿಹಾಸ ನಿರ್ಮಿಸಿದರು. 63.70 ಮೀಟರ್ ಎಸೆತದೊಂದಿಗೆ ಆರನೇ ಸ್ಥಾನಗಳಿಸಿದರು.

ದೀಪಕ್ ಪೂನಿಯಾ

ಪುರುಷರ ಕುಸ್ತಿಯ 86 ಕೆಜಿ ವಿಭಾಗದಲ್ಲಿ ಸೆಮಿಫೈನಲ್ ವರೆಗೆ ಬಂದು ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಸ್ಯಾನ್ಮಾರಿನೋಸ್ ನಮ್ಮೈಲ್ನಝೀಮ್ ಅಮೀನ್ ಅವರೆದುರು ಸೋಲು

ಅತನುದಾಸ್

ಬಿಲ್ಗಾರಿಕೆ (ಅರ್ಚರಿ) ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರೀಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜಪಾನ್ ನ ತಕಹರುಪುರುಕವಾ ಅವರ ವಿರುದ್ಧ4–6 ಅಂತರದಿಂದ..

ದೀಪಿಕಾ ಕುಮಾರಿ

ಬಿಲ್ಗಾರಿಕೆ (ಅರ್ಚರಿ) ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್‌ನಲ್ಲಿ. ದಕ್ಷಿಣ ಕೊರಿಯಾದ ಆನ್ ಸಾನ್ರಿಂದ 0–6 ಅಂತರದಲ್ಲಿ.

ದ್ಯುತಿಚಂದ್

ಮಹಿಳೆಯರ 200 ಮೀಟರ್ಹೀಟ್–4 ರಲ್ಲಿ ಸೆಮಿಫೈನನ್ ಪ್ರವೇಶಿಸಲಾಗಲಿಲ್ಲ.



ದೀಪಿಕಾ ಕುಮಾರಿ–ಪ್ರವಿಣ್ ಜಾಧವ್

ಆರ್ಚರಿ ಮಿಶ್ರ ಡಬಲ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ನಲ್ಲಿ ದಕ್ಷಿಣ ಕೊರಿಯಾ ಎದುರು. 2–6 ರಲ್ಲಿ.

ಮಹಮ್ಮದ್ ಅನಸ್ಯಾಹಿಯ, ನೋಹ್ನಿರ್ಮಲ್ ಟಾಮ್, ಆರೋಕ್ಯರಾಜೀವ್ಮತ್ತು ಅಮೋಜ್ ಜೇಕಬ್ 4x400 ಪುರುಷರ ರಿಲೇಯಲ್ಲಿ ಹೊಸ ಏಷ್ಯನ್ ದಾಖಲೆ ನಿರ್ಮಿಸಿದ್ದಾರೆ. ಆದರೆ ತುಸು ಅಂತರದಲ್ಲಿ ಫೈನಲ್‌ಗೆ ಅರ್ಹತೆ ತಪ್ಪಿಹೋಗಿದೆ. ಒಟ್ಟಾರೆಯಾಗಿ 16 ತಂಡಗಳಲ್ಲಿ ಭಾರತ 9ನೇ ಸ್ಥಾನ ಪಡೆದಿದೆ.

ಅರ್ಜುನ್ಲಾಲ್ಜಾಟ್ ಹಾಗೂ ಅರವಿಂದ್‌ಸಿಂಗ್

ರೋಯಿಂಗ್ ನ ಪುರುಷರ ಡಬಲ್ ಸ್ಕಲ್ಸ್ ವಿಭಾಗದಲ್ಲಿ ಈ ಜೋಡಿಯು ಎರಡನೇ ಸೆಮಿಫೈನಲ ನಲ್ಲಿ ಆರನೇ ಸ್ಥಾನ ಗಳಿಸಿತು. ಎರಡು ಸೆಮಿಫೈನಲ್‌ಗಳಲ್ಲಿ ತಲಾ ಆರು ಜೋಡಿಗಳು ಸ್ಪರ್ಧಿಸುತ್ತವೆ. ಎರಡರಲ್ಲಿಯೂ ಮೊದಲ ಮೂರು ಸ್ಥಾನಗಳಿಸುವ ಜೋಡಿಗಳು ಫೈನಲ್ ಪ್ರವೇಶಿಸುತ್ತವೆ. ಎರಡನೇ ಸೆಮಿಫೈನಲ್‌ನಲ್ಲಿ ಕೊನೆಯ ಸ್ಥಾನಗಳಿಸಿದರೂ ಒಲಿಂಪಿಕ್ ಇತಿಹಾಸದಲ್ಲಿ ಭಾರತದ ಜೋಡಿಯಿಂದ ದಾಖಲಾದ ಅತ್ಯುತ್ತಮ ಸಾಧನೆ ಇದಾಗಿದೆ.

ಟೇಬಲ್ ಟೆನಿಸ್ ಹಾಗೂ ಬ್ಯಾಡ್ಮಿಂಟನ್ ನಲ್ಲಿ ಭಾರತ ಮಿಶ್ರಫಲ ಅನುಭವಿಸಿತು. ಟೇಬಲ್ ಟೆನಿಸ್ ಮಿಶ್ರಡಬಲ್ಸ್ ನಲ್ಲಿ ಮನಿಕಾಬಾತ್ರಾ ಹಾಗೂ ಶರತ್ ಕಮಲ್ ಜೋಡಿ ಮೊದಲ ಸುತ್ತಿನಲ್ಲಿ ಸೋತರೆ, ಮಹಿಳಾ ಸಿಂಗಲ್ಸ್ ನಲ್ಲಿ ಮನಿಕಾ ಹಾಗೂ ಸುತೀರ್ಥ ಮುಖರ್ಜಿ ಇಬ್ಬರೂ 2ನೇ ಸುತ್ತಿಗೆ ಪ್ರವೇಶಿಸಿದ್ದಾರೆ.

ಸಂಗ್ರಹ: ವಿನೋದ ಶ್ರೀರಾಂಪುರ

ಭಾರತ ಒಲಿಂಪಿಕ್ಸ್ ನಲ್ಲಿ ವಿಶ್ವಗುರು ಆದೀತೆ?......... ಪುಟ 9 ರಿಂದ

ಸ್ಪರ್ಧೆಗಳನ್ನು ಏರ್ಪಡಿಸದೆ, ಅಂತರ್ರಾಷ್ಟ್ರೀಯ ಮಟ್ಟದ ಅತ್ಯುತ್ತಮ ಆಟಗಾರರನ್ನು ಪಡೆಯುವುದು ಸಾಧ್ಯವಿಲ್ಲ. ಈ ಎಲ್ಲಾ ಕ್ರೀಡಾ ಸಂಸ್ಥೆಗಳಲ್ಲಿ ಪ್ರಾಮಾಣಿಕ ಮಾಜಿ ಕ್ರೀಡಾಪಟುಗಳು, ಕೋಚ್ ಗಳು, ದಕ್ಷ ಆಡಳಿತಗಾರರನ್ನು ತರುವುದುಮತ್ತು ಕೆಳ ಹಂತಗಳಿಗೆ ವಿಸ್ತರಿಸುವುದು ಅಗತ್ಯ.

1950–80ರ ದಶಕದ ವರೆಗೆ ಸಾರ್ವಜನಿಕ ಉದ್ಯಮಗಳು, ರೈಲ್ವೇ, ಕೆಲವು ದೊಡ್ಡ ಖಾಸಗಿ (ಟಾಟಾ ಇತ್ಯಾದಿ) ಉದ್ಯಮಗಳು ಆಟೋಟಗಳಿಗೆ ಪೂರ್ಣ ಉತ್ತೇಜನ ಕೊಟ್ಟವು. ಶಿಕ್ಷಣದಲ್ಲಿ ಅಥವಾ ಉದ್ಯಮದ ಒಳಗಿನ ಸ್ಪರ್ಧೆಗಳಲ್ಲಿ ಉತ್ತಮ ಪ್ರತಿಭೆ ತೋರಿದವರನ್ನು ಆಯ್ಕೆ ಮಾಡಿ ಉದ್ಯೋಗ ಭದ್ರತೆ ಕೊಟ್ಟು ಉತ್ತೇಜನ ಕೊಟ್ಟರು. ರಾಷ್ಟ್ರೀಯ ಕ್ರೀಡಾಪಟುಗಳು, ತಂಡದ ಸದಸ್ಯರು ಇಂತಹ ಉದ್ಯಮಗಳಿಂದ ಬಂದವರೇ ಹೆಚ್ಚಿಗಿದ್ದರು. ಈ ಉದ್ಯಮಗಳೇ ಸಂಪನ್ಮೂಲ ಕೊರತೆ, ಉದ್ಯೋಗ ನಷ್ಟಗಳಿಂದಾಗಿ ಇದು ಸಹ ಕುಂಠಿತವಾಗುತ್ತಾ ಬಂದಿದೆ. ಆದರೆ ಇದು ಚೆನ್ನಾಗಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ಸಹ ನಮ್ಮ ಆಟೋಟಗಳ ಕ್ಯಾಚ್ ಮೆಂಟ್ ಏರಿಯಾ ಸೀಮಿತವಾಗೇ ಇತ್ತು. ಉಳಿದ ಇತ್ತೀಚಿನ ವೈಯಕ್ತಿಕ ಪದಕ ವಿಜೇತರು ತಮ್ಮದೇ ಆಸಕ್ತಿ, ಹೂಡಿಕೆ ಮಾಡಿ (ಉದಾ: ಬಿಂದ್ರಾ, ಸಿಂಧು) ಅಥವಾ ಖಾಸಗಿ ತರಬೇತಿ ಸಂಸ್ಥೆಗಳಲ್ಲಿ ಸ್ವಂತ ಆಸಕ್ತಿಯಿಂದ ತರಬೇತಿ ಪಡೆದು ಸಾಧನೆ ಮಾಡಿದವರು ಎಂದು ಗಮನಿಸಬೇಕು. ಸರಕಾರದ, ಸಮಾಜದ ಪಾತ್ರ ಹೆಚ್ಚೇನಿಲ್ಲ. ಪದಕ ಗೆದ್ದಾಗ ದೊಡ್ಡ ಮೊತ್ತದ ಬಹುಮಾನ ಘೋಷಿಸುವುದು ಮಾತ್ರ ತಮ್ಮ ಜವಾಬ್ದಾರಿ ಎಂದು ಕೇಂದ್ರ/ರಾಜ್ಯ ಸರಕಾರಗಳು ತಿಳಿದಂತಿವೆ. ಇದು ಮೂರ್ಖತನದ ಪರಮಾವಧಿ. ಇದಲ್ಲದೆ ನವ–ಉದಾರವಾದಿ ಧೋರಣೆ/ನೀತಿಯ ಪ್ರಕಾರ ಉತ್ತಮ ಪ್ರತಿಭೆ ಇರುವವರಿಗೆ ಖಾಸಗಿ ಪ್ರಾಯೋಜಕರು ಉತ್ತೇಜನ ಕೊಡುತ್ತಾರೆ ಎಂದು ಅವರು ಅಂದುಕೊಂಡಿದ್ದಾರೆ. ಆ ನೀತಿ ಮುಂದುವರೆದರೆ ಭಾರತ ಎರಡಂಕಿ ಪದಕಗಳನ್ನು ಮುಟ್ಟುವುದು ಕನಸಿನ ಮಾತೇ ಆದೀತು.

ಇದನ್ನು ವ್ಯಾಪಕಗೊಳಿಸಲು ಶಿಕ್ಷಣ ವ್ಯವಸ್ಥೆಯಲ್ಲಿ ಮೇಲೆ ಹೇಳಿದ ಸಮಗ್ರ ಕ್ರೀಡಾ ನೀತಿಯನ್ನು ಜಾರಿಗೆ ತರದೆ ಬೇರೆ ದಾರಿಯಿಲ್ಲ.ಇಲ್ಲೂ ಈಗ ನಮ್ಮ ಶಿಕ್ಷಣ ಸಂಸ್ಥೆಗಳ ಕ್ರೀಡಾ (ಏಕೆ ಯಾವುದೇ) ಮೂಲ ಸೌಕರ್ಯದ – ಆಟೋಟ ಉಪಕರಣಗಳು, ಮೈದಾನ, ತರಬೇತಿದಾರರು ಇತ್ಯಾದಿ – ದುಸ್ಥಿತಿ ಶಾಲೆಯಲ್ಲಿರುವ ನಮ್ಮ ವಿದ್ಯಾರ್ಥಿಗಳ ದೊಡ್ಡ ವಿಭಾಗವನ್ನು ಕ್ರೀಡಾರಂಗದಿಂದ ವ್ಯವಸ್ಥಿತವಾಗಿ ಹೊರಗಿಡುತ್ತಿದೆ. ಬಡತನ, ಹಸಿವು, ಅಪೌಷ್ಟಿಕತೆಯಿಂದ ಇನ್ನೂ ದೊಡ್ಡ ವಿಭಾಗ ಹೊರಗುಳಿದಿದೆ. ಈ ಹೊರಗುಳಿಯುವಿಕೆಯನ್ನು ಹೋಗಲಾಡಿಸಲು ಕ್ರೀಡೆಯನ್ನು ಒಳಗೊಂಡ ಸಮಾನ ಉಚಿತ ಸಾರ್ವತ್ರಿಕ ಶಾಲಾ ಶಿಕ್ಷಣ ಇದಕ್ಕೆ ಅಗತ್ಯ.

ಜಾತಿ, ಅಸ್ಪೃಶ್ಯತೆ, ವರ್ಗ, ಬುಡಕಟ್ಟು, ಧರ್ಮ ಮುಂತಾದ ಕಾರಣಗಳಿಗೆ ಕ್ರೀಡಾರಂಗದಿಂದ ಹೊರಗುಳಿದಿರುವವರನ್ನು ತರಲು ವಿಶೇಷ ಪ್ರಯತ್ನ ಮಾಡಬೇಕು. ತಲೆತಲಾಂತರಗಳಿಂದ ಬಂದಿರುವ ಸಮಾಜದಲ್ಲಿ ಉಳಿದು ಬೆಳೆದಿರುವ ಈ ಹೊರಗುಳಿಯುವಿಕೆ ಹೋಗುವ ವರೆಗೆ ಕಾಯುವ ಅಗತ್ಯವಿಲ್ಲ. ಇಲ್ಲಿ ಅಮೆರಿಕ, ಪಶ್ಚಿಮ ಯುರೋಪಿನ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ಶೈಕ್ಷಣಿಕವಾಗಿ, ಉದ್ಯೋಗದಲ್ಲಿ ಸಾಂಸ್ಥಿಕವಾಗಿ ಹೊರಗುಳಿದಿರುವ ಕರಿಯರು ಮತ್ತು ವಲಸೆಗಾರರನ್ನು ಕ್ರೀಡಾಪುಟಗಳ ಆಯ್ಕೆಯಲ್ಲಿ, ತರಬೇತಿಯಲ್ಲಿ ವಿಶೇಷ ಪ್ರಯತ್ನ ಮಾಡಿ ಸೇರಿಸಲಾಗಿದೆ. ಇದು ಅವರಿಗೆ ಒಲಿಂಪಿಕ್ಸ್ ಮತ್ತು ಅಂತರ್ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಅವರ ಪೈಪೋಟಿಯನ್ನು ತೀವ್ರ ಗೊಳಿಸಿದೆ.

ಶಿಕ್ಷಣ ಪಡೆದ ಅಥವಾ ಅರೆಬರೆ ಪಡೆದ ಅಥವಾ ವಂಚಿತರಾದ, ಆದರೆ ಸದೃಢ ಕಾಯದ ಸಮರ್ಥ ಯುವಜನರನ್ನು ಕ್ರೀಡೆಯಲ್ಲಿ ತೊಡಗಿಸುವುದು ಸಾಧ್ಯವಾಗಬೇಕು. ಯುವಜನ ಮತ್ತು ಕ್ರೀಡಾ ಅಭಿವೃದ್ಧಿ ಇಲಾಖೆಗಳಿಗೆ ಈ ಉದ್ದೇಶವಿದ್ದರೂ ಅವು ವಿಫಲವಾಗಿವೆ. ಅವನ್ನು ಸಕ್ರಿಯಗೊಳಿಸಬೇಕು. ಸಮಗ್ರ ರಾಷ್ಟ್ರೀಯ ಕ್ರೀಡಾ ನೀತಿಯ ಜಾರಿಗೆ ಒತ್ತಡ ತರಬೇಕು.

ಇದರರ್ಥ ಒಲಿಂಪಿಕ್ಸ್ ಪದಕ ಗೆಲ್ಲುವುದು ಅದರಷ್ಟಕ್ಕೆ ಮಹಾನ್ ಉದ್ದೇಶವೆಂದಲ್ಲ. ಆದರೆ ರಾಷ್ಟ್ರೀಯ ಕ್ರೀಡಾ ನೀತಿಯ ಜಾರಿಯ ಪ್ರಕ್ರಿಯೆಯೇ, ಆರೋಗ್ಯಕರ ಸದೃಢ ಸ್ವಾಭಿಮಾನಿ ಜನತೆಯ ಮತ್ತು ರಾಷ್ಟ್ರದ ನಿರ್ಮಾಣಕ್ಕೆ ನಾಂದಿಯಾದೀತು.

JANASHAKTHI KANNADA VARA PATRIKE August 9-15, 2021 Price: Rs. 10/- Date of Publication: 6 August 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21



ಟೋಕಿಯೋ ಒಲಿಂಪಿಕ್ಸ್: ಭಾರತಕ್ಕೆ ಮೊದಲ ಪದಕ ಬೆಳ್ಳಿ ಪದಕ ಗೆದ್ದ ಸೈಕೋಮ್ ಮೀರಾಬಾಯಿ ಚಾನು

ಗುರುರಾಜ ದೇಸಾಯಿ

ಟೋಕಿಯೊ ಒಲಿಂಪಿಕ್ಸ್ –2020ರಲ್ಲಿ ಭಾರತದ ಪದಕ ಬೇಟೆಯ ಅಭಿಯಾನ ಆರಂಭವಾಗಿದೆ. ಜಪಾನ್ ನ ಟೋಕಿಯೊ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ನಡೆದ ಮಹಿಳಾ 49 ಕೆಜಿ ವಿಭಾಗದಲ್ಲಿ ವೇಟ್ ಲಿಫ್ಟರ್ ಸೈಖೋಮ್ ಮೀರಾಬಾಯಿ ಚಾನು ಬೆಳ್ಳಿ ಪದಕ ಗೆದ್ದಿದ್ದಾರೆ.

ಭಾರತದ ಏಕೈಕ ವೇಟ್‌ಲಿಫ್ಟರ್ ಸೈಕೋಮ್ ಮೀರಾಬಾಯಿ ಚಾನು ದೇಶಕ್ಕೆ ಮೊದಲ ಪದಕ ಗೆದ್ದು ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ದೇಶದ ಅತ್ಯುನ್ನತ ಕ್ರೀಡಾ ಪ್ರಶಸ್ತಿಗೆ ಭಾಜನರಾದ ಮೀರಾಬಾಯಿ ಚಾನು, ಕರ್ಣಂ ಮಲ್ಲೇಶ್ವರಿ ಬಳಿಕ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಎರಡನೇ ಭಾರತೀಯ ವೇಟ್‌ಲಿಫ್ಟರ್ ಎನ್ನುವ ಕೀರ್ತಿಗೆ ಭಾಜನರಾಗಿದ್ದಾರೆ. ಮೀರಾಬಾಯಿ ಸಾಧನೆಗೆ ದೇಶಾದ್ಯಂತ ಅಭಿನಂದನೆಗಳ ಮಹಾಪೂರವೇ ಹರಿದು ಬಂದಿದೆ.

ಸ್ನ್ಯಾಚ್ ಹಾಗೂ ಕ್ಲೀನ್ ಅಂಡರ್ ಜರ್ಕ್ ವಿಭಾಗದಲ್ಲಿ ಒಟ್ಟು 202 ಕೆಜಿ ಬಾರ ಎತ್ತಿ ಚಾನು ರಜತ ಪದಕಕ್ಕೆ ಕೊರಳೊಡ್ಡಿದ್ದಾರೆ. ಚೀನಾದ ಹ್ಯೂ ಜಿಹೈ ಒಟ್ಟು 210 ಕೆ.ಜಿ ವೇಟ್‌ಲಿಫ್ಟ್ ಮಾಡುವ ಮೂಲಕ ಚಿನ್ನದ ಪದಕಕ್ಕೆ ಕೊರಳೊಡ್ಡಿದರೆ, ಇಂಡೋನೇಷ್ಯಾದ ಕಂಟಿಕ್ ವಿಂಡ್ಯ ಆಯೆಯಾ 194 ಕೆಜಿ ಬಾರ ಎತ್ತುವ ಮೂಲಕ ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡರು.

ಮೊದಲ ಪ್ರಯತ್ನದಲ್ಲೇ ಇಂಪಾಲ್ ಮೂಲದ ಆಟಗಾರ್ತಿ ಸ್ನ್ಯಾಚ್ ವಿಭಾಗದಲ್ಲಿ 84 ಕೆ.ಜಿ ಭಾರವನ್ನು ಮೀರಾಬಾಯಿ ಚಾನು ಅನಾಯಾಸವಾಗಿ ಎತ್ತುವಲ್ಲಿ ಯಶಸ್ವಿಯಾದರು. ಇದಾದ ಬಳಿಕ 87 ಕೆ.ಜಿ. ವೇಟ್ ಲಿಫ್ಟ್ ಮಾಡುವ ಸ್ನ್ಯಾಚ್ ಲಿಫ್ಟ್ ವಿಭಾಗದಲ್ಲಿ ಎರಡನೇ ಸ್ಥಾನ ಪಡೆದರು. ಇನ್ನು ಚೀನಾದ ಹ್ಯೂ ಜಿಹೈ 94 ಕೆ.ಜಿ ವೇಟ್‌ಲಿಫ್ಟ್ ಮಾಡುವ ಮೂಲಕ ಒಲಿಂಪಿಕ್ಸ್ ದಾಖಲೆ ಬರೆದಿದ್ದಾರೆ.

ಟೋಕಿಯೋ ಒಲಿಂಪಿಕ್ಸ್‌ಗೂ ಮುನ್ನ ತಾಷ್ಕೆಂಟ್‌ನಲ್ಲಿ ನಡೆದ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲಿ ಮೀರಾಬಾಯಿ ಚಾನು 119 ಕೆ.ಜಿ ಭಾರ ಎತ್ತುವ ಮೂಲಕ ವಿಶ್ವದಾಖಲೆ ನಿರ್ಮಿಸಿದ್ದರು.



ಒಲಂಪಿಕ್ಸ್: ಭಾರತಕ್ಕೆ ಮತ್ತೊಂದು ಪದಕ– ಬಾಕ್ಸರ್ ಲವ್ಲಿನಾಗೆ ಒಲಿದ ಕಂಚು

ಟೊಕಿಯೊ ಒಲಂಪಿಕ್ಸ್ ಕ್ರೀಡಾ ಕೂಟದಲ್ಲಿ ಭಾರತದ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರು ಕಂಚಿನ ಪದಕವನ್ನು ಪಡೆಯುವ ಮೂಲಕ ಭಾರತಕ್ಕೆ ಮೂರನೇ ಪದಕ ಲಭಿಸುವಂತೆ ಮಾಡಿದ್ದಾರೆ. ಇಂದಿನ ಬಾಕ್ಸಿಂಗ್‌ನ ಸೆಮಿ ಫೈನಲ್ ಪಂದ್ಯದಲ್ಲಿ ಟರ್ಕಿಯಾದ ಬುಸೆನಾಜ್ ಸುರ್ಮೆನೆಲಿ ವಿರುದ್ಧ 5–0 ಅಂತರದಲ್ಲಿ ಸೋಲುವುದರೊಂದಿಗೆ ಕಂಚಿನ ಪದಕ ಪಡೆಯಲು ಸಾಧ್ಯವಾಗಿದೆ.

ಮಹಿಳಾ ಬಾಕ್ಸಿಂಗ್‌ನ 69 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತೆ ಟರ್ಕಿಯ ಬುಸೆನಾಜ್ ಸುರ್ಮೆನೆಲಿ ವಿರುದ್ಧ 23 ವರ್ಷದ ಲವ್ಲಿನಾ ಹೋರಾಟ ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಾಗಲಿಲ್ಲ. ಬುಸೆನಾಜ್ ಅವರ ಆಕ್ರಮಣಕಾರಿ ಆಟಕ್ಕೆ ಸೋಲು ಅನುಭವಿಸಿದರು. ಆಗಲೇ ಸೆಮಿಫೈನಲ್‌ಗೆ ಪ್ರವೇಶಿಸುವ ಮೂಲಕ ಕನಿಷ್ಠ ಕಂಚಿನ ಪದಕ ಖಾತ್ರಿಪಡಿಸಿದ್ದ ಲವ್ಲಿನಾ, ಚಿನ್ನದ ಪದಕ ಗುರಿಯನ್ನಿರಿಸಿದ್ದರು. ಆದರೆ ಅಂತಿಮ ನಾಲ್ಕರ ಘಟ್ಟದಲ್ಲಿ ಎಡವಿದರು.

ಇದಕ್ಕೂ ಮುನ್ನ ನಡೆದ ಕ್ವಾರ್ಟರ್ ಫೈನಲ್ ಪಂದ್ಯದ ಮಹಿಳಾ ಬಾಕ್ಸಿಂಗ್‌ನಲ್ಲಿ ವಾಲ್ಟರ್ ಬೆಲ್ಟ್ 64 ರಿಂದ 69 ಕೆಜಿ ವಿಭಾಗದಲ್ಲಿ ಚೈನಾದ ತೈಪೆಯ ಮಾಜಿ ಚಾಂಪಿಯನ್ ನಿಯೆನ್ ಚಿನ್ ಚೆನ್ ಅವರ ವಿರುದ್ಧ ಲವ್ಲಿನಾ ಬೊರ್ಗೊಹೈನ್ ಕಾದಾಟ ನಡೆಸಿ ನಾಲ್ಕರ ಘಟ್ಟಕ್ಕೆ ಕಾಲಿಟ್ಟಿದ್ದರು. ಲವ್ಲಿನಾ ಬೊರ್ಗೊಹೈನ್ ಸೋತರೂ ವಿಶೇಷ ಸಾಧನೆ ಮಾಡಿದ್ದಾರೆ. ಬಾಕ್ಸಿಂಗ್‌ನಲ್ಲಿ ಚಿನ್ನದ ಪದಕ ಗೆಲುವಿನ ಸನಿಹಕ್ಕೇರಿದ ಮೊದಲ ಭಾರತೀಯರೆನಿಸಲಿದ್ದಾರೆ.



ಈ ಬಾರಿಯ ಟೋಕಿಯೋ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಈಗಾಗಲೇ ಭಾರತಕ್ಕೆ ಎರಡು ಪದಕ ಲಭಿಸಿದೆ. ಮೊದಲಿಗೆ ವೇಟ್ ಲಿಫ್ಟಿಂಗ್‌ನಲ್ಲಿ ಮೀರಾಬಾಯ್ ಚಾನೂ ಬೆಳ್ಳಿ ಪದಕ ಗೆದ್ದುಕೊಟ್ಟರೆ, ಬ್ಯಾಡ್ಮಿಂಟನ್‌ನಲ್ಲಿ ಪಿ.ವಿ.ಸಿಂಧು ಕಂಚಿನ ಪದಕ ಪಡೆದುಕೊಂಡಿದ್ದರು. ಈಗ ಮೂರನೇ ಪದಕದ ಸಾಧನೆ ಲವ್ಲಿನಾ ಬೊರ್ಗೊಹೈನ್ ಅವರದಾಗಿದೆ. ಭಾರತಕ್ಕೆ ಒಂದು ಬೆಳ್ಳಿ ಹಾಗೂ ಎರಡು ಕಂಚಿನ ಪದಕ ಲಭಿಸಿದೆ. ಪದಕ ಪಟ್ಟಿಯಲ್ಲಿ 62ನೇ ಸ್ಥಾನದಲ್ಲಿ ಭಾರತ ಇದೆ.

ಮೊದಲಿಗೆ ಮುಯಿತ್ಯೆ ಪಟುವಾಗಿದ್ದ ಲವ್ಲಿನಾ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಭಾರತದ ಮೂರನೇ ಬಾಕ್ಸರ್ ಆಗಿದ್ದಾರೆ. ಈ ಹಿಂದಿನ ಒಲಿಂಪಿಕ್ಸ್‌ನಲ್ಲಿ ವಿಜೇಂದರ್ ಸಿಂಗ್ (2008) ಮತ್ತು ಮೇರಿ ಕೋಮ್ (2012) ಭಾರತಕ್ಕೆ ಪದಕವನ್ನು ತಂದವರು.

ಲವ್ಲಿನಾ ಬೋರ್ಗೊಹೈನ್ ಪಂದ್ಯದ ಕಾದಾಟ ಮಾಹಿತಿ ಹೀಗಿದೆ:

ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಜರ್ಮನಿಯ ಅಪೆಜ್ ನಡೈನ್ ವಿರುದ್ಧ 3–2ರಲ್ಲಿ ಗೆಲುವು. ಕ್ವಾರ್ಟರ್ ಫೈನಲ್‌ನಲ್ಲಿ ಚೀನಾ ತೈಪೆಯ ಚೆನ್ ನೀನ್ ಚಿನ್ ವಿರುದ್ಧ 4–1ರಲ್ಲಿ ಜಯ. ಸೆಮಿಫೈನಲ್‌ನಲ್ಲಿ ಸುರ್ಮೆನೆಲಿ ಬುಸೆನಜ್ ವಿರುದ್ಧ 0–5ರಲ್ಲಿ ಸೋಲು.

ಲವ್ಲಿನಾ ಬಗ್ಗೆ ಒಂದಷ್ಟು ಮಾಹಿತಿ

ಪೂರ್ಣ ಹೆಸರು ಲವ್ಲಿನಾ ಬೋರ್ಗೊಹೈನ್ ಆಗಿದೆ. ಜನ್ಮ ದಿನಾಂಕ: ಅಕ್ಟೋಬರ್ 2, 1997 ಮತ್ತು ಹುಟ್ಟಿದ ಸ್ಥಳ ಗೊಲಾಘಾಟ್, ಅಸ್ಸಾಂ ರಾಜ್ಯವಾಗಿದೆ. ಲವ್ಲಿನಾ ಪ್ರಮುಖ ಸಾಧನೆಗಳು 2021ರಲ್ಲಿ ದುಬೈನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು. 2018ರಲ್ಲಿ ನಡೆದ ನೂತನ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು. 2017ರಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು. 2020ರಲ್ಲಿ ಅರ್ಜುನ ಪ್ರಶಸ್ತಿ.

ಕಿಕ್ ಬಾಕ್ಸಿಂಗ್‌ನಲ್ಲಿ ವೃತ್ತಿ ಬದುಕು ಆರಂಭಸಿದ್ದ ಲವ್ಲಿನಾ, 2012ರಲ್ಲಿ ಬಾಕ್ಸಿಂಗ್ ಅಂಗಣಕ್ಕೆ ಕಾಲಿಟ್ಟರು. 2017ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆಲ್ಲುವ ಮೂಲಕ ಮೊದಲ ಬಾರಿ ಖ್ಯಾತಿ ಗಳಿಸಿದರು. ಅಸ್ಸಾಂ ಬಾಕ್ಸರ್, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಂದರ ನಂತರ ಒಂದು ಪದಕವನ್ನು ಗೆಲ್ಲುವುದೊರೊಂದಿಗೆ ಒಲಿಂಪಿಕ್ಸ್‌ನಲ್ಲಿ ಭಾರತದ ಭರವಸೆಯ ಬಾಕ್ಸರ್ ಎನಿಸಿಕೊಂಡಿದ್ದಾರೆ.



ಕುಸ್ತಿ ಕಾದಾಟದಲ್ಲಿ ಹೋರಾಟ: ಬೆಳ್ಳಿಗೆ ಕೊರಳೊಡ್ಡಿದ ರವಿ ಕುಮಾರ್ ದಹಿಯಾ

ಜಪಾನ್: ಟೋಕಿಯೋ ಒಲಿಂಪಿಕ್ಸ್ ನಲ್ಲಿ ನಡೆದ ಕುಸ್ತಿ ವಿಭಾಗದ ಪಂದ್ಯದ ಫೈನಲ್‌ನಲ್ಲಿ ಕಾದಾಟ ನಡೆಸಿದ ಭಾರತದ ಕುಸ್ತಿಪಟು ರವಿಕುಮಾರ್ ದಹಿಯಾ ಬೆಳ್ಳಿ ಪದಕ ಪಡೆಯುವುದರೊಂದಿಗೆ ಸಾಧನೆ ಮಾಡಿದ್ದಾರೆ. ಇಂದು ನಡೆದ ಪುರುಷರ 57 ಕೆ.ಜಿ. ವಿಭಾಗದ ಫೈನಲ್ ಪಂದ್ಯನಲ್ಲಿ ರವಿಕುಮಾರ್ ವಿಶ್ವ ಚಾಂಪಿಯನ್ ಆಗಿರುವ ರಷ್ಯಾದ ಜವೂರ್ ಉಗುವೆ 4–7ರಲ್ಲಿ ಎದುರು ಸೋಲು ಕಂಡರು.

ಒಲಿಂಪಿಕ್ಸ್ ಕುಸ್ತಿಯಲ್ಲಿ ಬೆಳ್ಳಿ ಪದಕ ಗೆದ್ದಿರುವ ರವಿಕುಮಾರ್ ದಹಿಯಾ, ಸುಶೀಲ್ ಕುಮಾರ್ ಸಾಧನೆ ಸರಿಗಟ್ಟಿದ್ದಾರೆ. 2012ರಲ್ಲಿ ಸುಶೀಲ್ ಕುಮಾರ್ ಫೈನಲ್‌ನಲ್ಲಿ ಸೋತು ಬೆಳ್ಳಿ ಪದಕ ಗೆದ್ದಿದ್ದರು. ಸುಶೀಲ್ ಒಟ್ಟು ಎರಡು ಪದಕಗಳ (ಬೆಳ್ಳಿ ಮತ್ತು ಕಂಚು) ಸಾಧನೆ ಮಾಡಿದ್ದರು.

ರವಿ ಕುಮಾರ್ ದಹಿಯಾ ಅವರದು ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುತ್ತಿರುವ ಭಾರತದ ಐದನೇ ಕುಸ್ತಿಪಟು ಎಂಬ ಹೆಗ್ಗಳಿಕೆ ಪಾತ್ರರಾಗಿದ್ದಾರೆ. ಒಟ್ಟಾರೆಯಾಗಿ ಒಲಿಂಪಿಕ್ಸ್ ಕುಸ್ತಿಯಲ್ಲಿ ಭಾರತಕ್ಕೆ ಆರನೇ ಪದಕ ಒಲಿದು ಬಂದಿದೆ.

ರವಿ ಕುಮಾರ್ ದಹಿಯಾ ಹರಿಯಾಣದ ಸೋನಿಪತ್ ಮೂಲದ 23 ವರ್ಷದ ಯುವ ಕುಸ್ತಿಪಟು. ಸೆಮಿಫೈನಲ್‌ನಲ್ಲಿ ಕಝಖಸ್ತಾನದ ನುರಿಸ್ಲಾಮ್ ಸನಯೆವ್ ವಿರುದ್ಧ ಆರಂಭಿಕ ಹಿನ್ನಡೆ ಅನುಭವಿಸಿದರೂ ಭರ್ಜರಿ ಸಾಧನೆ ಮಾಡಿದರು. ಇದರ ಮೂಲಕ ಅವರು ಫೈನಲ್ ಅರ್ಹತೆಗೆ ಮುಂದಾದರು. ಈ ಹಿಂದೆ ಕೊಲಂಬಿಯಾ ಮತ್ತು ಬಲ್ಗೇರಿಯಾದ ಕುಸ್ತಿಪಟುಗಳನ್ನು ಮಣಿಸಿ ಅಂತಿಮ ನಾಲ್ಕರ ಘಟ್ಟ ತಲುಪಿದ್ದವರು ರವಿ ಕುಮಾರ್ ದಹಿಯಾ.

ರವಿ ಕುಮಾರ್ ದಹಿಯಾ ಪ್ರಮುಖ ಸಾಧನೆ

ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕನಿಷ್ಠ ಬೆಳ್ಳಿ ಪದಕ ಖಾತ್ರಿ, 2019ರ ವಿಶ್ವ ಚಾಂಪಿಯನ್‌ಷಿಪ್‌ನ 57 ಕೆಜಿ ವಿಭಾಗದಲ್ಲಿ ಕಂಚು, 2020ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ, 2021ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸ್ವರ್ಣ ಸಾಧನೆ, 2018ರ ಅಂಡರ್ 23 ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ.

ಒಲಿಂಪಿಕ್ಸ್ ಕುಸ್ತಿಯಲ್ಲಿ ಪದಕ ಗೆದ್ದ ಭಾರತೀಯರು:

1952ರಲ್ಲಿ ಕೆ.ಡಿ. ಜಾಧವ್ ಕಂಚು ವಿಜೇತ, 2008ರಲ್ಲಿ ಕಂಚು ಮತ್ತು 2012ರಲ್ಲಿ ಬೆಳ್ಳಿ ಪದಕ ವಿಜೇತ ಸುನಿಲ್ ಕುಮಾರ್, 2012ರಲ್ಲಿ ಕಂಚು ವಿಜೇತ ಯೋಗೇಶ್ವರ್ ದತ್, 2016 ರಲ್ಲಿ ಕಂಚು ವಿಜೇತೆ ಸಾಕ್ಷಿ ಮಲಿಕ್, ಮತ್ತು ಈ ಬಾರಿ ರವಿಕುಮಾರ್ ದಹಿಯಾ ಬೆಳ್ಳಿ ವಿಜೇತ.

ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಎರಡು ಬೆಳ್ಳಿ ಪದಕ ಬಂದಂತಾಗಿದೆ. ಮೀರಾ ಬಾಯಿ ಚಾನು ಮೊದಲಿಗೆ ಬೆಳ್ಳಿ ಪದಕ ಗೆದ್ದಿದ್ದರು. ಇನ್ನು ಕ್ರೀಡಾಕೂಟದಲ್ಲಿ ಭಾರತ ಎರಡು ಬೆಳ್ಳಿ ಮತ್ತು ಮೂರು ಕಂಚು ಸೇರಿ ಒಟ್ಟು ಐದು ಪದಕಗಳನ್ನು ಗೆದ್ದಂತಾಗಿದೆ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**